ಕಲ್ಯಾಣ ಶರಣ

ಸೆಪ್ಟಂಬರ್ 2000
ಬೆಲೆ : 5-00





ದಿನಾಂಕ 4-8-2000ದಂದು ನಡೆದ 805ನೆಯ ಬಸವ ಪಂಚಮಿ ಕಾರ್ಯಕ್ರಮ.
ಬಲದಿಂದ ಎಡಕ್ಕೆ-ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಿರುವ-
ಶರಣೆ. ಶಕುಂತಲಾ ಪುಟ್ಟಸಿದ್ದಪ್ಪ, ಶರಣೆ. ಸುಮತಿ ಗೌಡ. ಪೂಜ್ಯ ಅಲ್ಲಮಪ್ರಭು ಸ್ವಾಮೀಜಿ
ಶರಣ. ಪುಟ್ಟರುದ್ರ, ಪೂಜ್ಯ ಶ್ರೀ ಮಾತಾಜಿಯವರು. ಶರಣ. ಬಿ.ಎಸ್. ಗೌಡ, ಶರಣ. ಹೆಚ್.ಎ.ಶರಣಪ್ಪ.



ಬಸವ ಪಂಚಮಿ ಕಾರ್ಯಕ್ರಮ ಉದ್ಘಾಟನೆ
ಶರಣ. ಡಾ|| ಎಂ.ಸಿ.ಮೋದಿಯವರಿಂದ.
ಶರಣೆ. ದೇವಿಕಾ ಶರಣಪ್ಪ, ಶರಣ.ಬಿ.ಎಸ್.ಗೌಡ, ಪೂಜ್ಯ ಶ್ರೀ ಮಾತಾಜಿಯವರು

★ ಕಲ್ಯಾಣ ಕಿರಣ ★

ಸಂಪುಟ 31 | ಬಸವ ಶಕೆ 867 | ಆಜೀವ ಸದಸ್ಯತ್ವ 500 ರೂ
ಸಂಚಿಕೆ 9 | ಸೆಪ್ಟೆಂಬರ್-2000 | ವಾರ್ಷಿಕ ಚಂದಾ 50/- ರೂ

ಗುರು ಚರಣಕೆ ನುಡಿ ನೈವೇದ್ಯ

ಈ ಬಗೆಯ ನಿಲುವ ಇನ್ನಾವ ಜಂಗಮದೊಳು ಕಾಣೆ
ಬಸವ ಕರುಣೆಯ ಕಿರಣ ಗುರು ಲಿಂಗಾನಂದರಲ್ಲದೆ || ಪ ||
ಹರಿವ ಗಂಗೆಯ ತೆರದಿ ಜಗದ ಬಯಲಲಿ ಚರಿಸಿ
ವರ ಭಕ್ತಿ-ಜ್ಞಾನಗಳ ಬೆಳೆ ತೆಗೆದ ಗುರುವೆ ।
ಬಸವ ಧರ್ಮದ ಪ್ರಭೆಯ ಪುನಃ ಬೆಳಗಿದ ಯೋಗಿ
ಬಸವ ಸಾಮ್ರಾಜ್ಯವನು ಕಟ್ಟಿದ ಮಹತ್ಯಾಗಿ || 1 ||
ಮನುಗೂಳಿಯಲಿ ಜನಿಸಿ ವಿಜಯಪುರದೊಳು ಓದಿ
ಬೆಳಗಾಂವಿಯ ನೆಲದಿ ಪದವಿಯಂ ಪಡೆದು ।
ಧಾರವಾಡದಿ ಜ್ಞಾನ ಸಂಪದವ ಸಂಚಯಿಸಿ
ಚರಿಪ ಮಾರುತವಾಗಿ ಸುಳಿದ ಜ್ಞಾನದಾಸೋಹಿ || 2 ||
ಮಲ್ಲಪ್ಪ ಕಲ್ಲಮ್ಮ ದಂಪತಿಯ ಶಿಶುವಾಗಿ
ಚೆಲುವಿನಾ ಕಾಯವನು ಧರಿಸಿದ ಶಿವದೇಹಿ ।
ಸಂಗಮೇಶನೆಂಬ ದಿವ್ಯ ನಾಮದಿ ಬೆಳೆದು
ಆದೆ ಲಿಂಗಾನಂದ ಬಸವ ಕರುಣೆಯ ಪಡೆದು || 3 ||
ಮಹಿಳಾಗುರು ಪೀಠವಂ ಸ್ಥಾಪಿಸಿದ ಮಹಾಗುರು
ಮಹಮನೆಯ ಆಸರೆಯ ನೀಡಿದ ಕಲ್ಪತರು ।
ಕೂಡಲ ಸಂಗಮದ ಬಸವ ಧರ್ಮದ ಪೀಠ
ಏರಿ ಜಗದ್ಗುರುವಾಗಿ ಬೆಳಗಿದ ಸುವಿರಾಗಿ || 4 ||
ರಾಷ್ಟ್ರಪ್ರೇಮದ ಕಣಿಯೆ ಸತ್ಯನಿಷ್ಠೆಯ ಕಲಿಯೆ
ರಾಷ್ಟ್ರೀಯ ಬಸವ ದಳ ಸ್ಥಾಪಿಸಿದ ತತ್ತ್ವವಾದಿ ।
ಪ್ರವಚನದ ಪಟುವಾಗಿ ಜ್ಞಾನ ನೀಡಿದ ಮೂರ್ತಿ
ವಚನ ವಾಙ್ಮಯ ಕೀರ್ತಿ ಪಸರಿಸಿದ ಗುರುಜ್ಯೋತಿ || 5 ||
ಚೈತನ್ಯ ಚಿಲುಮೆಯೆ ಸತ್ಯ ಚಿಂತನ ನಿಧಿಯೆ
ಜಾತಿವಾದವ ಜರಿದ ವಿಶ್ವಪ್ರೇಮದ ಸುಧೆಯೆ ।
ಶರಣ ಧರ್ಮದ ದಿವ್ಯ ವರರತ್ನ ತಾವು
ಎಂದು ಬಸವಾತ್ಮಜೆಯು ನಿತ್ಯ ನೆನೆಯುವೆ ನಾನು || 6 ||

- ಮಾತಾಜಿ

ಕಲ್ಯಾಣ ಕಿರಣ ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

★ ಕಲ್ಯಾಣ ಕಿರಣ ★

ಸಂಪುಟ 31	ಬಸವ ಶಕೆ 867	ಆಜೀವ ಸದಸ್ಯತ್ವ 500 ರೂ
ಸಂಚಿಕೆ 9	ಸೆಪ್ಟೆಂಬರ್-2000	ವಾರ್ಷಿಕ ಚಂದಾ 50 ರೂ

ಕಿರಣಗನ್ನಡಿ

ಮುಖ ಪುಟ : ಲಿಂ॥ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು
ಕವಚದ 4ನೇ ಪುಟ : ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ



ದಿ. 1-9-2000ದಂದು ಪರಮಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರ 69ನೆಯ ಜಯಂತಿಯು ಒದಗಿ ಬಂದಿದ್ದು ಅಂದು ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬವನ್ನು ಆಚರಿಸಲಾಗುವುದು. ತನ್ನಿಮಿತ್ತ ಕಲ್ಯಾಣ ಕಿರಣದ ಓದುಗರಿಗೆಲ್ಲ ಶುಭ ಹಾರೈಕೆಗಳು. ಮತ್ತು ಎಲ್ಲರೂ ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ ಅಂದು ಸಾಮೂಹಿಕವಾಗಿ ಆಚರಿಸಬೇಕೆಂದು ಕೋರುತ್ತೇವೆ.



ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ದಿ. 1-9-2000ದಂದು 42 ವರ್ಷಗಳನ್ನು ಪೂರೈಸಿ 43ನೆಯ ವರ್ಷಕ್ಕೆ ಪಾದಾರ್ಪಣ ಮಾಡುತ್ತಿರುವ ನಿಮಿತ್ತ ಅವರಿಗೆ ಶುಭಾಶಯಗಳು.

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ಕಲ್ಯಾಣ ಕಿರಣ. DTP : ರಮೇಶ್ ಲಿಂಗಾಯತ

ಸಂಪಾದಕೀಯ-1

ಜಂಗಮತ್ವಕ್ಕೆ ಜೀವ ಕೊಟ್ಟ
ಪೂಜ್ಯ ಲಿಂಗಾನಂದ ಅಪ್ಪಾಜಿ

ಪೂಜ್ಯ ಅಪ್ಪಾಜಿಯವರ ಸಾಧನೆಯ ಮಹತ್ವವನ್ನು ಆಗಾಗ ಚಿಂತಿಸುತ್ತ ಕುಳಿತಾಗ ಆನಂದ ಮತ್ತು ವಿಸ್ಮಯಗಳೆರಡೂ ಉಂಟಾಗುವುದರೊಡನೆ ಜೊತೆಗೆ ಒಂದು ಬಗೆಯ ಖಿನ್ನತೆ, ವ್ಯಥೆ ಆವರಿಸಿಕೊಳ್ಳುತ್ತಿತ್ತು. ನಿಜಕ್ಕೂ ಪೂಜ್ಯ ಅಪ್ಪಾಜಿ ಮಾಡಿದ ಕಾರ್ಯ ಐತಿಹಾಸಿಕ ದಾಖಲೆಯಾಗುವಂಥದು. "ಲಿಂಗಾಯತ ಧರ್ಮ-ಸಮಾಜಗಳ ಇತಿಹಾಸದಲ್ಲಿ ಮೂರನೆಯ ಯುಗವನ್ನು ಅದೂ ಪುನರುತ್ಥಾನ (revival), ಶುದ್ಧೀಕರಣ (purification), ಸೂತ್ರೀಕರಣ (codification)ಗಳನ್ನು ಮಾಡಿದ ಮಹಾಮಹಿಮರು. ಆದರೆ ಅಂಥವರ ವ್ಯಕ್ತಿತ್ವವನ್ನಾಗಲೀ ಕಾರ್ಯಸಾಧನೆಯ ವೈಶಿಷ್ಟ್ಯವನ್ನಾಗಲೀ, ಮಹತ್ವವನ್ನಾಗಲೀ ಅರಿಯದ ದುರ್ದೈವೀ ಸಮಾಜವಿದು. ಪೂಜ್ಯರನ್ನು ಯಾವ ರೀತಿ ಗುರುತಿಸಿ ಗೌರವಿಸಿ, ಸನ್ಮಾನಿಸಬೇಕಿತ್ತೋ ಆ ಕಾರ್ಯವನ್ನು ಲಿಂಗಾಯತ ಸಮಾಜದ ಗಣ್ಯರು ಮಾಡಲಿಲ್ಲ" ಎಂಬ ಕೊರಗು ಆಗಾಗ ಸುಳಿಯುತ್ತಿತ್ತು. ಆದರೆ ಆ ಕೊರಗು ಒಂದು ದಿನ ಕರಗಿ ಹೋಯಿತು.

ದಿ. 12-8-2000ರಂದು **'ಉತ್ಥಾನ'** ಪತ್ರಿಕೆಯ ಏಪ್ರಿಲ್ 2000ರ ಸಂಚಿಕೆ ಓದುತ್ತಿದ್ದೆ. ಅದರಲ್ಲಿ "ದಿವಂಗತ ಶ್ರೀ ಡಾ॥ ಕೇಶವರಾವ ಬಲಿರಾಮ ಹೆಡಗೇವಾರರ ಧ್ಯೇಯದರ್ಶನ" ಎಂಬ ಲೇಖನವನ್ನು ಶ್ರೀ ದತ್ತೋಪಂಥ ಠೇಂಗಡಿ ಎಂಬುವವರು ಬರೆದಿದ್ದು ಬರವಣಿಗೆಯು ಬಹಳ ಅಮೋಘವಾಗಿದೆ. ಶ್ರೀ ಡಾ॥ ಹೆಡಗೇವಾರರು **ರಾಷ್ಟ್ರೀಯ ಸ್ವಯಂ ಸೇವಕ ಸಂಘ**ದ ಸಂಸ್ಥಾಪಕರು. ಅವರು ಕೀರ್ತಿ, ಪ್ರಚಾರಕ್ಕೆ ಗಮನ ಕೊಡದೆ ತತ್ತ್ವ, ಧ್ಯೇಯ ಆದರ್ಶಗಳಿಂದ ಕೂಡಿದ ಜನಾಂಗ ನಿರ್ಮಾಣದ ಕಡೆಗೆ ಲಕ್ಷ್ಯವಿಟ್ಟರು ಎಂಬುದನ್ನು ಹೇಳುತ್ತ ಲೇಖಕರು ಒಂದು ಪ್ರಸಂಗವನ್ನು ವಿವರಿಸುತ್ತಾರೆ. ಓರ್ವ ಕಮ್ಯುನಿಷ್ಟರು (ಅದರಲ್ಲಿಯೂ ಮಾರ್ಕ್ಸ್‌ವಾದಿ ಕಮ್ಯುನಿಷ್ಟರಿಗೆ ಆರ್.ಎಸ್.ಎಸ್ ಧೋರಣೆ ಎಷ್ಟು ಹಿಡಿಸದು ತಾನೆ ?) ಹೀಗೆ ಅಭಿಪ್ರಾಯಪಡುತ್ತಾರೆ. ದಿವಂಗತ ಪ್ರಧಾನಿ ಜವಾಹರಲಾಲ್ ನೆಹರೂ ಅವರು ರಾಷ್ಟ್ರದ ಉನ್ನತ ಅಧಿಕಾರದಲ್ಲಿ ಇದ್ದವರು ; ಅತ್ಯಂತ ಹೆಚ್ಚಿನ ಪ್ರಚಾರ ಪಡೆದವರು. ಶ್ರೀ ಹೆಡಗೇವಾರ್ ಅವರಿಗೆ ಅಂಥ ಪ್ರಚಾರದಲ್ಲಿ ಆಸಕ್ತಿಯೂ ಇರಲಿಲ್ಲ. ಜೀವಿತಾವಧಿಯಲ್ಲಿ ಹೆಚ್ಚಿನ ಪ್ರಚಾರ ಸಿಕ್ಕಿರಲಿಕ್ಕಿಲ್ಲ. ಆದರೆ ಸ್ವಾತಂತ್ರ್ಯಾ ನಂತರದ ಈ 50 ವರ್ಷಗಳ ಅವಧಿಯಲ್ಲಿ ನೆಹರೂಜಿಯವರಿಗಾಗಿ (ಅವರಿಗೆ ಯಾವುದಾದರೂ ಧ್ಯೇಯಾದರ್ಶ ಇದ್ದು ಅದನ್ನು ಪ್ರತಿಪಾದಿಸಿದ್ದರೆ ಅದಕ್ಕಾಗಿ) ಸಮರ್ಪಿತರಾಗಿ ದುಡಿಯುವವರು ಎಷ್ಟು ಜನ ಇಂದು ಸಿಗುತ್ತಾರೆ ? ಅದೇ ತಮ್ಮ ವೈಯಕ್ತಿಕ ಪ್ರಚಾರ, ಕೀರ್ತಿಗಾಗಿ ಬಯಸದೆ ಒಂದು ಧ್ಯೇಯಕ್ಕಾಗಿ ದುಡಿದು, ಧ್ಯೇಯವಾದಿಗಳನ್ನು ರೂಪಿಸಲು ಶ್ರಮಿಸಿದ ಡಾ॥ ಹೆಡಗೇವಾರರಿಗಾಗಿ ಅಂದರೆ ಅವರು ಪ್ರತಿಪಾದಿಸಿದ ತತ್ತ್ವಕ್ಕಾಗಿ ಸಮರ್ಪಿತರಾಗಿ ದುಡಿಯುವ ಜನ ಇಂದು ಲಕ್ಷ ಲಕ್ಷ! ಇದನ್ನು ಓದಿದಾಗ ಪೂಜ್ಯ ಅಪ್ಪಾಜಿಯವರು ಆಡುತ್ತಿದ್ದ ಎಷ್ಟೋ ಮಾತುಗಳು ನೆನಪಿನ ಪರದೆಯ ಮೇಲೆ ಮೂಡಿನಿಂತವು.

ಬಸವ ಸಂಸ್ಥಾಪಿತ ಲಿಂಗಾಯತ ಧರ್ಮದ ಜನನ ಕಾಲ ಇದರ ಇತಿಹಾಸದಲ್ಲಿ ಅಮೃತ ಘಳಿಗೆ, ಕಲ್ಯಾಣ, ಅನುಭವ ಮಂಟಪ, ಧರ್ಮಪಿತರ ನೇತೃತ್ವ, ಅಲ್ಲಮ ಪ್ರಭು-ಸಿದ್ಧರಾಮ-ಅಕ್ಕ ಇನ್ನಿತರ ಶರಣರ ಆಗಮನ, ವಚನ ಸಾಹಿತ್ಯದ ರಚನೆ ಒಂದೊಂದು ಚೇತೋಹಾರಿ ಪ್ರಸಂಗಗಳು ವರ್ಣಾಂತರ ವಿವಾಹದ ಪ್ರಸಂಗದಿಂದ ಸುಖೀ ಸಂಸಾರದ ವಿಘಟನೆ. ಅದಕ್ಕಾಗಿ ಬಸವ ಸಂತಾನವಾದ ನಮಗೆ

ವಿಷಾದವಿಲ್ಲ. ಹೆಮ್ಮೆ ತುಂಬಿ ತುಳುಕುತ್ತಿದೆ. ಹಿಂದುಸ್ಥಾನದ ಮೊಟ್ಟ ಮೊದಲ ಅಧಿಕೃತ ವರ್ಣಾಂತರ ವಿವಾಹಕ್ಕೆ ಮತ್ತು ಸಮತಾವಾದದ ಧ್ವಜ ಹಾರಾಡಲಿಕ್ಕೆ ಅನುಭವ ಮಂಟಪ ವೇದಿಕೆಯಾಯಿತಲ್ಲ ಎಂಬುದು ನಮಗೆ ಅಭಿಮಾನದ ಸಂಗತಿ. ಆದರೆ ಅಪ್ಪ ಬಸವಣ್ಣನವರ ಗಡಿಪಾರು, ಶರಣರಿಗೆ ಎಳಹೂಟೆ ಮುಂತಾದ್ದು ಸಂಭವಿಸಿದಾಗ ವಚನ ಸಾಹಿತ್ಯವು ಭೂಗತವಾಯಿತು. ಅದು ಪುನರುಜ್ಜೀವನಗೊಂಡುದು 14- 15ನೆಯ ಶತಮಾನದಲ್ಲಿ. ಪುನರುಜ್ಜೀವನದ ಮೊದಲನೆಯ ಯುಗ ಎಂದು ಇದನ್ನು ಗುರುತಿಸಬಹುದಾದರೂ ವಚನ ಸಾಹಿತ್ಯದೊಳಕ್ಕೆ ಶೈವದ ಪ್ರಕ್ರಿಯೆಗಳು, ಆಚಾರ-ವಿಚಾರಗಳೂ ಒಳತೂರಿಸಲ್ಪಟ್ಟು ಆರಂಭದ ಶುದ್ಧಿ ಉಳಿಯಲಿಲ್ಲ. ಹೀಗಾಗಿ ಇದು ಒಂದು ಬಗೆಯ ಪುನರುಜ್ಜೀವನ (revival) ಆದರೂ ಜೊತೆಗೇ ಮಲಿನವೂ ಆಯಿತು ಎಂಬುದು ವಿಷಾದಕರ ಸಂಗತಿ. ತೋಂಟದ ಸಿದ್ಧಲಿಂಗೇಶ್ವರರ ಆಗಮನ ಎರಡನೆಯ ಪುನರುಜ್ಜೀವನದ ಕಾಲ. ಆಗ ಕೇವಲ ಸಾಹಿತ್ಯದ ಸಂಗ್ರಹ. ಸಂಪಾದನೆ ಮಾತ್ರ ಆಗದೆ ಧರ್ಮ ಪ್ರಚಾರವೂ ಆಗಿ ಹೊಸ ಹೊಸ ಪ್ರದೇಶಗಳಿಗೆ ಲಿಂಗಾಯತ ಧರ್ಮವು ಹಬ್ಬಿತು. ಇದು ಗಮನಾರ್ಹ ಸಾಧನೆ. ಪುನಃ ಈ ಪ್ರಚಾರ ಕಾರ್ಯ ಸ್ಥಗಿತಗೊಂಡಿತು. ಪುನರುಜ್ಜೀವನದ ಮೂರನೆಯ ಘಟ್ಟ ಲಿಂಗೈಕ್ಯ ಶರಣ. ಫ.ಗು.ಹಳಕಟ್ಟಿ ಮತ್ತು ಲಿಂಗೈಕ್ಯ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳ ಆಗಮನ. ಇಂದು ಬಸವ ತತ್ತ್ವಕ್ಕೆ ಸೂಕ್ತ ನೆಲೆಯಾಗದೆ ಉಳಿದೆಲ್ಲ ಜಿಲ್ಲೆಗಳಿಗಿಂತ ಬಸವ ತತ್ತ್ವ ಅನುಷ್ಠಾನದಲ್ಲಿ ಬಲು ಹಿಂದುಳಿದ ಜಿಲ್ಲೆಯಾಗಿ ಬಿಜಾಪುರ ಇದ್ದರೂ, ಇದೇ ಜಿಲ್ಲೆಯು ಮೂರು ಮಹಾನ್ ವ್ಯಕ್ತಿಗಳಿಗೆ ಜನ್ಮ ಕೊಟ್ಟಿರುವುದು ಬಹಳ ವಿಶೇಷ.

1. **ಧರ್ಮಪಿತ ಬಸವಣ್ಣನವರು**
2. **ವಚನ ಪಿತಾಮಹ ಲಿಂ || ಶರಣ. ಫ.ಗು.ಹಳಕಟ್ಟಿಯವರು**
3. **\ಪ್ರವಚನ ಪಿತಾಮಹ ಲಿಂ|| ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು.**

ಮನೆಗಳ ದೇವರ ಜಗುಲಿಗಳ ಮೇಲೆ ಕೊಳೆಯುತ್ತಿದ್ದ ವಚನ ಸಾಹಿತ್ಯದ ಕಟ್ಟುಗಳ ಬಂಧನದಿಂದ ಬಸವಾದಿ ಪ್ರಮಥರ ಸಂದೇಶವನ್ನು ಬಿಡುಗಡೆ ಮಾಡಿದ ಮಹಾಪುರುಷರು. ಶರಣ. ಫ.ಗು.ಹಳಕಟ್ಟಿಯವರು. ಲಿಂಗಾಯತ ಧರ್ಮದ ಪುನರುಜ್ಜೀವನದ ಮೂರನೆಯ ಘಟ್ಟದ ಪ್ರಾರಂಭವದು. ಮುಂದೆ ಕರ್ನಾಟಕ ವಿಶ್ವವಿದ್ಯಾಲಯವು ಲಭ್ಯವಾದ ವಚನ ಸಾಹಿತ್ಯ ರಾಶಿಯನ್ನು ಮುದ್ರಿಸಿ ಗುಡ್ಡೆ ಹಾಕಿತು. ವಿಶ್ವವಿದ್ಯಾಲಯದ ಮತ್ತು ಶಿಕ್ಷಿತರ ವಲಯವನ್ನು ದಾಟಲಾರದ ಸ್ಥಿತಿಯಲ್ಲಿದ್ದ ವಚನ ಸಾಹಿತ್ಯವನ್ನು ಪ್ರವಚನದ ಮೂಲಕ ಮನೆಮನೆಗೆ, ಮನಮನಕ್ಕೆ ಹೊತ್ತೊಯ್ದ ಜಂಗಮ ಜ್ಯೋತಿ ಪೂಜ್ಯ ಲಿಂಗಾನಂದ ಅಪ್ಪಾಜಿಯವರು. ಇಂದು ಆ ಪವಿತ್ರ ಕಾರ್ಯ ಬೀರಿರುವ ಪ್ರಭಾವವನ್ನು ನೋಡಿದಾಗ ನಾವು ಪೂಜ್ಯ ಅಪ್ಪಾಜಿಯವರನ್ನು ಕೊಂಡಾಡಬೇಕೋ, ಅವರನ್ನು ಆಯ್ದು ತನ್ನ ಕಾರ್ಯಕ್ಕೆ ಬಳಸಿಕೊಂಡ ಬಸವ ಚೈತನ್ಯವನ್ನು ಕೊಂಡಾಡಬೇಕೋ ಎಂಬ ಆಶ್ಚರ್ಯ ಉಂಟಾಗುತ್ತದೆ. ಏಕೆಂದರೆ, ದಿ. 25 ಏಪ್ರಿಲ್ 1955ರ ಬಸವ ಜಯಂತಿಯಂದು ಬೆಳಗಾವಿಯ ಒಂದು ಕತ್ತಲ ಕೋಣೆಯಲ್ಲಿ ಚಿಂತಾಮಗ್ನನಾಗಿದ್ದ ಸಂಗಮೇಶ ಕಪ್ಪರದರನ್ನು, ಮಾರ್ಕ್ಸ್‌ವಾದಿಯನ್ನು ಅಂದು ಬಸವಣ್ಣನವರು ಆಯ್ದು, ತಮ್ಮ ದಾರಿಗೆ ಸೆಳೆದುಕೊಳ್ಳದಿದ್ದರೆ ಆ ಸಂಗಮೇಶ ಲಿಂಗಾನಂದ ಸ್ವಾಮಿಗಳಾಗದೆ ಓರ್ವ ಕಮ್ಯುನಿಸ್ಟ್ ಲೀಡರ್ ಆಗಿರುತ್ತಿದ್ದರು, ಪಕ್ಷಾಂತರ ಮಾಡಿದ್ದರೆ ರಾಜಕೀಯದಲ್ಲಿ ಒಂದು ಉನ್ನತ ಹುದ್ದೆಗೆ ಏರಿರುತ್ತಿದ್ದರು. ಶಿಕ್ಷಕರಾಗಿಯೇ ಮುಂದುವರಿದಿದ್ದರೆ ನಿವೃತ್ತ ಅಧಿಕಾರಿಯಾಗಿ ಬದುಕು ಸವೆಸಿ, ಕಣ್ಮರೆಯಾಗಿರುತ್ತಿದ್ದರು. ಚಿತ್ತಚೋರ, ಧರ್ಮಪಿತ ಬಸವಣ್ಣನವರ ಚೈತನ್ಯ

ಸುಳಿದಾಡಿ, ಒಂದು ಅನಾಮಿಕ ಚೈತನ್ಯವನ್ನು ತನ್ನ, ಪಥಕ್ಕೆ ಆಕರ್ಷಿಸಿ, ಅನುಗ್ರಹ ತುಂಬಿ, ಸಾಮರ್ಥ್ಯ ನೀಡಿ, ಸಾಧಿಸಿದ್ದು ಎಷ್ಟು ಅಗಾಧ! ಹೀಗಾಗಿ ಧರ್ಮಪಿತರಿಗೆ ಮೊದಲನೆಯ ಕೃತಜ್ಞತೆ ಸಲ್ಲಿಸಿ ನಂತರದ ಶರಣನ್ನು ಪ್ರವಚನ ಪಿತಾಮಹ ಪೂಜ್ಯ ಲಿಂಗಾನಂದ ಅಪ್ಪಾಜಿಗೆ ಸಲ್ಲಿಸೋಣ.

ಪುನರುತ್ಥಾನ

ಶ್ರೀ ನಿಜಗುಣ ಶಿವಯೋಗಿಗಳ ರಚನೆಗಳ ಮೇಲೆ ವೇದಾಂತ ಪರ ಶಾಸ್ತ್ರ (ಪ್ರವಚನ) ಹೇಳುತ್ತಿದ್ದ ಪಂಡಿತರ ಸಂಖ್ಯೆ ವಿಫುಲವಾಗಿತ್ತು. ಅವರು ತಮ್ಮ ವೇದಾಂತ ಶಾಸ್ತ್ರವನ್ನಷ್ಟೇ ಹೇಳಿಕೊಂಡು ಸುಮ್ಮನಿರುತ್ತಿರಲಿಲ್ಲ. ಬಸವಾದಿ ಪ್ರಮಥರ ವಚನ ವಾಙ್ಮಯದ ಬಗ್ಗೆ ನಿರಂತರ ಅಪಪ್ರಚಾರ ಮಾಡುತ್ತಿದ್ದರು. ಶರಣರು ಸಂಕುಚಿತ ಮತಿಗಳೆಂದು, ಇಷ್ಟಲಿಂಗ ಜಾತಿ ಲಾಂಛನವೆಂದು, ವಚನ ಸಾಹಿತ್ಯ ಶಾಸ್ತ್ರವೇ ಅಲ್ಲವೆಂದು, ಸದಾ ವಿಡಂಬನೆ ಮಾಡುತ್ತಿದ್ದರು. ಇದು ಒಂದು ಕಡೆಯಾದರೆ ಲಿಂಗಾಯತ ಸಮಾಜವೋ ಅಜ್ಞಾನದ ಕೆಸರಿನ ಮಡುವಿನಲ್ಲಿ ಸಿಕ್ಕಿ ಒದ್ದಾಡುತ್ತ ಕಂಡಕಂಡ ಮಾರ್ಗಗಳಲ್ಲಿ ಪರದಾಡುತ್ತಿತ್ತು. ಇನ್ನು ಸಂಪ್ರದಾಯ ಮಠಾಧೀಶರು ಜಂಗಮವನ್ನು ಜಾತಿಯಾಗಿ ಮಾಡಿದ್ದಲ್ಲದೆ ತಮ್ಮ ಸ್ವಧರ್ಮದ ವಿಚಾರ-ಆಚಾರಗಳಿಗೆ ವಿರುದ್ಧವಾಗಿ ನಡೆಯುತ್ತ ಪ್ರವಚನಗಳಿಗೆ ಪ್ರತಿರೋಧ ವ್ಯಕ್ತಪಡಿಸುತ್ತ ತಮ್ಮ ಮೂಢಭಕ್ತರನ್ನು ಎತ್ತಿ ಕಟ್ಟುವ ಸನ್ನಿವೇಶ. ಇಂಥ ಕ್ಲಿಷ್ಟಕರ ಸನ್ನಿವೇಶದಲ್ಲಿ ಸ್ವಯಂ ಪ್ರೇರಣೆಯಿಂದ ಜ್ಞಾನ ಸನ್ಯಾಸವನ್ನು ನವೆಂಬರ್ 19, 1956ರಂದು ಸ್ವೀಕರಿಸಿ (ಹಿಂದೆ ಹತ್ತು 1+9, ಮುಂದೆ ಹನ್ನೊಂದು 5+6 ಎಂಬ ಆದಿ ಶರಣರ ಲೆಕ್ಕಾಚಾರ ಗಮನಿಸಿರಿ) ಲಿಂಗಾನಂದ ಸ್ವಾಮಿಗಳಾಗಿ ಹೊರಟ ಸಂಗಮೇಶ್ವರರು ಏಕಾಕಿಯಾಗಿ ಸಂಪ್ರದಾಯದ ವಿರುದ್ಧ ಸಮರ ಸಾರಿದರು. ಅವರಿಗಿದ್ದ ಒಂದು ಶಸ್ತ್ರ-ಪ್ರವಚನ. 'ವಚನ ಶಾಸ್ತ್ರದಲ್ಲಿ ಏನಿದೆ?' ಎಂದು ಮೂಗೆಳೆಯುತ್ತಿದ್ದವರಿಗೆ ''ಇಲ್ಲಿ ಏನಿಲ್ಲ? ಎಲ್ಲವೂ ಇದೆ. ಬದುಕಿಗೆ ಬೇಕಾದ ಸಮಗ್ರ ಮೌಲ್ಯಗಳ ಭಂಡಾರವಿದೆ'' ಎಂಬುದನ್ನು ಸಾರುತ್ತ ಹೊರಟರು. ಪ್ರವಚನ ಕಾಯಕದ ಮೂಲಕ ಬಸವ ಸಾಮ್ರಾಜ್ಯವನ್ನು ಪುನರ್ ಸ್ಥಾಪನೆ ಮಾಡಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು- ಗಳಲ್ಲಿದ್ದ ಲಿಂಗಾಯತ ಧರ್ಮೀಯರನ್ನು ಪುನಃ ಒಟ್ಟುಗೂಡಿಸಿದ ಕ್ರಾಂತಿಕಾರಕ ಧರ್ಮಪ್ರಚಾರಕರು ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳು. ಹೀಗೆ ಶರಣ ಧರ್ಮದ ಪುನರುತ್ಥಾನದಲ್ಲಿ ಬಹಳ ಮಹತ್ವದ ಪಾತ್ರವನ್ನು ಪೂಜ್ಯರು ವಹಿಸಿದರು.

ಶುದ್ಧೀಕರಣ ಮತ್ತು ಸೂತ್ರೀಕರಣ

ಲಿಂಗೈಕ್ಯ ಶರಣ ಫ.ಗು.ಹಳಕಟ್ಟಿಯವರು, ಕರ್ನಾಟಕ ವಿಶ್ವವಿದ್ಯಾಲಯದವರು ವಿಫುಲವಾಗಿ ವಚನ ಸಾಹಿತ್ಯವನ್ನು ಮುದ್ರಿಸಿ ಕೊಟ್ಟಿದ್ದರೂ ಅದು ಶುದ್ಧೀಕರಣಗೊಂಡಿಲ್ಲ, ಸೂತ್ರೀಕರಣಗೊಂಡಿಲ್ಲ ಎಂಬ ಕೊರಗು ಪೂಜ್ಯರದಾಗಿತ್ತು. ಅವರು ಹೇಳುತ್ತಿದ್ದರು, ''ವಚನ ಸಾಹಿತ್ಯವು ಈಗ ಬರೀ ಧಾನ್ಯ ರೂಪದಲ್ಲಿದೆ. ಹೇಗೆ ಧಾನ್ಯಗಳನ್ನು ನೇರವಾಗಿ ಜನರು ತಿನ್ನಲಾರರೋ ಹಾಗೆ ವಚನ ಸಾಹಿತ್ಯವನ್ನು ಜನರು ಅರ್ಥೈಸಲಾರರು. ಇಷ್ಟು ಮಾತ್ರವಲ್ಲ ವಚನ ಸಾಹಿತ್ಯ ಅನುಭವ ಮಂಟಪದ ಕಣದಲ್ಲಿ ರಾಶಿಯಾದಾಗ ಯಾವ ತಾತ್ತ್ವಿಕ ಶುದ್ಧಿಯನ್ನು ಹೊಂದಿತ್ತೋ ಅದನ್ನು ಕಳೆದುಕೊಂಡಿದ್ದು ಶರಣ ಧರ್ಮಕ್ಕೆ ವಿರುದ್ಧವಾದ ನಂಬಿಕೆ, ಆಚಾರ-ವಿಚಾರ ಎಂಬ ಕಸಕಡ್ಡಿ, ಮಣ್ಣಿನ ಹೆಂಟೆ, ಕಲ್ಲಿನ ಚೂರು ಬಂದು ವಚನ ಸಾಹಿತ್ಯದಲ್ಲಿ ಸೇರಿವೆ. ಇದರ ಶುದ್ಧೀಕರಣ ಆಗಬೇಕು ಮಾತ್ರವಲ್ಲ ಇದಕ್ಕೆ ಸೈದ್ಧಾಂತಿಕ ಚೌಕಟ್ಟು ಕೊಡುವ ಸೂತ್ರೀಕರಣ ಸಹ ಆಗಬೇಕು.'' ಎಂದು ಆಗಾಗ ಹೇಳುತ್ತಲೇ ಇದ್ದರು.

ಪೂಜ್ಯ ಅಪ್ಪಾಜಿಯವರು ಬರೆದ ಪುಸ್ತಕ ಕೆಲವೇ ಕೆಲವು. ಆದರೆ ಅವು ಲಿಂಗಾಯತ ಧರ್ಮದ ಅಪೂರ್ವ ಮೈಲಿಗಲ್ಲುಗಳು.

1. ವಚನ ಸಾಹಿತ್ಯದಲ್ಲಿ ಪ್ರತಿಪಾದಿಸಲ್ಪಟ್ಟ ಲಿಂಗಾಯತ ಧರ್ಮದ ದೇವರು, ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನಲ್ಲ, ಬ್ರಹ್ಮಾಂಡದೊಡೆಯನಾದ ದೇವರು ಎಂಬುದನ್ನು ಪ್ರತಿಪಾದಿಸುವ ಪೂಜ್ಯ ಅಪ್ಪಾಜಿಯವರ ಮೊಟ್ಟಮೊದಲ ಪುಟ್ಟ ಪುಸ್ತಕ **"ದೇವರು"** ಒಂದು ಅಮೂಲ್ಯ ಕೃತಿ ಅವರೆಗೂ ದೇವರು ಮತ್ತು ಶಿವನ ಬಗ್ಗೆ ಅಪಾರವಾದ ಗೊಂದಲದಲ್ಲಿದ್ದ ಲಿಂಗಾಯತರು ತಾವು ಶಿವಪೂಜಕರೆಂದೇ ತಿಳಿದಿದ್ದರು.

2. ನಿರಾಕಾರ-ನಿರ್ಗುಣನಾದ ಸೃಷ್ಟಿಕರ್ತ ಲಿಂಗದೇವನ ಕುರುಹು ಇಷ್ಟಲಿಂಗ. ಇದು ಜಾತಿಯ ಕುರುಹಲ್ಲ ಜ್ಯೋತಿಯ ಕುರುಹು. ಇದು ಸ್ಥಾವರಲಿಂಗವಲ್ಲ, ಮೂರ್ತಿಯಲ್ಲ. ಇದು ಕೇವಲ ಶ್ರದ್ಧೆಯ ಪ್ರತೀಕವಲ್ಲ; ಯೋಗ ಸಾಧನೆಗೆ ಸಹಾಯಕ ಮತ್ತು ಜಾತಿ ವರ್ಣ ವರ್ಗರಹಿತ ಶರಣ ಸಮಾಜವನ್ನು ಕಟ್ಟುವ ಗಣಲಾಂಛನ ಎಂಬುದನ್ನು **"ಲಿಂಗತತ್ತ್ವ ದರ್ಪಣ"** ಎಂಬ ಕೃತಿಯಲ್ಲಿ ಪೂಜ್ಯ ಅಪ್ಪಾಜಿ ಪ್ರತಿಪಾದಿಸಿದರು. (ಈಗ ಈ ಪುಸ್ತಕದ ಹೆಸರು ಚುಳುಕಾದ ಚೇತನ).

3. ಅವರವರ ಮಾತೃಭಾಷೆಯಲ್ಲೇ ದೇವರನ್ನು ಆರಾಧಿಸಬೇಕು ಎಂಬ ಬಸವಾದಿ ಪ್ರಮಥರ ಮೂಲ ಸೂತ್ರವನ್ನೇ ಮರೆತ ಲಿಂಗಾಯತ ಮಠಾಧೀಶರು ವೀರಶೈವವಾದಿಗಳಾಗಿ ತಾವು ಪೂಜಿಸುವ ಇಷ್ಟಲಿಂಗಕ್ಕೆ ಸಂಬಂಧಿಸದೆ ಇರುವ ಶ್ಲೋಕಗಳನ್ನು ಮಂತ್ರಗಳನ್ನು ಹೇಳಿಕೊಂಡು ಸಂಸ್ಕೃತದಲ್ಲಿ ಪೂಜಾದಿ ಕ್ರಿಯೆಗಳನ್ನು ಮಾಡುವಾಗ ಈ ತಪ್ಪನ್ನು ಎತ್ತಿ ತೋರಿ, ಅಚ್ಚ ಕನ್ನಡದಲ್ಲಿ, ವಚನಗಳ ಮೂಲಕ ಪೂಜೆ ಮಾಡುವ ವಿಧಾನವನ್ನು ಪೂಜ್ಯ ಗುರುಗಳು **'ಲಿಂಗ ಪೂಜಾ ವಿಧಾನ'** ಎಂಬ ಪುಸ್ತಕದ ಮೂಲಕ ಕಲಿಸಿದರು. (ಈಗ ಈ ಪುಸ್ತಕದ ಹೆಸರು ದೇವ ಪೂಜಾ ವಿಧಾನ).

4. ಈ ಎಲ್ಲ ಜ್ಞಾನವನ್ನು ಸ್ವ-ಅಧ್ಯಯನದಿಂದ ಪೂಜ್ಯ ಗುರುಗಳು ಪಡೆಯುತ್ತ ಸಾಗಿದಾಗ ಈ ಧರ್ಮದ ಸ್ಥಾಪಕರು ಧರ್ಮಗುರು ಬಸವಣ್ಣನವರು ಎಂಬ ಸತ್ಯ ಅವರಿಗೆ ಮನವರಿಕೆ ಆಗತೊಡಗಿತಲ್ಲದೆ, ಲಿಂಗಾಯತವು ಒಂದು ಜಾತಿಯಲ್ಲ ಸ್ವತಂತ್ರ ಧರ್ಮ ಎಂಬ ಅರಿವು ಮೂಡತೊಡಗಿತು.

ಪೂಜ್ಯ ಗುರುಗಳಿಗಾಗಲೀ, ನಮಗಾಗಲೀ ಬಸವಣ್ಣನವರ ಬಗ್ಗೆ ಅಭಿಮಾನ ಇದ್ದಿತಾದರೂ ಈ ಧರ್ಮದ ಜೀವ ಜೀವಾಳ, ಸಾರ್ವಭೌಮ ಧರ್ಮಗುರು ಬಸವಣ್ಣನವರು ಎಂಬುದು ಮನವರಿಕೆಯಾದುದು 1972-73ರ ನಂತರ. ಅಲ್ಲಿಯವರೆಗೂ ಈಗಿನ ಕೆಲವು ಸಾಹಿತಿಗಳಾದ ಡಾ|| ಚಿದಾನಂದ ಮೂರ್ತಿ, ಲಿಂ. ಡಾ|| ಹೆಚ್. ತಿಪ್ಪೇರುದ್ರಸ್ವಾಮಿ, ಶ್ರೀ ಗೊ.ರು.ಚ ಅವರಂತೆ ನಾವೂ ಧರ್ಮಪಿತ ಬಸವಣ್ಣನವರನ್ನು ಹತ್ತರೊಳಗೆ ಹನ್ನೊಂದು ಎಂಬಂತೆ ತಿಳಿದ ಅಪರಾಧ ಮಾಡಿದ್ದೆವು. ಕಾರಣ, ನಾವು ಅವಲಂಬಿಸಿದ್ದು ಅನ್ಯರ ಸಾಹಿತ್ಯ ಕೃತಿಗಳನ್ನು. ವಚನ ವಾಙ್ಮಯವನ್ನು ನೇರವಾಗಿ ಓದಿದ್ದು ಮತ್ತು ಕ್ರೈಸ್ತ-ಇಸ್ಲಾಂಗಳ ತೌಲನಿಕ ಅಧ್ಯಯನ ನಮ್ಮ ಅಜ್ಞಾನವನ್ನು ಎದುರಿಟ್ಟು ತೋರಿಸಿದಾಗ, ಈ ಕೆಲವರು ಕಿತ್ತು ಮೂಲೆಗಿಟ್ಟಿದ್ದ ಮೇಟಿಗೂಟ-ಧರ್ಮಗುರು ಬಸವಣ್ಣನವರನ್ನು ಪುನಃ ಪ್ರತಿಷ್ಠಾಪಿಸಿದೆವು. ನಮ್ಮ ಈ ದೃಢ ನಿಲುವು ಹಠಮಾರಿತನವಾಗಿ ಕೆಲವು ಸಾಹಿತಿಗಳಿಗೆ ಕಂಡು, ನಮ್ಮಿಂದ ದೂರ ಸರಿದರೂ ನಮ್ಮ ಪ್ರತಿಪಾದನೆಯಲ್ಲಿ ನಾವು ಯಾವ ಸಂಕೋಚವನ್ನೂ ಪಡಲಿಲ್ಲ. ಸತ್ಯದ ಮುಂದೆ ಕೆಲವು ಸಾಹಿತಿಗಳ ಅಭಿಮಾನ, ಆದರ ಗೌರವ ನಮಗೆ ತೃಣವಾಗಿಯೇ ಕಂಡಿತು.

ಲಿಂಗಾಯತವು ಒಂದು ಜಾತಿಯಲ್ಲ, ಮತವಲ್ಲ, ಪಂಥವಲ್ಲ ಒಂದು ಸ್ವತಂತ್ರ ಧರ್ಮ. ಇದು ಒಂದು ಸದ್ಧರ್ಮ, ಮಾನವ ಧರ್ಮ, ರಾಷ್ಟ್ರ ಧರ್ಮ, ವಿಶ್ವಧರ್ಮ, ಪರಿಪೂರ್ಣ ಧರ್ಮ, ಪ್ರಗತಿಪರ ಧರ್ಮ ಎಂಬುದನ್ನು ಪೂಜ್ಯ ಅಪ್ಪಾಜಿ ಪ್ರತಿಪಾದಿಸತೊಡಗಿದರು. ಎಲ್ಲೋ ಒಂದು ಮೂಲೆಯಲ್ಲಿ ಜೀತದಾಳಾಗಿ ಊಳಿಗ ಮಾಡುತ್ತಿದ್ದ ಲಿಂಗಾಯತ ಧರ್ಮಕ್ಕೆ ಎಂಥಾ ಮಹತ್ವದ ಸ್ಥಾನ ! ಚಿಂತನಶೀಲರಾದ ಅಪ್ಪಾಜಿ ಸ್ವತಂತ್ರವಾಗಿ ಆಲೋಚಿಸುತ್ತ ಒಂದೊಂದೇ ಅಂಶಗಳನ್ನು

ಪ್ರತಿಪಾದಿಸತೊಡಗಿದರು. ಸದಾ ಪ್ರವಚನದಲ್ಲಿ ಇರುತ್ತಿದ್ದ ಪೂಜ್ಯರು ಹೊಸ ಹೊಸ ವಿಚಾರಗಳನ್ನು ಅವು ಮೂಡುತ್ತಲೇ ಬರೆದಿಟ್ಟುಕೊಂಡು ತಾವು ಭೇಟಿಯಾಗುತ್ತಲೇ ನಮಗೆ ಹೇಳತೊಡಗುತ್ತಿದ್ದರು.

ಪೂಜ್ಯ ಅಪ್ಪಾಜಿಯವರ ಲಿಂಗೈಕ್ಯ ಸಂಸ್ಮರಣೆಯಂದು (ದಿ. 30-6-2000) ಮಾತನಾಡಿದ ಶ್ರೇಷ್ಠ ಚಿಂತಕ, ಉತ್ತಮ ವಾಗ್ಮಿ ಶರಣ. ಡಿ.ಪಿ.ಪ್ರಕಾಶ್ ಹೇಳಿದರು, "ಪೂಜ್ಯ ಅಪ್ಪಾಜಿಯವರನ್ನು ನಾನು ನೋಡಿದ್ದು ಒಂದೇ ಸಲ, ಮಲ್ಲೇಶ್ವರಂ ಮೈದಾನದಲ್ಲಿ ನಡೆದ ಬಸವ ಧರ್ಮ ಸಮ್ಮೇಳನದಲ್ಲಿ. ಅವರ ಒಂದೇ ಭಾಷಣ ನನ್ನ ಮೇಲೆ ಅಚ್ಚಳಿಯದ ಪ್ರಭಾವ ಬೀರಿ ಬಿಟ್ಟಿತು. (*ನನ್ನ ಪಾಡೂ ಅದೇ! ಒಂದು ವೇಳೆ ಚಿತ್ರದುರ್ಗದಲ್ಲಿ ನಾನು ಕಾಲೇಜ್ ವಿದ್ಯಾರ್ಥಿನಿಯಿದ್ದಾಗ ಪೂಜ್ಯರ ಒಂದು ಭಾಷಣ "ಅನುಭವ ಮಂಟಪ" ಕುರಿತು ಕೇಳದಿದ್ದರೆ ನಾನು ವಚನ ಪ್ರವಚನ ಮಾಡದೆ ಬೇರಾವುದೋ ಪಂಥದಲ್ಲಿ ಸೇರಿ ಸನ್ಯಾಸಿನಿಯಾಗಿರುತ್ತಿದ್ದುದು ಸತ್ಯ. ಸದ್ಯ, ಅಪ್ಪ ಬಸವಣ್ಣನ ಕರುಳ ಬಳ್ಳಿಯಿಂದ ಕತ್ತರಿಸಲ್ಪಡಲಿಲ್ಲ ಎಂಬುದು ಈಗ ಅಪೂರ್ವ ಆನಂದ ನೀಡುತ್ತದೆ*) ನಾನು ವಿಚಾರ ಮಾಡುತ್ತೇನೆ, ಪೂಜ್ಯ ಲಿಂಗಾನಂದ ಸ್ವಾಮಿಗಳು ಈ ಶತಮಾನದಲ್ಲಿ ಹುಟ್ಟದೆ ಕಲ್ಯಾಣ ಕ್ರಾಂತಿಯ ನಂತರ 12-13ನೇ ಶತಮಾನದಲ್ಲೇ ಹುಟ್ಟಿದ್ದರೆ ಈ ಧರ್ಮ ಇನ್ನಷ್ಟು ವಿಸ್ತಾರಗೊಂಡು ಬೆಳೆದು ಚೈತನ್ಯಶಾಲಿಯಾಗಿರುತ್ತಿತ್ತು. ಪೂಜ್ಯರ ಬರವು ತಡವಾಯಿತೇನೋ ! ಆದರೆ ಒಂದು ಸಮಾಧಾನ, ಸಂತೋಷ. ತಡವಾದರೂ ಚಿಂತೆಯಿಲ್ಲ ಅವರು ಹುಟ್ಟಿ ಬಂದರಲ್ಲ! ಒಂದು ವೇಳೆ ಅವರು ಹುಟ್ಟಿ ಬರದಿದ್ದರೆ, ಈ ಧರ್ಮದ ಸ್ಥಾನಮಾನ ಗುರುತಿಸದೆ ಇದ್ದರೆ, ಅದನ್ನು ಪ್ರಚಾರ ಮಾಡದಿದ್ದರೆ, ಎಂಥಾ ನಿರ್ವಾತ (vaccume) ! ಆ ಪರಿಸ್ಥಿತಿ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಅದು ಲಿಂಗಾಯತ ಧರ್ಮಕ್ಕೆ ಕಗ್ಗತ್ತಲೆಯ ಯುಗ. ಆ ಕಗ್ಗತ್ತಲೆಯಿಂದ ಧರ್ಮವನ್ನು ಹೊರತಂದು ಬೆಳಕಿಗೆ ಇಟ್ಟ ಪುಣ್ಯಪುರುಷರು ಪೂಜ್ಯ ಅಪ್ಪಾಜಿ." ಸ್ವಂತ ಪ್ರಚಾರಕ್ಕಾಗಿ, ಕೀರ್ತಿಗಾಗಿ ಬದುಕದೆ, ಧರ್ಮಗುರು ಬಸವಣ್ಣನವರನ್ನು ಕುದುರೆಯಾಗಿ ಮಾಡಿಕೊಂಡು ನಾವು ಹತ್ತದೆ, ನಾವು ಕುದುರೆಯಾಗಿ ಅವರನ್ನು ಮೆರೆಸಬೇಕು. **ಧರ್ಮಗುರುವಿಗೆ ಕೃತಜ್ಞವಾಗಿರುವ ಬೌದ್ಧ, ಕ್ರೈಸ್ತ, ಇಸ್ಲಾಂ ಧರ್ಮಗಳು ಎಷ್ಟು ಬಲಿಷ್ಠವಾಗಿವೆ. ಧರ್ಮ ಗುರುವನ್ನು ಮರೆತ ಲಿಂಗಾಯತ ಸಮಾಜ ಎಷ್ಟು ದುರ್ಬಲವಾಗಿದೆ !"** ಎಂದು ಧರ್ಮಗುರು ಶ್ರದ್ಧೆ-ಇಷ್ಟಲಿಂಗ ನಿಷ್ಠೆಯನ್ನು ಪೂಜ್ಯ ಅಪ್ಪಾಜಿ ಕಲಿಸಿದರು.

ಪೂಜ್ಯ ಅಪ್ಪಾಜಿಯವರ ಪರಿಕಲ್ಪನೆಯ ಪ್ರತಿಫಲ ರಾಷ್ಟ್ರೀಯ ಬಸವ ದಳ. ಪೂಜ್ಯರ ಹುಟ್ಟು ಹಬ್ಬವನ್ನು ಆಚರಿಸಬೇಕು ಎಂದು ಶಿಷ್ಯರುಗಳು ಉತ್ಸುಕರಾದಾಗ ಗುರುಗಳು ಸೂಚಿಸಿದರು, "ನಾನು ವ್ಯಕ್ತಿ ಪೂಜೆಯನ್ನು ಇಷ್ಟಪಡುವುದಿಲ್ಲ. ರಾಷ್ಟ್ರೀಯ ಬಸವ ದಳ ಒಂದು ಧ್ಯೇಯಾದರ್ಶದೊಡನೆ ರೂಪುಗೊಂಡ ಸಂಘಟನೆ. ಅದರ ಹುಟ್ಟು ಹಬ್ಬ ಆಚರಿಸಿದರೆ ಸಾಕು." ಎಂದರು. ಪೂಜ್ಯ ಅಪ್ಪಾಜಿಯವರು ನಿಂತ ನೀರಾಗಿ ಮಡುಗಟ್ಟದೆ ಹರಿವ ವಾಹಿನಿಯಾಗಿ ನಿರಂತರವಾಗಿ ಸಂಚರಿಸಿ ಲಕ್ಷೋಪಲಕ್ಷ ಜನರಿಗೆ ಜ್ಞಾನಗಂಗೆಯನ್ನು ಹರಿಸಿದರು. "60 ವರ್ಷ ದಾಟಿದ ಮೇಲೆ ಇನ್ನೇನು ? ಒಂದು ಕಡೆ ನೆಮ್ಮದಿಯಿಂದ ಇರಿ. ಸಾಕು, ಇಷ್ಟು ದಿನ ತಿರುಗಾಡಿ ಧರ್ಮಪ್ರಚಾರ ಮಾಡಿದ್ದೀರಿ" ಎಂದು ಶಿಷ್ಯರು ಒತ್ತಾಯಿಸಿದಾಗ "ಧರ್ಮಪ್ರಚಾರವೇ ನನ್ನ ಪ್ರಾಣ. ಕಡೆಯ ಕ್ಷಣದವರೆಗೂ ಮಾಡುವೆ. ಪ್ರವಚನ ನನ್ನ ವಾಙ್ಮಯ ತಪಸ್ಸು; ಅದು ಸಮಷ್ಟಿ ತಪಸ್ಸು. ಧ್ಯಾನ-ಸಮಾಧಿಯಲ್ಲಿ ಮಾಡುವವನಿಗಷ್ಟೇ ಶಾಂತಿ, ಬೋಧಾ ತಪಸ್ಸಿನಲ್ಲಿ ಹೇಳುವವರು-ಕೇಳುವವರು ಉಭಯತರಿಗೂ ಶಾಂತಿ ಪ್ರಾಪ್ತಿ." ಎನ್ನುತ್ತಿದ್ದರು. ಇಂಥ ಪೂಜ್ಯ ಗುರುಗಳು ನಮ್ಮ-ನಿಮ್ಮೆಲ್ಲರ ಮೇಲೆ ಹೊರಿಸಿರುವ ಜವಾಬ್ದಾರಿ ಬಹಳ. ಅದನ್ನು ಪೂರೈಸುವ ಶಕ್ತಿಯನ್ನು ಸೃಷ್ಟಿಕರ್ತ ಲಿಂಗದೇವ, ಧರ್ಮಗುರು ಬಸವಣ್ಣ, ಜಂಗಮ ಜ್ಯೋತಿ ಪೂಜ್ಯ ಅಪ್ಪಾಜಿಯವರಲ್ಲಿ ಕೇಳಿಕೊಳ್ಳೋಣ.

-ಮಾತಾಜಿ

ಸಂಪಾದಕೀಯ-2 ಕ್ರೈಸ್ತ-ಇಸ್ಲಾಂ ಧರ್ಮಗಳು ಒಡ್ಡುವ ಸವಾಲು

ಈ ಸಂಪಾದಕೀಯ ಬರಹಕ್ಕೆ ಕ್ರೈಸ್ತ-ಇಸ್ಲಾಂ ಧರ್ಮಗಳು ಒಡ್ಡುವ ಬೆದರಿಕೆ ಎನ್ನಲೋ? ವೀರಶೈವ ಮತೀಯರ ಸಣ್ಣತನ ಎನ್ನಲೋ? ಎಂದು ಚಿಂತಿಸಿ, ಚಿಂತಿಸಿ ಕಡೆಗೆ ಕ್ರೈಸ್ತ-ಇಸ್ಲಾಂ ಧರ್ಮಗಳು ಒಡ್ಡುವ ಸವಾಲು ಎಂದು ಶೀರ್ಷಿಕೆಯನ್ನು ಬರೆದೆ. ಚಿಂತಿಸದೆಯೇ ಇರುವ ಬಹುಪಾಲು ಮಠಾಧೀಶರು ಧನ್ಯರು ; ಏಕೆಂದರೆ ಅವರ ನಿಶ್ಚಿಂತ ಮನಃಸ್ಥಿತಿಯಿಂದ ಅವರ ಆರೋಗ್ಯವೂ ಚೆನ್ನಾಗಿರುತ್ತದೆ. ಆಯುಷ್ಯವೂ ಜಾಸ್ತಿ. ಚಿಂತೆಯು ವೈಯಕ್ತಿಕವೇ ಇರಲಿ, ಸಾಮಾಜಿಕವೇ ಇರಲಿ, ಮಾನಸಿಕ ಕ್ಷೋಭೆಗೆ ಕಾರಣವಾಗಿ ಆರೋಗ್ಯದ ಮೇಲೆ ಪರಿಣಾಮವನ್ನು ಬೀರುವುದಂತೂ ಸತ್ಯ. ಇದು ನಮ್ಮ ಅನುಭವಕ್ಕೆ ಬಂದುದು.

ಈ ದಿಶೆಯಲ್ಲಿ ಆರ್.ಎಸ್.ಎಸ್, ವಿ.ಹಿಂ.ಪ ಮುಂತಾದ ಸಂಘಟನೆಗಳವರೂ ಸತತವಾಗಿ ಚಿಂತಿಸುತ್ತಿದ್ದಾರೆ. ಬಸವ ತತ್ತ್ವವಾದಿ ಲಿಂಗಾಯತರಾದ ನಾವೂ ಚಿಂತಿಸುತ್ತೇವೆ. ಆದರೆ ದೃಷ್ಟಿಕೋನಗಳಲ್ಲಿ ಅಪಾರವಾದ ವ್ಯತ್ಯಾಸವಿದೆ. ಅವರದ್ದು ಹೇಗಿದೆ ಎಂದರೆ ವ್ಯಕ್ತಿಯು ಶೂರ, ಆತನ ಕೈಯಲ್ಲಿರುವ ಆಯುಧ (ಸನಾತನ ಧರ್ಮವೆಂದು ಕರೆಯುವ ವೈದಿಕ ಧರ್ಮ) ಬಹು ದುರ್ಬಲ. ಲಿಂಗಾಯತ ಧರ್ಮಿಯ ಪರಿಸ್ಥಿತಿ ಹೇಗೆಂದರೆ ಕೈಯಲ್ಲಿರುವ ಆಯುಧ (ಲಿಂಗಾಯತ ಧರ್ಮ) ಬಹಳ ಶಕ್ತಿಶಾಲಿ ; ಪ್ರಯೋಗಿಸುವವನು ಬಹು ಹೇಡಿ, ಧರ್ಮಪಿತ ಬಸವಣ್ಣನವರೇ ಹೇಳಿಲ್ಲವೇ ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು ? ಎಂದು. ಸಂಘ ಪರಿವಾರದವರು ಇಸ್ಲಾಂ, ಕ್ರೈಸ್ತ ಧರ್ಮಗಳ ಮತಾಂತರ ಕುರಿತು ಬಹಳ ಚಿಂತಿತರಾಗಿದ್ದಾರೆ. ಆದರೆ ಅದನ್ನು ಎದುರಿಸಲಿಕ್ಕೆ ಬೇಕಾದ ಸೈದ್ಧಾಂತಿಕ ಶಸ್ತ್ರ ಅವರ ಬಳಿ ಇಲ್ಲ. ಹಿಂದು ವ್ಯಾಖ್ಯಾನದಲ್ಲಿ ಸಂಘ-ಪರಿವಾರದವರು ಭಾರತೀಯ ಜನ್ಯ ಧರ್ಮಗಳೆಲ್ಲವುಗಳ ಒಕ್ಕೂಟ ಎಂದು ವಿಶಾಲವಾದ ವ್ಯಾಖ್ಯೆ ನೀಡಿದರೂ ಅವರು ಇಸ್ಲಾಂ-ಕ್ರೈಸ್ತ ಮತಾಂತರವನ್ನು ಎದುರಿಸಲು ಬಳಸುವುದು ವೈದಿಕ ಮತದ ಮೊಂಡು ಮತ್ತು ತುಕ್ಕುಹಿಡಿದ ಕತ್ತಿಯನ್ನೆ ! ಕ್ರೈಸ್ತ-ಇಸ್ಲಾಂ ಧರ್ಮಗಳು ಕಬಂಧ ಬಾಹುಗಳನ್ನು ವಿಸ್ತರಿಸಿ ಬೆಳೆಯುತ್ತಿರುವುದು ಕೆಳಗೆ ಸೂಚಿಸಿರುವ ಅಂಶಗಳ ಮೇಲೆ :

1. ಹಿಂದುಗಳ ಬಹುದೇವತೋಪಾಸನೆ, ಅಕರ್ಾಳ-ವಿಕರಾಳ ರೂಪಗಳ ದೇವತೆ, ದೈವಂಗಳ ಉಪಾಸನೆಯ ವಿರುದ್ಧ ಏಕದೇವೋಪಾಸನೆ ಪ್ರತಿಪಾದಿಸಿ. ಇದು ಸೈದ್ಧಾಂತಿಕ ಕಾರಣ.

2. ಚತುರ್ವರ್ಣ ವರ್ಗೀಕರಣ, ಜಾತೀಯತೆ, ಪಂಚಮ ವರ್ಣವಾದ ಅಸ್ಪೃಶ್ಯತೆಯ ಆಚರಣೆ, ಇದು ಸಾಮಾಜಿಕ ಕಾರಣ

3. ಮೂಢನಂಬಿಕೆಗಳು, ಇವಂತೂ ಲೆಕ್ಕವಿಲ್ಲದಷ್ಟಿವೆ. ಜನರ ದೌರ್ಬಲ್ಯ ಅನುಸರಿಸಿ ಹೊಸ ಹೊಸ ಮೂಢನಂಬಿಕೆ ಹುಟ್ಟುತ್ತಲೇ ಇವೆ. ಹಿಂದು ಸಮಾಜದ ಮೂಢನಂಬಿಕೆಗಳನ್ನು ಕಂಡು ಒಂದು ಬಗೆಯ ನಾಸ್ತಿಕರಾಗುವ ಹಿಂದು ಯುವಕರು ಒಂದು ಧಾರ್ಮಿಕ ಶಕ್ತಿಯಾಗಿ ಉಳಿಯದೆ ಇರುವುದು ಒಂದು ಬಗೆಯಾದರೆ, ನಿಧಾನವಾಗಿ ವಿದೇಶಿ ಮತಗಳ ಪ್ರಭಾವಕ್ಕೆ ಸಿಕ್ಕುವುದು ಮತ್ತೊಂದು.

4. ಕಾಮ-ಪ್ರೇಮ ಮುಂತಾದ ಕಾರಣಗಳಿಂದ ಅನೇಕರು ಮಾತೃಪರಂಪರೆಯನ್ನು ಬಿಟ್ಟು ಹೊರಗೆ ಜಾರುವುದು ವಿಪರೀತ ಹೆಚ್ಚಾಗುತ್ತಲಿದೆ. ಹಾಗೆ ಹೊರಗೆ ಹೋಗುತ್ತಲೇ ಆ ಜನಾಂಗದವರು ಸರಕ್ಕನೆ ಒಳಗೆ ಎಳೆದುಕೊಂಡು, ಅವರು ಹೊರಗೆ ಬರದಂತೆ, ಸ್ವಯಂ ಪ್ರೇರಣೆಯಿಂದ ಮತಾಂತರಗೊಂಡಂತೆ ಹೇಳಿಕೆ ನೀಡಲು ಮಾನಸಿಕ, ಬೌದ್ಧಿಕ ಸಿದ್ಧತೆ ಮಾಡುವರು.

5. ಅನ್ಯ ಧರ್ಮಗಳಿಂದ ಬರುತ್ತೇವೆ ಎನ್ನುವವರಿಗೆ (ಆರ್ಯ ಸಮಾಜ ಹೊರತು ಪಡಿಸಿ) ಸನಾತನ

ವೈದಿಕ ಧರ್ಮದ ಬಾಗಿಲು ತೆರೆದಿಲ್ಲ. ಕ್ರೈಸ್ತ-ಇಸ್ಲಾಂಗಳ ಗುಹೆಗಳು ಸಿಂಹದ ಗವಿ ಇದ್ದಂತೆ. ಒಮ್ಮೆ ಒಳಗೆ ಹೋದ ಹೆಜ್ಜೆ ಕಾಣಬಹುದು ; ಹೊರಬಂದ ಹೆಜ್ಜೆ ಕಾಣಲಾಗದು.

6. ಅನೇಕ ಕಾರಣಗಳು ಅಜ್ಞಾನದ ಪ್ರತಿಫಲ ; ಇವುಗಳ ಜೊತೆ ದಾರಿದ್ರ್ಯವೂ ಸೇರಿಕೊಳ್ಳುತ್ತದೆ. ಆರ್ಥಿಕವಾದ ಸ್ವಲ್ಪ ಸಹಾಯ, ಮಾನವೀಯ ನೆರವು, ಸೌಜನ್ಯಪೂರ್ಣ ವರ್ತನೆಗಳು ಬಹುಜನರನ್ನು ಮತಾಂತರಕ್ಕೆ ಪ್ರೇರೆಪಿಸುತ್ತವೆ. ಆರ್ಥಿಕ ಸಂಕಷ್ಟದಲ್ಲಿ ಇರುವವರಿಗೆ ಹಣದ ನೆರವು ಸಿಗುತ್ತಲೇ ಅವರು ಉಳಿದೆಲ್ಲ ಅಭಿಮಾನ ಮರೆಯುತ್ತಾರೆ. ವಿದೇಶೀ ಮೂಲದಿಂದ ಬರುವ ಹಣದ ಒತ್ತಡವನ್ನು ಆರ್ಥಿಕವಾಗಿ ದುರ್ಬಲವಾಗಿರುವ ಸ್ವದೇಶಿ ಸೇವಾ ಸಂಸ್ಥೆಗಳು ಎದುರಿಸಲಾರವು. ಹೀಗಾಗಿ ವಿದೇಶಿ ಧರ್ಮಗಳಿಗೆ ಭಾರತದ ಬಡತನ ಮತ್ತು ಜಾತಿ ಪದ್ಧತಿ ವಿಶೇಷ ವರದಾನವಾಗಿವೆ.

ವೀರಶೈವರ ಸಣ್ಣತನ

ಒಂದು ವೀರಶೈವ ಸಂಘಟನೆ ವ್ಯವಸ್ಥೆ ಮಾಡಿದ್ದ ಕಾರ್ಯಕ್ರಮಕ್ಕೆ ಆಹ್ವಾನಿತಳಾಗಿ ಹೋಗಿದ್ದೆ. ''ಅದು ಬಸವ ಜಯಂತಿ. ಈ ಜನರ ದಡ್ಡತನಕ್ಕೆ ಒಂದು ಮಿತಿಯೇ ಇಲ್ಲ. ಮೇ 6 ರಂದು ಬಸವ ಜಯಂತಿ ಮುಗಿದು ನಾಲ್ಕೈದು ತಿಂಗಳಾದರೂ ಇನ್ನೂ ಬಸವ ಜಯಂತಿಗಳನ್ನು ಮಾಡುತ್ತೇವೆನ್ನುವ ಹಾಸ್ಯಾಸ್ಪದ ಆಚರಣೆ ಬೇರಾವ ಧಾರ್ಮಿಕ ಗುಂಪಿನಲ್ಲೂ ಇಲ್ಲ. ಇವರ ಬಸವ ಜಯಂತಿಗಳು ಧಾರ್ಮಿಕ ಹಿನ್ನೆಲೆಯಿಂದ ಅಂದರೆ ಪೂಜೆ-ಪ್ರಾರ್ಥನೆ ಇವುಗಳಿಂದ ಕೂಡಿರುವ ಬದಲಿಗೆ get together ಎಂಬಂತೆ meeting and eating ಕಾರ್ಯಕ್ರಮಗಳಾಗೆ, ಹಣ ಎತ್ತಿ ಖರ್ಚು ಮಾಡುವ, ತಮಗೆ ಯಾರಿಂದ ಏನಾದರೂ ಲಾಭವಿದೆಯೋ ಅಂಥವರನ್ನು ಕರೆಸಿ ಸನ್ಮಾನಿಸುವ ಹೊಗಳುವ ಕಾರ್ಯಕ್ರಮಗಳಿಂದ ಕೂಡಿರುವ ಕಾರಣ, ಇದಕ್ಕೊಂದು ಧಾರ್ಮಿಕ ಶಿಸ್ತು, ಧ್ಯೇಯವಿರದು. ಅಂಥ ವಿಶಿಷ್ಟ ಬಸವ ಜಯಂತಿಯ ವೇದಿಕೆಗಳು ಆಯ್ದ ಕೆಲವು ವ್ಯಕ್ತಿಗಳನ್ನು ಹೊಗಳಲಿಕ್ಕೆ ವಿನಿಯೋಗಿಸುವಷ್ಟು ಸಮಯವನ್ನು ಬಸವಣ್ಣನವರನ್ನು ಕುರಿತು. ವಿಷಯ ಪ್ರತಿಪಾದನೆಗೆ ಕೊಡುವುದಿಲ್ಲ. ಧರ್ಮಗುರು ಬಸವಣ್ಣನವರ ಹೆಸರಿನಲ್ಲಿ ಯಾವುದೋ ಮೋಡಿ, ಸಮ್ಮೋಹಕತೆ ಇದೆ. ಕಾರಣ, ಜನ ಸಾಮಾನ್ಯರು, ಹೃದಯವಂತರು, ಕಾಯಕ-ದಾಸೋಹ ಸಂಪನ್ನರು ಇಟ್ಟಿರುವ ಅಭಿಮಾನ ಪೂರ್ವಕ ಭಕ್ತಿ. ಇಂಥ ಜನರು ಕೊಡುವ ದೇಣಿಗೆಗಳನ್ನು ಲಪಟಾಯಿಸಿ ತಮ್ಮ ಜೇಬು ತುಂಬಿಕೊಳ್ಳಬೇಕೆಂಬ ಜನ ತಮಗೆ ಧರ್ಮಪಿತ ಬಸವಣ್ಣನವರ ಬಗ್ಗೆ ಶ್ರದ್ಧೆ ಇಲ್ಲದಿದ್ದರೂ, ಒಳಗೇ ಗುರುಗುಟ್ಟಿದರೂ ಅಂತೂ ವರ್ಷದಲ್ಲಿ ಒಂದು ದಿನ, ಎಂದೋ ಒಂದು ದಿನ ಬಸವ ಜಯಂತಿ ಮಾಡುವರು. ಹೋಗಲಿ ಮಾಡಬೇಕೆನ್ನುವರಲ್ಲ ಬಸವ ಜಯಂತಿ ಎಂದು ಜುಲೈ-ಅಗಸ್ಟ್ ತಿಂಗಳಲ್ಲಿ ಹಾಸ್ಯಾಸ್ಪದವಾಗಿ ಕರೆಯುವ ಬದಲು ''ಬಸವ ಜ್ಯೋತಿ'' ಕಾರ್ಯಕ್ರಮ ಎಂದರೆ ಆದೀತಲ್ಲವೆ ?

ಬಸವ ಜ್ಯೋತಿಗೆ ಸಮಯದ ನಿರ್ಬಂಧವಿರುವುದಿಲ್ಲ. ಬಸವ ಜಯಂತಿ-ವೈಶಾಖ ಮಾಸದ ಅಕ್ಷಯ ತೃತೀಯಾದಂದು ಬರುತ್ತದೆ. ಬಸವ ಪಂಚಮಿಯು ಶ್ರಾವಣಶುದ್ಧ ಪಂಚಮಿಗೆ ಬರುತ್ತದೆ. ಇವೆರಡನ್ನೂ ಆಯಾ ದಿನಗಳಂದೇ ಮಾಡಬೇಕು. ಉಳಿದಂತೆ ಯಾವಾಗ ಬೇಕಾದರೂ ಬಸವ ಜ್ಯೋತಿ ಎಂಬ ಶೀರ್ಷಿಕೆಯ ಅಡಿಯಲ್ಲಿ ಮಾಡಬಹುದಾಗಿರುತ್ತದೆ.

ಅಂಥ ಒಂದು ಸಮಾರಂಭದಲ್ಲಿ ಮುಂಬರುವ ಜನಗಣತಿಯಲ್ಲಿ Religion-ಮತ (ಧರ್ಮ) ಕಾಲಂದಲ್ಲಿ ಇಷ್ಟಲಿಂಗಧಾರಿ ಧರ್ಮಾನುಯಾಯಿಗಳು 'ಲಿಂಗಾಯತ' ಎಂದು ಮಾತ್ರ ಬರೆಸಬೇಕು ಎಂದು ಕರೆ ನೀಡಿದೆ. ನಂತರ ಒಬ್ಬರು ಹೇಳಿದರು, ''ಆರಾಧ್ಯರು ಲಿಂಗಾಯತ ಎಂದು ಬರೆಸಲು ಇಷ್ಟಪಡುವುದಿಲ್ಲ. ಅದಕ್ಕಾಗಿ ಅವರನ್ನೂ ಸೇರಿಸಿಕೊಂಡು ಹೋಗಲು ವೀರಶೈವ/

ಲಿಂಗಾಯತ ಎಂದು ಹೇಳಬೇಕಾಗಿದೆ'' ಇನ್ನೊಬ್ಬರು ಹೇಳಿದರು. ''ಆರಾಧ್ಯರೊಬ್ಬರು ನಾವು ಲಿಂಗಾಯತರಲ್ಲರೀ ಆರಾಧ್ಯರು ಎಂದು ಹೇಳುತ್ತಾರೆ. ಹಾಗಾದರೆ ನೀವು ಇಷ್ಟಲಿಂಗ ಕಟ್ಟಿಲ್ಲವೇ ? ಎಂದು ಕೇಳಿದರೆ ಇಷ್ಟಲಿಂಗ ಕಟ್ಟಿರಬಹುದು. ಆದರೆ ಉಳಿದ ಲಿಂಗಾಯತರಿಗಿಂತಲೂ ಶ್ರೇಷ್ಠ.'' ಇದನ್ನು ಕೇಳಿದ ನಾನು ಹೇಳಿದೆ, ''ನೋಡಿದಿರಾ, ಇವತ್ತು ಸರಿಯಾದ ಧಾರ್ಮಿಕ ಸಂಸ್ಕಾರ ಕೊಡದೆ ನಿಮ್ಮ ಮಕ್ಕಳೇ ನಿಮ್ಮ ಕೈಬಿಟ್ಟು, ಸ್ವಧರ್ಮ-ಸಂಸ್ಕೃತಿ ಬಿಟ್ಟು ದೂರ ಹೋಗುತ್ತಿರುವಾಗ ಇಂಥ ಕೆಲವು ಜಾತಿ ಉತ್ತಮವಾದಿಗಳು ಎಂತಹ ಕೂಪ ಮಂಡೂಕತನ ಪ್ರದರ್ಶಿಸುತ್ತಾರೆ! ಇಂಥ ಸ್ವಲ್ಪ ಜನರ ಮಾತಿಗೆ ಬೆಲೆಕೊಟ್ಟು ಬೃಹತ್ತಾದ ಸಮಾಜದ ಹಿತವನ್ನು ಕಡೆಗಣಿಸುವಿರಾ ?'' ಎಂದು.

ಮಧುಗಿರಿಗೆ ಒಂದು ವಿವಾಹ ಕಾರ್ಯಕ್ರಮಕ್ಕೆ ಹೋಗಿದ್ದೆ. ಜನಗಣತಿ ಕರಪತ್ರ ಹಂಚಿಸಿ, ನಂತರ ಈ ಬಗ್ಗೆ ಉಪನ್ಯಾಸ ನೀಡಿದಾಗ ಓರ್ವ ವ್ಯಕ್ತಿ-ಸಮಾಜದ ಪ್ರಮುಖ ಕಾರ್ಯಕರ್ತರು ಹೇಳಿದರು. ''ಕೆಲವರು ವೀರಶೈವ ಪದವೇ ಇರಲಿ ಎನ್ನುತ್ತಾರೆ. ಏಕೆಂದರೆ ವೀರಶೈವತ್ವವು ಹುಟ್ಟಿನಿಂದ ಬರುತ್ತದೆ ; ಯಾರು ಬೇಕಾದರೂ ಲಿಂಗ ಕಟ್ಟಿಕೊಂಡು ಲಿಂಗಾಯತರು ಆಗಿಬಿಡಬಹುದು. ಆದ್ದರಿಂದ ಆ ಪದ ಬೇಡ.'' ಅಂತೂ ಲಿಂಗಾಯತ ಧರ್ಮವನ್ನು ತತ್ತ್ವಭ್ರಷ್ಟವಾಗಿ ಮಾಡಿದವರು, ವಚನ ಸಾಹಿತ್ಯವನ್ನು ಕಲುಷಿತಗೊಳಿಸಿದವರು ಯಾರು ಎಂಬ ಕಳ್ಳರ ಹುಡುಕಾಟದಲ್ಲಿ ನಾವಿರುವಾಗ ಒಬ್ಬೊಬ್ಬರೇ ಈಗ ಕಾಣಿಸಿಕೊಳ್ಳತೊಡಗಿದ್ದಾರೆ ಎನ್ನಿಸಿ ನನಗೆ ಸಂತೋಷವೆನಿಸುತ್ತದೆ. ''ಯಾರು ಬೇಕಾದರೂ ಲಿಂಗಧಾರಣೆ ಮಾಡಿಕೊಂಡು ಲಿಂಗಾಯತರಾಗಬಹುದೆ ?'' ಆ ವ್ಯಕ್ತಿ ಕೇಳಿದರು.

''ಅಹುದು ; ಅದೇ ನಮ್ಮ ಧರ್ಮದ ವೈಶಿಷ್ಟ್ಯ. ವೈದಿಕ ಧರ್ಮವು ಅತ್ಯಂತ ಬಿಗಿಯಾದ ಜಾತಿ ವ್ಯವಸ್ಥೆಯನ್ನು ನಿರ್ಮಿಸಿ ವರ್ಣ, ಜಾತಿಗಳನ್ನು ಬಲಗೊಳಿಸಿ, ಪ್ರತಿಫಲವಾಗಿ ಅಸ್ಪೃಶ್ಯತೆಯನ್ನು ಆಚರಣೆಗೆ ತಂದುದರಿಂದಲೇ ಧರ್ಮಗುರು ಬಸವಣ್ಣನವರು ಆ ವ್ಯವಸ್ಥೆಯನ್ನು, ಸಂಪ್ರದಾಯವನ್ನು ಪ್ರತಿಭಟಿಸಿ ಹೊರಬಂದು ಅದಕ್ಕೆ ಉತ್ತರ ರೂಪವಾಗಿ ಲಿಂಗಾಯತ ಧರ್ಮವನ್ನು ಕೊಟ್ಟರು. ಇಷ್ಟಲಿಂಗವನ್ನು ದೇವರ ಕುರುಹಾಗಿ ನೀಡಿದ್ದಲ್ಲದೆ ಶರಣ ಸಮಾಜವನ್ನು ಕಟ್ಟುವ ಗಣಲಾಂಛನವನ್ನಾಗಿಯೂ ಮಾಡಿದರು. ಅದನ್ನು ಧರಿಸಿದವರಲ್ಲಿ ವರ್ಣಭೇದ, ವರ್ಗಭೇದ, ಜಾತಿ ಭೇದ, ಅಸ್ಪೃಶ್ಯತೆಯನ್ನು ಆಚರಿಸಬಾರದು ಎಂದು ಘೋಷಿಸಿದರು. ದೀಕ್ಷಾವಂತರಲ್ಲಿ 1. ಒಡನಾಟ (Socio-religious fellowship) 2. ಊಟೋಪಚಾರ 3. ವಿವಾಹ ಸಂಬಂಧ ನಡೆಯಬೇಕು ಎಂದರು. ಇದೇ ಲಿಂಗಾಯತ ಧರ್ಮದ ಸಾರ. ನೋಡಿ, ನೀವು ನಾವು ಒಂದು ಕಾಲದಲ್ಲಿ ಯಾವ ಕುಲದವರಿದ್ದೆವೋ ; ಧರ್ಮಗುರು ಬಸವಣ್ಣನವರ ಕೃಪೆಯಿಂದ ನಾವೀಗ ಆ ಜಾತಿಕುಲಗಳನ್ನು ಮೀರಿ ಶರಣರಾಗಿಲ್ಲವೆ ?'' ನಾನು ವಿವರಿಸಿದೆ.

''ಇದು ಕೆಲವರಿಗೆ ಇಷ್ಟವಿಲ್ಲ. ಉತ್ತರ ಕರ್ನಾಟಕದಲ್ಲಿ ಹಡಪದವರು, ಕುಂಬಾರರು, ಮಡಿವಾಳರು ಎಲ್ಲರೂ ಲಿಂಗ ಕಟ್ಟುತ್ತಾರೆ. ಹಾಗಾದರೆ ಅವರೆಲ್ಲರೂ ಲಿಂಗಾಯತರೆ ?'' ಪುನಃ ಆ ವ್ಯಕ್ತಿ ಪ್ರಶ್ನಿಸಿದರು. ನನಗೆ ಬಹಳ ದುಃಖವೆನಿಸಿತು.

''ಅಹುದು ; ಇದು ನಾವು ಹೆಮ್ಮೆ ಪಡುವ ಸಂಗತಿ. ಮಾನವ ಜನಾಂಗಕ್ಕೆಲ್ಲ ಧರ್ಮದ ಬಾಗಿಲನ್ನು ತೆರೆದರು. ಬಸವಣ್ಣನವರ ಮಹಾಮನೆಯ ಮಕ್ಕಳು ಹುಟ್ಟಿನಿಂದಲೇ ಆಗಿರಬಹುದು. (ಹುಟ್ಟು ಲಿಂಗಾಯತರು) ದತ್ತು ಬಂದು ಅಂದರೆ ದೀಕ್ಷೆ ಪಡೆದು ಬಸವ ಪರಂಪರೆಯ ಮಕ್ಕಳಾಗಬಹುದು. ಮಾತೃಹೃದಯಿ ಬಸವಣ್ಣನವರು ಉಭಯತರಿಗೂ ಸಮಾನವಾದ ಆಸ್ತಿ-ಹಕ್ಕು ಕೊಡುತ್ತಾರೆ. ಕ್ರೈಸ್ತ-ಇಸ್ಲಾಂ ಧರ್ಮಗಳು ಒಡ್ಡುವ ಸವಾಲನ್ನು ಬಸವಣ್ಣನ ಧರ್ಮ ಸಮರ್ಥವಾಗಿ ಎದುರಿಸಲು ಸಾಧ್ಯ. ಇದು ಏಕೆ ಈ ಕೆಲವು ಜನರಿಗೆ ಅರ್ಥವಾಗುತ್ತಿಲ್ಲ ?'' ಎಂದು ಸಂಕಟದಿಂದ ಹೇಳಿದೆ. ಕಡೆಗೆ ದೃಢ

ಸ್ವರದಲ್ಲಿ ಹೇಳಿದೆ ; ''ಆದ್ದರಿಂದಲೇ ನಾವೀಗ ಕಠಿಣ ನಿಲುವು ತಳೆಯುತ್ತಿರುವುದು. ಧರ್ಮಗುರು ಬಸವಣ್ಣನವರನ್ನು ಧಾರ್ಮಿಕ ಸಂವಿಧಾನವಾಗಿ ವಚನ ಸಾಹಿತ್ಯವನ್ನು ಒಪ್ಪಿ ಸಮಾನತೆಯಲ್ಲಿ ವಿಶ್ವಾಸವಿಟ್ಟವರೆಲ್ಲ ಲಿಂಗಾಯತರು ಎಂದು ಕರೆದುಕೊಂಡು ತತ್ತ್ವನಿಷ್ಠರು, ವಿಶಾಲ ಹೃದಯಿಗಳು, ಸಮತಾವಾದಿಗಳೂ ಆಗಿ ಧ್ರುವೀಕರಣಗೊಳ್ಳಲಿ. ಇದನ್ನು ಒಪ್ಪದವರು ವೀರಶೈವರೆಂದು ಕರೆದುಕೊಂಡು ತಮ್ಮ ಗುರುವಿನ ಹೆಸರು ಏನು ಬೇಕಾದರೂ ಹೇಳಲಿ ನಾವಿನ್ನು ಅವರ ಕೂಡ ಚರ್ಚೆ-ವಾದಕ್ಕೂ ಇಳಿಯುವುದಿಲ್ಲ.

ಜಾತಿವಾದಿಗಳೂ, ಬಹುದೇವೋಪಾಸಕ ಮೂಢರು, ಸಂಕುಚಿತ ವಿಚಾರದವರೂ ಆದವರ ಕೈಯಿಂದ ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮವನ್ನು ಇಂದು ರಕ್ಷಿಸುವುದು ತೀರಾ ಅತ್ಯಗತ್ಯ ಕರ್ತವ್ಯವಾಗಿದೆ'' ಎಂದು ವಿವರಿಸಿದೆ.

ಆದರೆ ಅಂದಿನಿಂದಲೂ ನನ್ನ ಮನಸ್ಸು ತುಂಬಾ ವ್ಯಾಕುಲಗೊಂಡಿದೆ. ಕ್ರೈಸ್ತ-ಮುಸ್ಲೀಮರು ಸಾಮಾಜಿಕ ಪ್ರಜ್ಞೆಯಿಂದ ಪ್ರೇರಿತರಾಗಿ ಪ್ರಜಾಪ್ರಭುತ್ವದಲ್ಲಿ ಜನಸಂಖ್ಯೆಯು ಮಹತ್ವದ ಪಾತ್ರವನ್ನು ಆಡುತ್ತದೆ ಎಂಬ ಪ್ರಜ್ಞೆಯಿಂದ ತಾವು ಸಾಂಸ್ಕೃತಿಕ, ಧಾರ್ಮಿಕ ದೈತ್ಯ ಶಕ್ತಿಗಳಾಗಿ ಬೆಳೆಯಲು ಅಹರ್ನಿಶೆ ಪ್ರಯತ್ನ ಮಾಡುತ್ತಿದ್ದರೆ ಇದರ ಅರಿವೇ ಇಲ್ಲದ, ಸಾಮಾಜಿಕ ರಾಷ್ಟ್ರೀಯ ಪ್ರಜ್ಞೆ ಇಲ್ಲದ ಹಿಂದುಗಳು ಮತ್ತು ಲಿಂಗಾಯತರು ಅನ್ಯರನ್ನು ಆಹ್ವಾನಿಸುವುದಿರಲಿ, ಸ್ವಯಂ ಪ್ರೇರಣೆಯಿಂದ ಬಂದವರನ್ನು ಸ್ವಾಗತಿಸದೆ, ಆದರಿಸದೆ ಕಾವಲು ನಾಯಿಗಳಂತೆ ಬೌಗುಟ್ಟಿದರೆ ಏನೆನ್ನಬೇಕು ? ಇವರಿಗೆ ತಿಳುವಳಿಕೆ ಬರುವುದು ಯಾವಾಗ ? ಎಂದು ಸಂಕಟವೆನಿಸುತ್ತದೆ.

ಮತ್ತೊಮ್ಮೆ ಆಲೋಚನೆ ಹೀಗೆ ಹರಿಯುತ್ತದೆ. ಮಡಿವಂತ ವೀರಶೈವರು ತಮ್ಮದೇ ಹಕ್ಕೆಂಬಂತೆ ಲಿಂಗಾಯತ ಧರ್ಮ-ಸಾಹಿತ್ಯಗಳನ್ನು ವಿಕೃತಗೊಳಿಸಿ ಅನ್ಯರು ಬರಬಾರದೆಂದು ಬೌಗುಟ್ಟಿದರೆ ವೀರಶೈವೇತರ ಪ್ರಾಜ್ಞರು, ಮುಮುಕ್ಷುಗಳು ಏಕೆ ಸಂಕೋಚಪಡಬೇಕು ? ಅಥವಾ ಬೇಸರ ಪಡಬೇಕು ? ತಾತನ, ತಂದೆಯ ಆಸ್ತಿಯನ್ನು ಒಬ್ಬ ಅಣ್ಣ ಕೊಡಲು ನಿರಾಕರಿಸಿದರೆ ಆಗ ನ್ಯಾಯಾಲಯವನ್ನು ಪ್ರವೇಶಿಸಿಯಾದರೂ ತನ್ನ ಹಕ್ಕಿನ ಪ್ರಕಾರ ತಮ್ಮನು ಆಸ್ತಿಯನ್ನು ಪಡೆದುಕೊಳ್ಳುವುದಿಲ್ಲವೆ ? ಭಾರತೀಯ ಸಂಸ್ಕೃತಿಗೆ ಹೊರಗಾಗದೆಯೇ ಶೂದ್ರತ್ವ, ಅಸ್ಪೃಶ್ಯತೆಯನ್ನು ಕಳಚಿಕೊಳ್ಳುವ ಸದವಕಾಶವನ್ನೂ ಕ್ರಾಂತಿಪುರುಷ ಬಸವಣ್ಣನವರು ಕೊಟ್ಟಿರುವಾಗ, ಮತ್ತು ಅವರ ಕಳಕಳಿಯೇ ಧರ್ಮ, ಸಂಸ್ಕಾರ ಇಲ್ಲದವರಿಗೆ ಅವುಗಳನ್ನು ಕೊಡಬೇಕೆಂಬುದು ಆಗಿರುವಾಗ ಇತರ ಪ್ರಗತಿಪರ ಚಿಂತಕರು ಬಸವ ಧರ್ಮವನ್ನು ನಿಸ್ಸಂಕೋಚವಾಗಿ ಏಕೆ ಸ್ವೀಕರಿಸಬಾರದು ? ಹುಟ್ಟಿನಿಂದ ಲಿಂಗಾಯತರಲ್ಲದ ಓರ್ವ ಸಾಧಕರು ಲಿಂಗಾಯತ ಧರ್ಮವನ್ನು ಸ್ವೀಕರಿಸಿ ನಮ್ಮ ಸಂಸ್ಥೆಯಲ್ಲೇ ಸಂತೋಷದಿಂದ ಸಾಧನಾ ಮಗ್ನರಾಗಿರುವವರು ನನಗೊಂದು ಗಂಭೀರ ಪ್ರಶ್ನೆ ಕೇಳಿದರು. ''ಲಿಂಗಾಯತ ಧರ್ಮ ಎಂಬುದಕ್ಕಿಂತಲೂ ಬಸವ ಧರ್ಮ ಎಂಬ ಹೆಸರು ಲಿಂಗಾಯತೇತರರಿಗೆ ಬಹಳ ಪ್ರಿಯ. ಕ್ರಾಂತಿಪುರುಷ ಬಸವಣ್ಣನವರ ವ್ಯಕ್ತಿತ್ವ, ವಾತ್ಸಲ್ಯ, ಔದಾರ್ಯ, ವೈಶಾಲ್ಯತೆಗೆ ಮಾರುಹೋಗಿಯೇ ಲಿಂಗಾಯತೇತರರು ಈ ಧರ್ಮಕ್ಕೆ ಆಕರ್ಷಿತರಾಗುವುದು. (ಕ್ರೈಸ್ತ, ಮುಸ್ಲೀಮರಂತೆ ಅವರ ಧಾರ್ಮಿಕ ಸಹೋದರತ್ವಕ್ಕೆ-religious brotherhood ಮಾರುಹೋಗಿ ಅಲ್ಲ.) ಆದ್ದರಿಂದ 2001ರ ಜನಗಣತಿಯ ಸಮಯದಲ್ಲಿ Religion ಮತ ಎಂಬ ಪ್ರಶ್ನೆಗೆ, ಲಿಂಗಾಯತ ಎಂದು ಬರೆಸಿರಿ ಎಂದು ಕರೆ ಕೊಡುವ ಬದಲು 'ಬಸವ ಧರ್ಮ' ಎಂದು ಬರೆಸಿರಿ ಎಂದು ಕರೆ ಕೊಟ್ಟು ಪ್ರಚಾರ ಮಾಡಬಹುದಿತ್ತಲ್ಲ ?''

ಎಂಥಾ ಮಹತ್ವದ ಪ್ರಶ್ನೆ ! ಈ ಬಗ್ಗೆ ನಾನು ಆಲೋಚಿಸಿಲ್ಲವೆಂದಲ್ಲ

1. ವಿಶ್ವಗುರು ಬಸವಣ್ಣನವರನ್ನು ನಂಬಿ, ಶರಣಾಗಿ ಒಂದು ಕಾಲದಲ್ಲಿ ಇಷ್ಟಲಿಂಗಧಾರಣೆ

ಮಾಡಿಕೊಂಡ ಒಂದು ಸಮುದಾಯ ಲಿಂಗಾಯತರು ಎಂಬುದಾಗಿ ಇದ್ದಾರೆ. ಇವರಿಗೆ ವಚನ ಸಾಹಿತ್ಯದ ಸಂಪರ್ಕ ತಪ್ಪಿ ಹೋದುದರಿಂದ ಇವರು ತಾತ್ವಿಕ ನೆಲೆ ಇಲ್ಲದವರಾಗಿ ತಮ್ಮ ಧಾರ್ಮಿಕ ಸಂವಿಧಾನಕ್ಕೆ ವಿರುದ್ಧವಾಗಿ ಜಾತಿವಾದಿಗಳು, ಬಹುದೇವತೋಪಾಸಕರು ಆಗಿದ್ದಾರೆ. ಆದ್ದರಿಂದ ಇವರ ತಪ್ಪು ಆಚರಣೆಗಾಗಿ ಇವರನ್ನು ದೂಷಿಸುವುದಕ್ಕಿಂತ ಇವರನ್ನು ವಚನ ಸಾಹಿತ್ಯ ಸಂಪರ್ಕದಿಂದ ತಪ್ಪಿಸಿ, ಇವರಿಗೆ ಅನ್ಯ ಮತ ಶಾಸ್ತ್ರಗಳನ್ನು ಬೋಧಿಸಿ, ವಿಲಕ್ಷಣ ಆಚರಣೆ ಕಲಿಸುವ ಧೂರ್ತರನ್ನು ಇಂದು ದೂಷಿಸಬೇಕಾಗಿದೆ. ಇವರನ್ನು ಕಟು ಮಾತುಗಳಿಂದ ಎಚ್ಚರಿಸಿ, ವಚನ ವಾಙ್ಮಯದ ಕನ್ನಡಿಯನ್ನು ಎದುರಿಗೆ ಹಿಡಿದು, ತಪ್ಪುಗಳನ್ನು ತೋರಿಸಿ ಎಚ್ಚರಿಸುವುದಕ್ಕೆ ವಿಪುಲ ಅವಕಾಶವಿದೆ. ಎಂತೆಂಥಾ ಸಂಕಷ್ಟದ ಪರಿಸ್ಥಿತಿಯಲ್ಲೂ ಲಿಂಗಾಯತ ಧರ್ಮ-ಸಮಾಜಗಳು ವಿಪತ್ತನ್ನು ಎದುರಿಸಿದಾಗಲೆಲ್ಲ ಇದನ್ನು ರಕ್ಷಿಸಿರುವುದು ಧರ್ಮಗುರು ಬಸವಣ್ಣನವರ ಪವಿತ್ರನಾಮ, ಪರುಷಮಯ ವ್ಯಕ್ತಿತ್ವ ಮತ್ತು ಸಂದೇಶ. ಈಗಲೂ ಅದೇ ಕೆಲಸ ಮಾಡುವುದೆಂಬ ವಿಶ್ವಾಸ ನಮಗಿದೆ. (ಇದೇ ಕಾರಣಕ್ಕೆ ವೀರಶೈವವಾದಿಗಳು ಬಸವಣ್ಣನವರ ಹೆಸರನ್ನು ತೋರಿಕೆಗಾದರೂ ಹಿಡಿದುಕೊಳ್ಳುವರು.) ಇನ್ನು ಕೆಲವರು ದುರುದ್ದೇಶಪೂರ್ವಕವಾಗಿಯೇ ಜಾತಿವಾದಿಗಳು, ಬಸವ ವಿರೋಧಿಗಳು ಆಗಿರಲು ಬಯಸುತ್ತಾರೆ. ಇವರನ್ನು ತಿದ್ದುವುದೂ ಸಾಧ್ಯವಿಲ್ಲ ; ಏಕೆಂದರೆ ಇವರು ನಿಜವಾಗಿಯೂ ನಿದ್ದೆ ಮಾಡುವವರಲ್ಲ, ನಿದ್ದೆ ಮಾಡುವಂತೆ ಸೋಗು ಹಾಕಿದವರು. ಇವರು ಮನೆಯ ಒಳಗಿದ್ದು ಮನೆಯೊಡೆಯ ಗಣಾಧಿಪತಿ ಬಸವಣ್ಣನವರನ್ನು ಅಸಹನೆಯಿಂದ ದ್ವೇಷ ಮಾಡುವ ಬದಲು ವೀರಶೈವ ಎಂಬ ಶೀರ್ಷಿಕೆಯಡಿಯಲ್ಲಿ ಹೊರಗೆ ಹೋಗಿಬಿಟ್ಟರೆ ಆಗ ಲಿಂಗಾಯತ ಸಮಾಜ ಎಂಬ ಪವಿತ್ರ ಕುಟುಂಬದಲ್ಲಿ ಶಾಂತಿಯು ನೆಲೆಸುತ್ತದೆ. ತಾತ್ವಿಕ ಶುದ್ಧಿ ಉಂಟಾಗುತ್ತದೆ. ಈ ಭರವಸೆ, ಆಸೆಯಿಂದಲೇ ನಾವು ಲಿಂಗಾಯತ ಎಂಬ ಪದವನ್ನು ಸಾಮಾಜಿಕ ದೃಷ್ಟಿಯಿಂದ ಇಷ್ಟಪಡುವುದು. ತಾತ್ವಿಕ ದೃಷ್ಟಿಯಿಂದ ಬಸವ ಧರ್ಮ ಎಂಬ ಪ್ರಯೋಗವು ನಮಗೆ ಅತ್ಯಂತ ಪ್ರಿಯ.

2. ಹೇಗೆ ಬೌದ್ಧ ಧರ್ಮ, ಕ್ರೈಸ್ತ ಧರ್ಮ ಎಂಬುವು ಅತ್ಯಂತ ನಿಖರವಾಗಿ ಈ ಧರ್ಮಗಳು ಬುದ್ಧನಿಂದ, ಏಸುಕ್ರಿಸ್ತನಿಂದ ಬಂದವು ಎಂಬುದನ್ನು ಚಿತ್ರಿಸುತ್ತವೋ ಹಾಗೆ 'ಬಸವ ಧರ್ಮ' ಖಚಿತವಾಗಿ ಇತಿಹಾಸವನ್ನು ಚಿತ್ರಿಸುವ ಪದ. ಸಿದ್ಧರಾಮೇಶ್ವರರು "ಕರುಣೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಎನಗೂ ನಿನಗೂ ಬಸವಣ್ಣನ ಧರ್ಮವಯ್ಯ" ಎಂದು ಒತ್ತಿ ಒತ್ತಿ ಹೇಳಿ ಬಸವ ಧರ್ಮ ಎಂಬ ಪದವನ್ನು ಪ್ರಯೋಗಿಸಿದ್ದಾರೆ. ನಾಲ್ಕೈದು ರಾಜ್ಯಗಳಲ್ಲಿ ಪ್ರಮುಖವಾಗಿ ಹರಿದು ಹಂಚಿಹೋಗಿರುವ ಲಿಂಗಾಯತರಿಗೆ ಅರ್ಥವಾಗಬಹುದು, ನಮ್ಮ ಪ್ರಚಾರದ ವಲಯದಲ್ಲಿ ಬಂದವರಿಗೆ ತಿಳಿಯಬಹುದು. ಉಳಿದವರಿಗೆ ತಿಳಿಯದು ಪ್ರಗತಿಪರ ವಿಚಾರದ ಬಸವ ತತ್ವಾನುಯಾಯಿಗಳು ಬಸವ ಧರ್ಮ ಎಂಬ ಶೀರ್ಷಿಕೆಯಲ್ಲಿ ಒಂದಾದರೂ ಭಾರತೀಯ ಸಮಾಜದ ಅಂತರ್ಗತ ದೋಷದ ಪ್ರಭಾವದಿಂದ ಪುನಃ ಆರಂಭದಲ್ಲಿನ ತಾತ್ವಿಕ ಶುದ್ಧಿ ಕಳೆದುಕೊಂಡು ಮತ್ತೊಂದು ವಿಕೃತ ಅಥವಾ ಶಿಥಿಲ ಸಂಪ್ರದಾಯಕ್ಕೆ ನಾಂದಿ ಹಾಡಬಹುದು.

ಈ ಹಿನ್ನೆಲೆಯಲ್ಲಿ ಸುಮಾರು ಮೂರುವರೆ ಕೋಟಿ ಜನರನ್ನು ಹೊಂದಿರುವ ಲಿಂಗಾಯತ ಸಮಾಜವನ್ನು ವಚನ ಸಾಹಿತ್ಯವೆಂಬ ಸೋಸುವ ಸಾಧನದಿಂದ ಶುದ್ಧೀಕರಿಸುವುದೇ ಸುಲಭಕರ ಪ್ರಯತ್ನ. ವೀರಶೈವವಾದಿಗಳು ಲಿಂಗಾಯತ ಸಮಾಜದ ಒಳಗೆ ಇದ್ದುಕೊಂಡು, ಒಳಗೇ ಧರ್ಮಪಿತ ಬಸವಣ್ಣನವರ ಬಗ್ಗೆ, ಪ್ರಗತಿಪರ ಚಿಂತಕರಾದ ಅವರ ಸಮಕಾಲೀನ ಶರಣರ ಬಗ್ಗೆ, ಅವರ ವಿಚಾರಧಾರೆಯ ಬಗ್ಗೆ ಗುರುಗುಟ್ಟುವ ಬದಲು ದೂರಹೋಗಿ, ಪರಧರ್ಮೀಯರು ಎಂದು ಗರ್ಜಿಸಲಿ.

ಅದನ್ನು ಸಂತೋಷದಿಂದಲೇ ಎದುರಿಸಬಹುದು. ಆದರೆ ಈಗ ಚಿದಾನಂದ ಮೂರ್ತಿಯವರಂಥ ಗೋಮುಖ ವ್ಯಾಘ್ರಗಳಾಗಿ, ವೀರಶೈವ-ಲಿಂಗಾಯತಗಳ ಕಲಬೆರಕೆ ಮಾಡಿ, ನಮಗೆ ಪೂಜನೀಯರು, ಪ್ರಾತಃಸ್ಮರಣೀಯರು ಆದ ನಮ್ಮ ಆದಿ ಶರಣರನ್ನು ಅಗೌರವದಿಂದ ಏಕವಚನದಲ್ಲಿ ಸಂಬೋಧಿಸುತ್ತ ಅವಮಾನ ಮಾಡುವ ಕುಕಾರ್ಯವನ್ನು ಇಂಥವರು ನಿಲ್ಲಿಸಲಿ.

ಪ್ರಗತಿಪರ ಬಸವ ತತ್ವಾನುಯಾಯಿಗಳ ಒಕ್ಕೂಟ

ದಿವಂಗತ ಶ್ರೀರಾಮ ಜಾಧವ ಅರ್ಥಗರ್ಭಿತ ಚುಟುಕಗಳನ್ನು ಬರೆಯುತ್ತಿದ್ದರು. ಅವರ ಒಂದು ಚುಟುಕ ಹೀಗಿದೆ. "**ಎಲ್ಲಿ ವೀರಶೈವವೋ ಅಲ್ಲಿ ಗೊಂದಲದ ವೈಭವ, ಅದು ಅವರ ಸ್ವಭಾವ ; ಕಾರಣ ಬಸವಣ್ಣನ ಅಭಾವ**". ಲಿಂಗಾಯತರಲ್ಲಿರುವ ವೀರಶೈವವಾದಿಗಳು ಈ ಧರ್ಮವು ಎಲ್ಲರಿಗೂ ಸಮಾನ ಅವಕಾಶ ಕೊಡುತ್ತದೆ ಎಂಬುದನ್ನು ಸಂತೋಷದಿಂದ ಪ್ರತಿಪಾದಿಸದೆ, ತಾವು ಬಹಳ ಶ್ರೇಷ್ಠ ಜಾತಿಯವರೆಂದು ಭಾವಿಸಿ, ಇನ್ನಿತರ ಉಪ ಪಂಗಡಗಳಿಂದ ದೂರ ಉಳಿಯಲು ಬಯಸುವುದಲ್ಲದೇ ತಮ್ಮ ತಮ್ಮ ಜಾತಿಗಳ ಗುಂಪುಗಳನ್ನು ಪ್ರತ್ಯೇಕವಾಗಿ ಕಟ್ಟುತ್ತಿದ್ದಾರೆ ಮತ್ತು ತಮ್ಮ ಜಾತಿ ಗುಂಪಿನ ಸಮ್ಮೇಳನಗಳನ್ನು ನಡೆಸುವುದರಲ್ಲಿ ಬಹಳ ಉತ್ಸುಕರಾಗಿರುತ್ತಾರೆ. ಇಂಥ ಅನಿಷ್ಟ ಅಭಿರುಚಿ ನೋಡಿದಾಗ ಬಹಳ ದುಃಖ ಎನಿಸುತ್ತದೆ. ಓರ್ವ ವಿದೇಶಿ ಹೇಳುತ್ತಾನೆ, " ಈ ದೇಶದಲ್ಲಿ ಬಂಗಾಳಿಯನ್ನು ನೋಡಿದೆ, ಮಹಾರಾಷ್ಟ್ರದವರನ್ನು ನೋಡಿದೆ, ಗುಜರಾತಿಯನ್ನು ನೋಡಿದೆ, ಭಾರತೀಯನನ್ನು ನೋಡಲಿಲ್ಲ" ಎಂದು. ಅದೇ ರೀತಿ ಹೇಳಬಹುದು. "ಪಂಚಮಸಾಲಿಯನ್ನು ಕಾಣಬಹುದು, ಬಣಜಿಗನನ್ನು ಕಾಣಬಹುದು, ಸಾಧು, ನೊಳಂಬ, ಗಾಣಿಗ, ನೇಕಾರ, ರೆಡ್ಡಿ ಇತ್ಯಾದಿಗಳನ್ನು ಕಾಣಬಹುದು ; ಲಿಂಗಾಯತ ಸಮಾಜದಲ್ಲಿ ಲಿಂಗಾಯತನನ್ನು ಕಾಣಲಾಗುತ್ತಿಲ್ಲ" ಎಂದು. ಇಂಥ ಒಳಪಂಗಡಗಳ ಪ್ರಜ್ಞೆ ಹುಟ್ಟಿಸುವ ಇವರು ಆಡುವ ಮಾತುಗಳು ಬರೀ ಮಾನವ ಧರ್ಮ ಕುರಿತೇ ಇರುತ್ತವೆ. ಅಂತರಂಗ ಒಂದು ಬಗೆ, ಬಹಿರಂಗ ಒಂದು ಬಗೆ ! ಇಂಥ ಸಣ್ಣತನ ಬೆಳೆಸುವ ರಾಜಕಾರಣಿಗಳು, ಸ್ವಾಮಿಗಳು, ಜಾತಿಯ ಮುಂದಾಳುಗಳ ಸಂಖ್ಯೆ ಬೆಳೆಯುತ್ತಿದ್ದರೂ ನಾವು ನಿರಾಶೆಗೊಂಡಿಲ್ಲ; ಖಿನ್ನರಾಗಿಲ್ಲ, ನಮ್ಮ ಅಂತರಂಗದಲ್ಲಿ ಒಂದು ವಾಣಿ ಉಲಿಯುತ್ತದೆ. ಈ ಸಣ್ಣತನ, ಜಾತಿವಾದದ ಕೆಸರಿನ ಕೂಪದಲ್ಲಿ ಸಿಕ್ಕಿ ಬಿದ್ದಿರುವವರನ್ನು ಧರ್ಮಗುರು ಬಸವಣ್ಣನವರು ತಮ್ಮ ದಿವ್ಯ ಸಂದೇಶದ ಬಲದಿಂದ ಮೇಲೆತ್ತುತ್ತಾರೆ. ಸುಜ್ಞಾನದ ನೀರಿನಲ್ಲಿ ತೊಳೆದು ಶುಚಿ ಮಾಡುತ್ತಾರೆ. ಶರಣತ್ವದ ಹೊಸ ಬಟ್ಟೆಗಳನ್ನುಡಿಸುತ್ತಾರೆ. ಈ ಎಲ್ಲ ಉಪಪಂಗಡಗಳಲ್ಲಿರುವ ತಿಳುವಳಿಕೆಯ ಜನರು ಜಾಗೃತಗೊಂಡು ಸಣ್ಣತನ ತೊರೆದು ಉಪಜಾತಿಗಳ ಹರಕು ಮುರುಕು ಗುಡಿಸಲುಗಳಿಂದ ಹೊರಬಂದು ಬಸವ ಗುರುವಿನ ಮಹಾಮನೆಯ ಆಶ್ರಯ ಪಡೆಯುತ್ತಾರೆ. ಇನ್ನಿತರ ಜಾತಿ ಧರ್ಮಗಳ ಮುಮುಕ್ಷುಗಳನ್ನು ಆಕರ್ಷಿಸಿ, ಆದರಿಸಿ ಬಸವ ಮಹಾಮನೆಯೊಳಕ್ಕೆ ಇಂಬಿಟ್ಟುಕೊಳುಡಳತ್ತಾರೆ. ಲಿಂಗಾಯತ ಸಮಾಜದ ಮಧ್ಯದಿಂದಲೇ ಒಂದು ಪ್ರಾಜ್ಞ ಜನರ ಅರ್ಥಾತ್ ಶರಣರ ಸಮೂಹ ಮೂಡಿ ನಿಲ್ಲುತ್ತದೆ. ಅಂಥ ಜೀವಂತ ಸಮೂಹವನ್ನು ಕಾಣುವ ಕಾಲವು ಬೇಗ ಬರಲೆಂದೇ ನಮ್ಮೆಲ್ಲರ ಆಶಯ.

-ಮಾತಾಜಿ

ವೈಚಾರಿಕ ಪತ್ರಿಕೆಯಾದ ಕಲ್ಯಾಣ ಕಿರಣವನ್ನು ಓದಲು ಪ್ರೇರೆಪಿಸಿ,
ನಿಮ್ಮ ಬಂಧು ಮಿತ್ರರಿಗೆ ಉಡುಗೊರೆಯಾಗಿ ಕಳಿಸಿರಿ

ಕಲ್ಯಾಣ ಕಿರಣದ ಎರಡು ಪ್ರತಿಗಳು ಬರುತ್ತಿದ್ದರೆ
ಒಂದರ ಕ್ರಮ ಸಂಖ್ಯೆ ಕಾಣಿಸಿ, ದಯವಿಟ್ಟು ಪತ್ರ ಬರೆಯಿರಿ.

ರಾಷ್ಟ್ರೀಯ ಬಸವ ದಳದ -ಗಣಗೀತೆ

ಬನ್ನಿ ಬನ್ನಿ ಮಿತ್ರರೇ ಎಚ್ಚರಾಗಿ ನಿಲ್ಲುವಾ

ಬನ್ನಿ ಬನ್ನಿ ಮಿತ್ರರೇ ಎಚ್ಚರಾಗಿ ನಿಲ್ಲುವಾ,
ಭೇದಭಾವ ತೊಡೆದು ಹಾಕಿ ಸಮಾನತೆಯ ಸಾರುವಾ ॥ ಪಲ್ಲವಿ ॥
ಬಸವಣ್ಣನೇ ಧರ್ಮಗುರು ಎಂಬುದನ್ನು ತಿಳಿಯುವಾ
ವಚನಾಮೃತ ಹಂಚುತಾ ನಾವು ಮುಂದೆ ನಡೆಯುವಾ ॥ 1 ॥
ಬಸವಣ್ಣನು ಕೊಟ್ಟಿರುವ ಇಷ್ಟಲಿಂಗ ಕೈಯೊಳಿರಲು
ಹಲವು ದೈವ ಪೂಜಿಸುತ ಅಲೆಯುವುದು ಯಾಕೀಗ ?
ಹಲವು ದೈವ ಪೂಜಿಸುತ ಅಲೆಯುವುದು ಸಾಕೀಗ ॥ 2 ॥
ಷಟಕೋನ ಸಹಿತ ಬಸವ ಧ್ವಜವೆ ನಮ್ಮ ಧರ್ಮ ಧ್ವಜವು
ಕೂಡಲ ಸಂಗಮವೇ ನಮ್ಮ ಧರ್ಮ ಕ್ಷೇತ್ರವು ॥ 3 ॥
ಧರ್ಮಗುರು ಬಸವಣ್ಣ ಬದುಕಲು ಕಲಿಸಿಹರು
ಬಸವ ಪಥದಿ ನಡೆದು ನಾವು ದೇವನೊಲಿಮೆ ಹೊಂದುವಾ ॥ 4 ॥
ಜಾತಿ ಮತದ ಭೇದ ತೊಡೆದು ವಿಶ್ವಧರ್ಮ ಸಾರುವಾ
ಕಲ್ಯಾಣ ರಾಜ್ಯ ಕಟ್ಟಲು ಶ್ರದ್ಧೆಯಿಂದ ದುಡಿಯುವಾ ॥ 5 ॥
ಪ್ರತಿವರ್ಷ ಶರಣ ಮೇಳದಲ್ಲಿ ನಾವು ಕೂಡುವಾ
ಹಿಗ್ಗಿನಿಂದ ಹಾಡಿ ಪಾಡಿ ಸಹೋದರತೆ ಮೆರೆಯುವಾ ॥ 6 ॥
ರಾಷ್ಟ್ರೀಯ ಬಸವ ದಳದ ಸಂಘಟನೆಯ ಮಾಡುವಾ
ರಾಷ್ಟ್ರದ ಕಲ್ಯಾಣಕ್ಕಾಗಿ ಬದುಕು ತ್ಯಾಗ ಮಾಡುವಾ ॥ 7 ॥

-ಶರಣ. ಶಿವಕುಮಾರ ಡಾಕುಳಗೆ, ಬೀದರ

ವಚನಾಭ್ಯಾಸಿಕರು ಹಾಗೂ ವಚನ ಸಾಹಿತ್ಯದ ತತ್ತ್ವಚಿಂತಕರು

ಗಿಳಿಯೋದಿದಂತೆ ವಚನಗಳ ಹೇಳುವವರೆ ಬೇರೆ
ವಚನ ಸಾಹಿತ್ಯದ ತತ್ತ್ವ ಚಿಂತಕರೇ ಬೇರೆ
ವಚನ ಪಾಠಕರಿಗೆ ತತ್ತ್ವಚಿಂತನೆ ತಿಳಿಯದು
ತತ್ತ್ವಚಿಂತಕರಿಗೆ ಬರಿ ವಚನ ಪಠಣ ರುಚಿಸದು.
ಕೇವಲ ಸಾಹಿತಿಗಳಿಗೆ ವಚನ ತತ್ತ್ವದ ರುಚಿಯು
ಕುರಿಯು ಕಬ್ಬಿನ ತೋಟದಲ್ಲಿ ನುಗ್ಗಿ ರಸವ ಮೆಲಿದಂತೆ
ತತ್ತ್ವ ಚಿಂತಕರಿಗೆ ವಚನ ಸಾಹಿತ್ಯವು
ಆನೆಯು ಕಬ್ಬಿನ ತೋಟದಲ್ಲಿ ನುಗ್ಗಿ ಕಬ್ಬಿನ ರಸವ ಹೀರಿದಂತೆ.

- ಶರಣ ಹಿಂಡಿಸಗೆರೆ ವೀರಭದ್ರಪ್ಪ ಶಿವಣ್ಣ, ಬೆಂಗಳೂರು

ಸಮಸ್ಯೆ-ಸಮಾಧಾನ

- ಶಂಕರಪ್ಪ ತಡಸದ, ಗದಗ.- ಪ್ರಪಂಚ ವಾರಪತ್ರಿಕೆ ದಿ. 13-8-2000ರ ಸಂಚಿಕೆಯ 12ನೆಯ ಪುಟದಲ್ಲಿ 'ರಂಭಾಪುರಿ ಬೆಳಗು' ಎಂಬ ಪತ್ರಿಕೆಯಿಂದ ಆಯ್ದ ಒಂದು ಬರಹವಿದೆ. ಅದರಲ್ಲಿ ತಮನ್ನು ಧರ್ಮದ್ರೋಹಿ ಎಂದು ಬಾಳೇಹೊನ್ನೂರು ಸ್ವಾಮಿಗಳು ಟೀಕಿಸಿದ್ದಾರೆ. ''ಬಸವಣ್ಣನವರು ಗುರುವಲ್ಲ. ಅವರದ್ದು ಬಾಗಿದ ತಲೆ ಮುಗಿದ ಕೈ. ಅಭಯ ಆಶೀರ್ವಾದ ಮಾಡಿದ ಹಸ್ತ ಅವರದಲ್ಲ, ಬಸವಣ್ಣನವರು ವೀರಶೈವ ಧರ್ಮವನ್ನು ಸ್ವೀಕರಿಸಿ, ಅದನ್ನು ಬೆಳೆಸಿದರು.'' ಎಂದು ಹೇಳಿದ್ದಾರೆ. ಈ ಬಗ್ಗೆ ತಮ್ಮ ಪ್ರತಿಕ್ರಿಯೆ ಏನು ?

★ ನಮ್ಮನ್ನು ಧರ್ಮದ್ರೋಹಿ ಎಂದು ವಿರೋಧಿ ವಿಚಾರದವರು ಕರೆದರೆ ಅದಕ್ಕಾಗಿ ವಿಷಾದ ಪಡಬೇಕಾಗಿಲ್ಲ. ಏಕೆಂದರೆ ಬ್ರಿಟಿಷರ ದೃಷ್ಟಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರೆಲ್ಲ ದೇಶಪ್ರೇಮಿಗಳಲ್ಲ, ದಂಗೆಕೋರರು. ಬ್ರಿಟಿಷ್ ಆಳರಸರ ದಬ್ಬಾಳಿಕೆ ಪ್ರತಿಭಟಿಸಿದವರೆಲ್ಲ ಅವರ ದೃಷ್ಟಿಯಲ್ಲಿ ದೇಶದ್ರೋಹಿಗಳೇ ಸರಿ. ಸುಮಾರು ಒಂದು ನೂರು ವರ್ಷದಿಂದ ಈಚೆಗೆ ಕಾಗೆ ಗುಬ್ಬಿ ಕಥೆ ಕಟ್ಟಿದಂತೆ ಲಿಂಗೋದ್ಭವ ಲೀಲೆಗಳನ್ನು ಹೆಣೆದು ಕೃತ್ರಿಮವಾಗಿ ಪಂಚಾಚಾರ್ಯರನ್ನು ಸೃಷ್ಟಿಸಿ ಲಿಂಗಾಯತ ಸಮಾಜವನ್ನು ದಾರಿ ತಪ್ಪಿಸಿದವರೇ ಈ ಪಂಚಾಚಾರ್ಯ ಮಠಗಳವರು. ಇವರ ದುಷ್ಟ ತಂತ್ರಗಳನ್ನೆಲ್ಲ ನಾವು ಬಯಲಿಗೆಳೆದು, ಹಳಿತಪ್ಪಿದ ಲಿಂಗಾಯತ ಸಮಾಜವನ್ನು ಧರ್ಮಗುರು ಬಸವಣ್ಣ-ಧರ್ಮಸಂಹಿತೆ ವಚನ ಸಾಹಿತ್ಯ ಎಂಬ ಹಳಿಗಳ ಮೇಲೆ ಕೂಡ್ರಿಸಿದ ನಮ್ಮನ್ನು ನಿಂದಿಸುವುದು ಅವರಿಗೆ ಬಲು ಸಹಜ ; ರೋಗಿಗೆ ಹಾಲು ಸವಿ ಎನಿಸುವುದೆ ? ಗೂಗೆಗೆ ಬೆಳಕು ಸಹ್ಯವಾಗುವುದೆ ?

ದಾರ್ಶನಿಕ ಜಗತ್ತಿನ ದಿಗ್ಗಜಗಳಾದ ಅಲ್ಲಮಪ್ರಭು, ಸಿದ್ಧರಾಮೇಶ್ವರ, ಅಕ್ಕಮಹಾದೇವಿ, ಮಡಿವಾಳ ಮಾಚಿದೇವ ಮುಂತಾದ ಮಹಾಮಹಿಮರು ಪಾಲ್ಕುರಿಕೆ ಸೋಮನಾಥ, ಹರಿಹರ, ಸಿಂಗಿರಾಜ, ಭೀಮಕವಿ, ಎಳಂದೂರು ಷಡಕ್ಷರದೇವ ಮುಂತಾದ ಮಹಾನ್ ಕವಿಗಳು ಧರ್ಮಗುರು ಬಸವಣ್ಣನವರನ್ನು ಸ್ತುತಿಸಿ ವಚನಗಳನ್ನು, ಮಹಾನ್ ಕಾವ್ಯಗಳನ್ನು ಬರೆದು ಕೊಂಡಾಡಿರುವಾಗ ಈ ಮಠಾಧಿಪತಿಗಳು ಧರ್ಮಪಿತ ಬಸವಣ್ಣನವರನ್ನು ಗುರು ಎಂದರೂ ಅಷ್ಟೇ, ಬಿಟ್ಟರೂ ಅಷ್ಟೆ ! ರಂಭಾಪುರಿ ಮಠದವರ, ಪಂಚಪೀಠದ ಸ್ವಾಮಿಗಳ ಪ್ರಮಾಣ ಪತ್ರದ ಅಗತ್ಯ ವಿಶ್ವಗುರು ಬಸವಣ್ಣನವರಿಗೆ ಎಷ್ಟೂ ಇಲ್ಲ. ಸಿದ್ಧರಾಮೇಶ್ವರರ ಮಾತನ್ನು ಕೇಳಿರಿ. **''ಪಾವನನಾದೆನು ಬಸವಣ್ಣ ನಿಮ್ಮ ಪಾವನ ಮೂರ್ತಿಯ ಕಂಡು, ಪರತತ್ತ್ವವನೈದಿದೆ ಬಸವಣ್ಣ ನಿಮ್ಮ ಪರಮಸೀಮೆಯ ಕಂಡು, ಪದನಾಲ್ಕ ಮೀರಿದೆ ಬಸವಣ್ಣ ನಿಮ್ಮ ಪರುಷಪಾದವ ಕಂಡು, ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿದೆ, ಬಸವಣ್ಣಾ ಬಸವಣ್ಣಾ, ನೀನು ಗುರುವಾದೆಯಾಗಿ.''**

-ಶಿವನಗೌಡ. ಚ. ಗೌಡರ, ಧಾರವಾಡ.- ಬಸವಣ್ಣ ಎಂಬ ಹೆಸರನ್ನು ಅವರ ತಾಯಿ ತಂದೆಗಳು ಇಟ್ಟದ್ದೊ ? ಅಥವಾ ಯಾವುದಾದರೂ ಒಂದು ಹಂತದಲ್ಲಿ ಹಾಗೆ ಬದಲಾಗಿದೆಯೊ ? ತಂದೆ-ತಾಯಿಗಳು ಶೈವ ಬ್ರಾಹ್ಮಣರು ; ಅವರೇ ಇಟ್ಟಿದ್ದರೆ ಶೈವ ಬ್ರಾಹ್ಮಣರಲ್ಲಿ ಅಂತಹ ಹೆಸರು ಈಗ ಕಾಣುತ್ತಿಲ್ಲವಲ್ಲ ?

★ ಬಹಳ ಉತ್ತಮ ಪ್ರಶ್ನೆ. ಈವರೆಗೂ ಯಾರೂ ಕೇಳಿರಲೇ ಇಲ್ಲ. ಅದಕ್ಕಾಗಿ ಅಭಿನಂದನೆ. ಧರ್ಮಪಿತ ಬಸವಣ್ಣನವರ ಹಿರಿಯ ತಲೆಮಾರಿನವರು ಮೂಲತಃ ಆಂಧ್ರದ ಶೈವ ಬ್ರಾಹ್ಮಣರು, ಕಮ್ಮೆ ಕುಲದವರು. ಆಂಧ್ರದಿಂದ ಬಂದು ಬಾಗೇವಾಡಿಯಲ್ಲಿ ನೆಲೆಸಿದ್ದರು. ಇಂದಿಗೂ ಆಂಧ್ರದ ಒಂದು ಬ್ರಾಹ್ಮಣ ಕುಲದವರಲ್ಲಿ ವಿಶಿಷ್ಟ ಪದ್ಧತಿ ಇದೆ. ಅವರು ನಂದಿಯ ಭಕ್ತರು. ನಂದ್ಯಾಲ ಎಂಬ ಊರಲ್ಲಿ

ನಂದಿಗೆ ಮುಖ್ಯ ಸ್ಥಾನ ಎಂಬುದು ಗೊತ್ತಿರಬಹುದು. ಆ ಬ್ರಾಹ್ಮಣರಲ್ಲಿ ಮನೆಯ ಮೊದಲನೆಯ ಮಗ ಅಥವಾ ಮಗಳಿಗೆ ಬಸವ ಎಂಬ ಹೆಸರು ಇಡುವುದು ಕಡ್ಡಾಯನೇಮವಂತೆ. ಬಸವ ಪುನ್ನಯ್ಯ ಎಂಬ ಪ್ರಸಿದ್ಧ ಕಮ್ಯುನಿಷ್ಟ ನಾಯಕರು ಇದ್ದರು. ದಿ.ಎನ್.ಟಿ.ರಾಮರಾವ್ ಅವರ ಮೊದಲ ಪತ್ನಿ ಹೆಸರು ಬಸವ ತಾರಕಂ. ಮಾದರಸ, ಬಲದೇವರಸ, ಚಂದಿಮರಸ, ಸಿದ್ಧರಸ ಎಂಬ ರೂಢಿಯಂತೆ ಮಗುವಿನ ಹೆಸರು ಬಸವರಸ, ನಂತರ ಸಂಗನ ಬಸವ. ಮುಂದೆ ಎಲ್ಲರಿಗೂ ಅತ್ಯಂತ ಪ್ರೀತಿ ಪಾತ್ರರಾದ ಬಸವಣ್ಣನವರ ಹೆಸರಿಗೆ **'ಅಣ್ಣಾ'** ಪದ ಸೇರಿತು.

ಒಮ್ಮೆ ಓರ್ವ ವ್ಯಕ್ತಿ ಬಂದರು, ತಮ್ಮ ಹೆಸರು ಬಸವರಾಜ ಎಂದು ಹೇಳಿದರು. ಮೈಸೂರಿಗೆ ಒಂದು ಸಂದರ್ಶನಕ್ಕೆ ಹೋಗಿ ಬರುವಾಗ ಪಿಕ್ ಪಾಕೇಟ್ ಆಯಿತಂತೆ. ಬಸ್ ನಿಲ್ದಾಣದಲ್ಲಿ ಯಾರೋ ನಮ್ಮ ಬಸವ ಮಂಟಪದ ಹೆಸರು ಹೇಳಿ ವಿಳಾಸ ಕೊಟ್ಟರಂತೆ. ಆತ ಆಂಧ್ರದ ಬ್ರಾಹ್ಮಣ ಯುವಕ. ಕುತೂಹಲಗೊಂಡು ವಿಚಾರಿಸಿದಾಗ ಅವರು ಹೇಳಿದರು ಆ ಬ್ರಾಹ್ಮಣರು ಕೆಲವು ಪ್ರದೇಶಗಳಲ್ಲಿದ್ದಾರಂತೆ. ಅವರ ಮನೆ ದೇವರು ಬಸವ (ಅಂದರೆ ನಂದಿ). ಅವರ ಮನೆಯಲ್ಲಿ ಹುಟ್ಟಿದ ಮೊದಲ ಮಗುವಿಗೆ ಬಸವ ಎಂಬ ಹೆಸರು ಕಡ್ಡಾಯವಂತೆ. ನನಗೆ ಒಂದು ಐತಿಹಾಸಿಕ ಸತ್ಯ ಕರಗತವಾದುದಕ್ಕೆ ಬಹಳ ಸಂತೋಷವಾಯಿತು. ತಮ್ಮ ಊರಿಗೆ ಹೋಗಲು ಬಸ್ ಚಾರ್ಜ ಕೊಟ್ಟೆವು.

ಕರ್ನಾಟಕದ ಶೈವ ಬ್ರಾಹ್ಮಣರಲ್ಲಿ ಬಸವ ಪದ ರೂಢಿಯಲ್ಲಿಲ್ಲ. ಬೆಂಗಳೂರಿನ ಕೆಲವು ಬ್ರಾಹ್ಮಣರಿಗಂತೂ 'ಬಸವಾ' ಎಂದರೆ ಕಾದ ಸೀಸೆ ಕಿವಿಯಲ್ಲಿ ಸುರಿದಂತೆ. ಬಸವನ ಗುಡಿ ಪ್ರದೇಶ ಬ್ರಾಹ್ಮಣರು ಹೆಚ್ಚಾಗಿ ಇರುವ ಪ್ರದೇಶ. ಅನಿವಾರ್ಯವಾಗಿ ಹೇಳಬೇಕಾದಾಗ ಬಹುಶಃ ಬಹಳ ಸಂಕಟಪಡುತ್ತಾರೆ. ದೊಡ್ಡ ಬಸವಣ್ಣನ (ಬೃಹತ್ ನಂದಿಯ) ಗುಡಿ ಇದೆ. ಬಸವಣ್ಣನ ಗುಡಿ ಎನ್ನಲು ಸಂಕಟಪಟ್ಟು ಭಾರತದ ಸಂಸ್ಕೃತಿಯ ಉದ್ದುದ್ದ ಮಾತನಾಡುವ ಕೆಲವರು ಅದನ್ನು ಬುಲ್ ಟೆಂಪಲ್ ಎನ್ನುತ್ತಾರೆ. ಹೀಗೆ ಕೆಲವರ ಭಾರತೀಯ ಬಗ್ಗೆ ಸಂಸ್ಕೃತಿಯ ಅಭಿಮಾನಕ್ಕೆ ಎರಡು ಮುಖಗಳು ಇವೆ.

-ಕಲ್ಯಾಣ ಕಿರಣದಲ್ಲಿ ಬರುವ ಕೆಲವು ಲೇಖನಗಳು ಅತ್ಯಂತ ಪ್ರೌಢವೂ, ಉತ್ಕೃಷ್ಟವೂ ಆಗಿವೆ. ಸಂಶೋಧನಾತ್ಮಕ ಸತ್ಯಗಳಿಂದ ಕೂಡಿರುತ್ತವೆ. ಇವು ಸೀಮಿತವಾದ ವಲಯದಲ್ಲಿ ನಿಮ್ಮ ಅಭಿಮಾನಿಗಳಿಗೇ ಸಿಗುವಂತಾಗಿದೆ. ಬಹಳ ಜನರು ಓದುವಂತಹ ಬೃಹತ್ ಪತ್ರಿಕಗಳಲ್ಲಿ ಬಂದರೆ ಚೆನ್ನಾಗಿರುವುದಲ್ಲ ಎಂಬ ಆಶಯ ನನ್ನದು.

★ ನಿಮ್ಮ ಅಪೇಕ್ಷೆ , ಅಭಿಪ್ರಾಯ ಅಭಿನಂದನಾರ್ಹ. ಬಹು ಪಾಲು ಪತ್ರಿಕೆಗಳಿಗೆ ಸತ್ಯ ಸಂಶೋಧನೆ ಎಲ್ಲಿ ಬೇಕು. ಪ್ರತಿಭಾವಂತರನ್ನು ಕಂಡು ಮತ್ಸರಿಸುವುದು, ಹತ್ತಿಕ್ಕುವುದು ಎಲ್ಲೆಡೆಯಲ್ಲೂ ನಡೆದಿದೆ. ಅಲ್ಲದೆ ಬಹುಪಾಲು ಪತ್ರಿಕೆಗಳು ದೂರಾಲೋಚನೆ ಇಲ್ಲದೆ ವೈದಿಕ ಧರ್ಮವನ್ನು ಬೆಳೆಸುವುದರಲ್ಲೆ ನಿರತವಾಗಿವೆ. ಕಲ್ಯಾಣ ಕಿರಣದ ಓದುಗರು ತಾವೂ ಓದಿ ಇನ್ನಿತರರಿಗೂ ಓದಲು ಪ್ರೇರೇಪಿಸಬೇಕು. ಚಂದಾದಾರರಾಗಲು ಪ್ರೋತ್ಸಾಹಿಸಬೇಕು.

-ಪಿ. ಚಂದ್ರಶೇಖರ್, ಬಳ್ಳಾರಿ.- 'ದಿ ಹಿಂದೂ' ಎಂಬ ಇಂಗ್ಲೀಷ್ ಪತ್ರಿಕೆಯ ದಿ.31-7-2000ರ ಸಂಚಿಕೆಯಲ್ಲಿ ಶ್ರೀಮತಿ ಮಾಲಿನಿ ಪಾರ್ಥಸಾರಥಿ ಎಂಬುವವರ ಒಂದು ಲೇಖನ ಮುದ್ರಣಗೊಂಡಿದೆ. "ರಾಷ್ಟ್ರೀಯತೆಯ ಭಾವದ ಸಂರಕ್ಷಣೆ. ಸರ್ವಧರ್ಮಗಳು ಸಮಾನ" ಎಂಬ ಅವರ ಅಭಿಪ್ರಾಯವನ್ನು ಓದುಗರ ಓಲೆಯಲ್ಲಿ ಕೆಲವರು ಖಂಡಿಸಿದ್ದಾರೆ. ಅದರಲ್ಲಿ ಅವರು ಶ್ರೀ ವಾಜಪೇಯಿ ಸರ್ಕಾರದ ಧೋರಣೆ, ಸಂಘ ಪರಿವಾರದ ನಿಲುವನ್ನು ದೂಷಿಸಿದ್ದಾರೆ. ರಾಜು ಥಾಮಸ್ ಎಂಬುವವರು ಸರ್ವಧರ್ಮಗಳು ಸಮಾನ ಎನ್ನುವ ವಿಚಾರ ಟೀಕಿಸಿ, ತಮ್ಮ ಧರ್ಮದಲ್ಲಿ ಲೋಪದೋಷ ಇದ್ದವರಷ್ಟೇ ಹೀಗೆ ಹೇಳುತ್ತಾರೆ. ಹಿಂದೂ ಧರ್ಮ ಚೆನ್ನಾಗಿದ್ದರೆ ಹಿಂದುಳಿದವರು, ದಲಿತರು ಏಕೆ ಮತಾಂತರಗೊಳ್ಳುತ್ತಿದ್ದರು. ? ಇನ್ನೋರ್ವ ಹಿಂದುವಾದಿಗಳು ಕ್ರೈಸ್ತರಲ್ಲೂ ಜಾತಿಗಳಿವೆ ಎಂದು ಟೀಕಿಸಿದ್ದಾರೆ. ಈ ಎಲ್ಲವೂ ನನಗೆ ಗೊಂದಲ ಉಂಟುಮಾಡಿವೆ, ತಮ್ಮ ಉತ್ತರವೇನು ?

★ "ಸರ್ವ ಧರ್ಮಗಳೂ ಸಮಾನ " ಎಂಬ ಮಾತನ್ನು ಪ್ರಚಾರಶೀಲ ಧರ್ಮಗಳು (Missionary religions) ಯಾವುವೂ ಒಪ್ಪುವುದಿಲ್ಲ. ನಮ್ಮದೂ ಪ್ರಚಾರಶೀಲ ಧರ್ಮ. ಧರ್ಮಪಿತ ಬಸವಣ್ಣನವರು ಹೇಳುತ್ತಾರೆ. ಯಾವ ಧರ್ಮವು ದೀಕ್ಷೆಯನ್ನು ನೀಡಿ ಯಾರನ್ನು ಬೇಕಾದರೂ ಸ್ವಾಗತಿಸಬಲ್ಲದೋ ಆ ಧರ್ಮವು ತಾನೇ ಶ್ರೇಷ್ಠ ಎಂದು ಪ್ರತಿಪಾದಿಸಿಕೊಳ್ಳುತ್ತದೆ. ಅದು ಅದರ ಸಹಜ ಮನೋಧರ್ಮ. ಕೆಲವೊಂದು ಉದಾಹರಣೆಗಳನ್ನು ಹಿಂದುವಾದಿಗಳು ಅಭಿಮಾನದಿಂದ ಹೇಳುತ್ತಾರೆ. "ಯಾರೋ ಓರ್ವ ಆಂಗ್ಲ ಮಹಿಳೆ ತಾನು ಹಿಂದುವಾಗಲು ಬಯಸಿದ್ದೇನೆ" ಎಂದಳು. ಆಗ ಕಂಚೀ ಸ್ವಾಮಿಗಳು "ಎಲ್ಲ ಧರ್ಮಗಳೂ ಸಮಾನ, ನಿನ್ನ ಧರ್ಮವನ್ನು ನೀನು ಸರಿಯಾಗಿ ಅನುಸರಿಸು" ಎಂದರು. ಎಂಥಾ ವಿಶಾಲ ಮನೋಭಾವ ಎಂದು ಹೊಗಳಿಕೊಳ್ಳುತ್ತಾರೆ. ವೈದಿಕ ಧರ್ಮದಲ್ಲಿ ದೀಕ್ಷೆ ನೀಡಿ ಯಾರನ್ನೂ ಒಳಗೆ ತೆಗೆದುಕೊಳ್ಳುವ ಅವಕಾಶ ಇಲ್ಲದ್ದರಿಂದ ಹೀಗೆ ಹೇಳುತ್ತಾರೆ. ಅದು ತೋರಿಕೆಗೆ ವಿಶಾಲ ಎನಿಸಿದರೂ ಮೂಲತಃ ಬಹಳ ಸಂಕುಚಿತ. ಕ್ರೈಸ್ತ-ಇಸ್ಲಾಂ-ಸಿಖ್ ಧರ್ಮಗಳಲ್ಲಿ ಮತ್ತು ಧರ್ಮ ಗುರು ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮದಲ್ಲಿ ಸೃಷ್ಟಿಕರ್ತನನ್ನು ಮಾತ್ರ ಆರಾಧಿಸುವ ಏಕೇಶ್ವರವಾದವಿದೆ. ಹೀಗಾಗಿ ಬಹುದೇವತಾ ಉಪಾಸನೆ ಬಿಡಿಸಿ ಓರ್ವ ಕರ್ತನನ್ನು ಆರಾಧಿಸಲು ನಾವೆಲ್ಲ ಹೇಳುತ್ತೇವೆ. ಸಾಂಪ್ರದಾಯಿಕ ಹಿಂದು ಧರ್ಮದಲ್ಲಿ ಬಹುದೇವತೋಪಾಸನೆ ಇರುವುದರಿಂದ "ನೀನು ಏನನ್ನಾದರೂ ಪೂಜಿಸು. ಎಲ್ಲವೂ ದೇವರನ್ನು ಸೇರುತ್ತದೆ-ಎಲ್ಲ ಹಳ್ಳ ನದಿಗಳು ಸಮುದ್ರವನ್ನು ಸೇರುವಂತೆ" ಎಂದು ಹೇಳುತ್ತಾರೆ. ಇದು ತಪ್ಪು, ಎಲ್ಲ ಹಳ್ಳಗಳೂ ಸಮುದ್ರವನ್ನು ಸೇರವು. ನೀರು ಸ್ವಲ್ಪ ಇದ್ದ ಹಳ್ಳಗಳು ದಾರಿಯಲ್ಲೆ ಬತ್ತುವಂತೆ ಸ್ಥಾನಿಕ ಪಂಥಗಳು ಪರಮಾತ್ಮನೆಂಬ ಗುರಿಗೆ ಕೊಂಡೊಯ್ಯಲಾರವು. ಇರುವ ಸ್ಥಿತಿಯಲ್ಲೇ ಸಂರಕ್ಷಿಸಿಕೊಳ್ಳಬೇಕಾದ ಅನಿವಾರ್ಯ ತೊಂದರೆ ಹಿಂದೂವಾದಿಗಳಿಗೆ ಇರುವುದರಿಂದ ಅವರು ಮೂಲ ದೌರ್ಬಲ್ಯ ಮುಚ್ಚಿಕೊಳ್ಳಲೇ ಬೇಕಾಗಿದೆ. ಆದ್ದರಿಂದ ನಮಗೆ ನಮ್ಮ ಧರ್ಮದ ಬಗ್ಗೆ ಹೆಮ್ಮೆ ಇದ್ದರೂ ಹಿಂದೂ ವಾದದ ಬಗ್ಗೆ ಅಭಿಮಾನವಿರದಿದ್ದರೂ ಸಂರಕ್ಷಣೆಯ ದೃಷ್ಟಿಯಿಂದ ಅನುಕಂಪ ಇರಬೇಕಾಗಿದೆ. ಕ್ರೈಸ್ತರಲ್ಲೂ ಜಾತಿಗಳಿವೆ. ಮುಸ್ಲೀಮರಲ್ಲೂ ಇವೆ ಎಂದು ಕೆಲವರು ಹೇಳುವರು. ಇವರ ಉದ್ದೇಶ ಹಿಂದುಗಳಲ್ಲಿ ಕೆಲವರು ಮತಾಂತರಗೊಳ್ಳದಿರಲಿ ಎಂಬುದು. ಆದರೆ ಅಲ್ಲಿ ಕೆಥೋಲಿಕ್-ಪ್ರಾಟೆಸ್ಟೆಂಟ್, ಷಿಯಾ-ಸುನ್ನಿ ಎಂಬ ತಾತ್ತ್ವಿಕ ಭೇದಗಳಿವೆ. ಲಿಂಗಾಯತ ಸಮಾಜದಲ್ಲಿಯೂ ಸಾಂಪ್ರದಾಯಿಕ ಹಿಂದೂ ಸಮಾಜದ ಜಾತಿ ಭೇದಗಳು ನುಸುಳಿವೆ. ಆದರೆ ಒಳಪಂಗಡಗಳ ಭೇದ ಹರಿಯಲಾರದಷ್ಟು ಬಿಗಿಯಾಗಿಲ್ಲ. ಈಗ ನಾವು ತಾತ್ತ್ವಿಕ ಧ್ರುವೀಕರಣ ಮಾಡಿ ಬಸವ ತತ್ತ್ವಾನುಯಾಯಿಗಳು ಮತ್ತದರ ವಿರೋಧಿಗಳು ಎಂದು ಎರಡೇ ಗುಂಪುಗಳನ್ನು ಉಳಿಸಲು ಯತ್ನಿಸುತ್ತಿದ್ದೇವೆ.

-ನಮ್ಮ ರಾಷ್ಟ್ರಕ್ಕೆ ಹಿಂದುಸ್ಥಾನ ಎಂಬ ಹೆಸರು ಸೂಕ್ತ ಎಂದು ನೀವು ಸೂಚಿಸಿದ ಅಭಿಪ್ರಾಯ ನಮಗೆ ಬಹಳ ಸಂತೋಷ ತಂದಿದೆ. ಬಾಂಬೆ ಮುಂಬಯಿಯಾಗಿ, ಮದ್ರಾಸ್ ಚೆನ್ನೈಯಾಗಿರುವಾಗ ಇಂಡಿಯಾ ಏಕೆ ಹಿಂದುಸ್ಥಾನ ಆಗಬಾರದು ಆದರೆ ಕೆಲವರು ಈ ರಾಷ್ಟ್ರದ ಜಾತ್ಯತೀತತೆ (Secular)ಗೆ ಆ ನಾಮಾಂತರ ಭಂಗ ತರುತ್ತದೆ ಎನ್ನುವರಲ್ಲ ?

★ ಹಿಂದು ಎಂದು ಒಂದು ರಾಷ್ಟ್ರದ ಪ್ರಜೆಗೆ, ಹಿಂದುಸ್ಥಾನ ಎಂಬುದು ಒಂದು ರಾಷ್ಟ್ರಕ್ಕೆ ಅನ್ವಯವಾಗಿ, ಈ ಪದಗಳು ದೇಶವಾಚಕವಾದಾಗ ಜಾತ್ಯತೀತ ಸ್ವರೂಪ, ಸಂವಿಧಾನ ಬದಲು ಮಾಡದೆ

ಈಗಿನ ಸ್ಥಿತಿಯನ್ನೇ ಕಾಯ್ದುಕೊಳ್ಳಲು ಬರುತ್ತದೆ. ಆಗ ಹಿಂದುವನ್ನು ಧರ್ಮವಾಚಕವಾಗಿ ಬಳಸದೆ ವೇದಾಧಾರಿತ ಧರ್ಮವನ್ನು ವೈದಿಕ ಧರ್ಮ, ಸನಾತನ ಧರ್ಮ ಎಂದು ಮಾತ್ರ ಬಳಸಬೇಕಾಗುತ್ತದೆ. ಹಿಂದು ಒಂದು ಧರ್ಮವಲ್ಲ ಹಲವಾರು ಧರ್ಮಗಳ ಒಕ್ಕೂಟ ಎಂದು ಹೇಳುತ್ತಿದ್ದುದರಿಂದ ನಾವು (ಲಿಂಗಾಯತರು) ಹಿಂದು ಒಕ್ಕೂಟದಲ್ಲಿ ಒಂದು ಧರ್ಮವಾಗಿ ಇದ್ದೆವು. ಆದರೆ ಹಿಂದು ಧರ್ಮ ಒಂದು ಧರ್ಮ ಎಂದೇ ಬಹುಪಾಲು ಹಿಂದುವಾದಿಗಳು ಈಗ ಬಳಸುತ್ತಿರುವುದರಿಂದ ಜಾತೀಯತೆ, ಅಸ್ಪೃಶ್ಯತೆ, ಬಹುದೇವತೋಪಾಸನೆ, ಹೋಮ-ಹವನ-ಯಜ್ಞ-ಯಾಗ ಇವಾವನ್ನೂ ಮನ್ನಿಸದ, ಆಚರಿಸದ ನಾವು ಈಗ ಅಹಿಂದು ಧರ್ಮಾನುಯಾಯಿಗಳು ಎಂದು ಘೋಷಿಸಿಕೊಳ್ಳುವ ಕಾಲ ಬಂದೇ ಬಿಟ್ಟಿತು. ಒಂದು ಮಾತ್ರ ನಿಜ, ಜೈನ, ಬೌದ್ಧ, ಲಿಂಗಾಯತ, ಸಿಖ್ ಧರ್ಮಗಳು ಸಮಾನ ಮನಸ್ಕ ಅವೈದಿಕ ಧರ್ಮಗಳಾದರೂ ಹಿಂದೂ ವಿರೋಧಿ, ಭಾರತ ವಿರೋಧಿ ಧರ್ಮಗಳಲ್ಲ.

-ಹಿಂದು ಪತ್ರಿಕೆಯ ದಿ. 18-8-2000ದ ಸಂಚಿಕೆಯಲ್ಲಿ ಕರ್ನಾಟಕ ರಾಜ್ಯದ ಪೋಲೀಸ್ ಮಹಾನಿರ್ದೇಶಕರಾದ ಶ್ರೀ ದಿನಕರ್ ಅವರು "ಚರ್ಚ್ ಬಾಂಬ್ ಸ್ಫೋಟಗಳಿಗೆ ಕಾರಣವಾದ ಹೈದರಾಬಾದ್ ಮೂಲದ ದೀನದಾರ್ ಅಂಜುಮಾನ್ ಸಂಸ್ಥೆಯು 64 ವರ್ಷಗಳ ಹಿಂದೆ ಹುಟ್ಟುವಾಗ ಲಿಂಗಾಯತರು ಮತ್ತು ಮುಸ್ಲೀಮರನ್ನು ಒಂದುಗೂಡಿಸುವ ಉದ್ದೇಶ ಹೊಂದಿತ್ತು ಮತ್ತು ಅದರ ಸಂಸ್ಥಾಪಕರು ಲಿಂಗಾಯತರು ಸೌದಿ ಅರೇಬಿಯಾದಿಂದ ಬಂದವರು ಎಂದು ಪ್ರತಿಪಾದಿಸುತ್ತಿದ್ದರು." ಎಂದಿದ್ದಾರೆ. ಈ ಬಗ್ಗೆ ತಮ್ಮ ಅಭಿಪ್ರಾಯ.

★ ಲಿಂಗಾಯತರು ಮತ್ತು ಮುಸಲೀಮರನ್ನು ಒಟ್ಟುಗೂಡಿಸುವ ಉದ್ದೇಶ ಎಂಬುದೇ ಹಾಸ್ಯಾಸ್ಪದ. ಏಕದೇವೋಪಾಸನೆ, ಜಾತ್ಯತೀತತೆ, ಸಮಾನತೆ, ಧಾರ್ಮಿಕ ಸಹೋದರತ್ವ ಮುಂತಾದ ಕೆಲವು ಅಂಶಗಳಲ್ಲಿ ಲಿಂಗಾಯತ ಧರ್ಮವು ಮುಸ್ಲಿಂ, ಕ್ರೈಸ್ತ ಧರ್ಮಗಳೊಡನೆ ಸಾಮ್ಯವನ್ನು ಹೊಂದಿದ್ದರೂ ಆಚಾರ-ವಿಚಾರ-ಸಂಸ್ಕೃತಿಯಲ್ಲಿ ಹಿಂದುಗಳೊಡನೆ ಹೊಂದಿಕೊಳ್ಳುವರು. "ಸರ್ವ ಧರ್ಮಗಳೂ ಸಮಾನ" ಎಂಬ ಹಿಂದುಗಳ ವಾದವನ್ನೂ ನಾವೂ ಒಪ್ಪದೆ ಇದ್ದರೂ, ಸರ್ವ ಧರ್ಮೀಯರೂ ಸಮಾನ ಎಂಬ ವೈಶಾಲ್ಯತೆಯನ್ನು ನಾವು ಪ್ರತಿಪಾದಿಸುತ್ತೇವೆ. ವಿಚಾರಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ಒಂದು ರಾಷ್ಟ್ರದಲ್ಲಿ ಸಾಮರಸ್ಯದಿಂದ ಬಾಳಲು ಬರುತ್ತದೆ ಎಂಬುದು ನಮ್ಮ ಧರ್ಮ ನಮಗೆ ಕಲಿಸಿರುವ ಉದಾತ್ತ ಗುಣ. ನಮ್ಮ ವಿಚಾರವನ್ನು ಇನ್ನೊಬ್ಬ ಒಪ್ಪದೆ ಇದ್ದ ಮಾತ್ರಕ್ಕೆ ಅವನನ್ನು ಕೊಲ್ಲುವುದು ಜೆಹಾದ್ (ಧರ್ಮಯುದ್ಧ) ಎಂಬ ಮತಾಂಧತೆ ಬಸವ ಧರ್ಮಕ್ಕೆ ಸಲ್ಲದ ಮನೋಭಾವ. ಆದ್ದರಿಂದ ದೀನ್‌ದಾರ್ ಸಂಸ್ಥೆಯ ಸಂಸ್ಥಾಪಕರು ಈ ಪಂಥವನ್ನು (ಈಗಿನ ಮತಾಂಧತೆ, ದೇಶ ವಿಭಜನೆ, ಹಿಂಸಾಚಾರದ ಉದ್ದೇಶದಿಂದ ಹುಟ್ಟು ಹಾಕಿರದಿದ್ದರೂ) ಲಿಂಗಾಯತರನ್ನು (ಮತ್ತು ಉಳಿದ ಹಿಂದುಗಳನ್ನು) ತಮ್ಮೊಳಗೆ ಸೆಳೆದುಕೊಳ್ಳುವ ಉದ್ದೇಶದಿಂದಲೇ ಹುಟ್ಟು ಹಾಕಿದ್ದಾರೆ. ಏಕೆಂದರೆ ಹುಲಿ ಮತ್ತು ಹುಲ್ಲೆ ಎರಡೂ ಕೂಡಿ ಕಾಡಿನಲ್ಲಿ ಎಷ್ಟು ಹೊತ್ತು ಆಟವಾಡಬಲ್ಲವು ?!

ಲಿಂಗಾಯತ ಸಮಾಜವು (ಕ್ರೈಸ್ತರ·ಹೋಲಿಕೆ ಕುರುಬನಿಲ್ಲದ ಕುರಿ ಹಿಂಡಿನಂತೆ) ಧಾರ್ಮಿಕ ಗುರುಗಳೆಂಬ ರಕ್ಷಕರ ಸಂರಕ್ಷಣೆಯಿಂದ ವಂಚಿತವಾಗಿರುವುದರಿಂದ (ಅವರು ವಿಪುಲ ಸಂಖ್ಯೆಯಲ್ಲಿದ್ದರೂ ಸಮಾಜದ ಸುಖದುಃಖಗಳ ಬಗ್ಗೆ ಚಿಂತಿಸದೆ, ಸ್ಪಂದಿಸದೆ ಪಾಳೆಯಗಾರರಾಗಿ ಮೆಡಿಕಲ್ ಕಾಲೇಜ್, ಇಂಜನಿಯರಿಂಗ್ ಕಾಲೇಜ್ ಪ್ರೇಮದಲ್ಲೇ ನಿರತರಾಗಿರುವುದರಿಂದ ಬಹಳವೆಂದರೆ ತಮ್ಮ ಸ್ವಧರ್ಮದ ಪ್ರಚಾರಕ್ಕೆ ಮಾತ್ರ ಆಗಾಗ ಎಚ್ಚೆತ್ತು ಅಡ್ಡಿ ಮಾಡುವುದರಿಂದ) ಎಲ್ಲ

ಧರ್ಮ-ಮತ-ಪಂಥಗಳವರೂ ಆಸೆ ಕಣ್ಣಿನಿಂದ ಲಿಂಗಾಯತ ಸಮಾಜದ ಕಡೆಗೇ ನೋಡುವರು. ಓರ್ವ ವ್ಯಕ್ತಿ-ಲಿಂಗಾಯತ ಹೋಗಿ ಬ್ರಹ್ಮಕುಮಾರಿ ಪಂಥದ ದೀಕ್ಷೆ ಪಡೆದು ತನ್ನ ಧರ್ಮವನ್ನು ಸಮಾಜವನ್ನು ಶಿಥಿಲಗೊಳಿಸಿ ಕರ್ನಾಟಕದ ತುಂಬ ಬ್ರಹ್ಮಕುಮಾರಿ ಪಂಥ ಬೆಳೆಸಿದರು. ಆದ್ದರಿಂದ ಲಿಂಗಾಯತರೇ ತಮ್ಮ ಧರ್ಮ ಮತ ಪಂಥಗಳಿಗೆ ಆಹಾರ ಎಂದು ಭಾವಿಸಿ ದೀನ್‌ದಾರ ಸಂಸ್ಥೆಯ ಸ್ಥಾಪಕರು ಒಂದು ತಂತ್ರ ಹೂಡಿದರು. ಬಸವಣ್ಣ, ಚನ್ನಬಸವಣ್ಣ ಎಂದರೆ ಭಾವ ಪರವಶರಾಗುವ, ಸಮ್ಮೋಹಿತರಾಗುವ ಸಾತ್ವಿಕ ಜನರಾದ ಲಿಂಗಾಯತರನ್ನು ಮತಾಂತರಿಸಲು ದೀನ್‌ದಾರ್ ಸ್ಥಾಪಕರು ತಾವೇ ಚನ್ನಬಸವಣ್ಣನ ಅವತಾರ ಎಂದು ಪ್ರತಿಪಾದಿಸಿದರು. ಕಾಲಜ್ಞಾನ ವಚನಗಳಲ್ಲಿ ಚನ್ನಬಸವಣ್ಣನವರು ಬರುತ್ತೇವೆ ಎಂದು ಹೇಳಿದ್ದಾರೆ. ಆ ಚನ್ನಬಸವಣ್ಣನವರೇ ನಾನು ಎಂದು ಹೇಳಿಕೊಂಡರು. ಅವರು ಇನ್ನೂ ಮುಂದೆ ಹೋಗಿ, "ಇದು ಸೌದಿ ಅರೇಬಿಯಾದಿಂದ ಬಂದ ಧರ್ಮ ಅದಕ್ಕೆ ಇದರಲ್ಲಿ ಉಳಿದ ಹಿಂದುಗಳಲ್ಲಿ ಇಲ್ಲದ ಏಕೇಶ್ವರ ವಾದವಿದೆ. ಆದ್ದರಿಂದ ನೀವೆಲ್ಲ ಇಸ್ಲಾಂ ಸ್ವೀಕರಿಸಿರಿ. ಹಿಂದೆ ಬಸವಣ್ಣನವರು ಇಷ್ಟಲಿಂಗ ಧರಿಸಿ ಮೋಕ್ಷ ಪಡೆಯಿರಿ ಎಂದರು. ಈಗ ನೀವು ಅದರ ಧಾರಣೆ ಇಲ್ಲದೆ ಅಲ್ಲಹನನ್ನು, ಮೊಹಮ್ಮದರನ್ನು ನಂಬಿ ದೀಕ್ಷೆ ಪಡೆಯಿರಿ. ಮೋಕ್ಷ ಹೊಂದುವಿರಿ" ಎಂದರು. ಈ ಮಾತುಗಳಿಗೆ ಮರುಳಾಗಿ ಅನೇಕ ಲಿಂಗಾಯತರು ಮತಾಂತರಗೊಂಡಿರಲೂಬಹುದು. ಆದ್ದರಿಂದ ಶ್ರೀ ದಿನಕರ್ ವ್ಯಕ್ತಪಡಿಸಿರುವ ಅಭಿಪ್ರಾಯ "ಮುಸಲ್ಮಾನರು ಲಿಂಗಾಯತರನ್ನು ಒಟ್ಟುಗೂಡಿಸಲು ದೀನ್‌ದಾರ್ ಸಂಸ್ಥೆ ಹುಟ್ಟಿತು." ಎಂಬುದು ತಪ್ಪು. ಲಿಂಗಾಯತರನ್ನು ಮತಾಂತರಿಸಲು ಇಸ್ಲಾಂ ಪ್ರಚಾರಕರು ದೀನ್‌ದಾರ ಸಂಸ್ಥೆಯ ರೂಪ ಧರಿಸಿದರು ಎಂಬುದು ಸರಿ. ಧರ್ಮಾಂತರವು ಮಾನವನ ಮೂಲಭೂತ ಹಕ್ಕು; ದೇಹಕ್ಕೆ ಅನ್ನ ಬುದ್ಧಿಗೆ ಜ್ಞಾನ ಪಡೆಯುವ ಹಕ್ಕಿನಂತೆ ಧರ್ಮವೂ ಒಂದು ಮೂಲಭೂತ ಅವಶ್ಯಕತೆ. ಅದನ್ನು ಎಲ್ಲರಿಗೂ ಕೊಡಬೇಕು. ಆದರೆ ಒತ್ತಾಯದಿಂದಲ್ಲ ತಾತ್ವಿಕ ಮನವೊಲಿಕೆಯಿಂದ ಮಾತ್ರ ಎಂಬುದು ನಮ್ಮ ಅಭಿಪ್ರಾಯ.

-ಮನೋಹರ ಪಾಟೀಲ್, ಊರು ಬೇಡ. - ರಾಷ್ಟ್ರೀಯ ಬಸವ ದಳದ ಪರಿಕಲ್ಪನೆ ನಮ್ಮದು-ಅದನ್ನು ಮಾತಾಜಿ ಬಳಸಿಕೊಂಡರು ಎಂದು ಒಬ್ಬರು ಹೇಳುತ್ತಿದ್ದಾರೆ. ಅಹುದೆ ?

★ ಕೆಲವರಲ್ಲಿ ಸ್ವತಂತ್ರವಾದ ವಿಚಾರಶಕ್ತಿ ಇರುತ್ತದೆ. ಅಂಥವರು ಒಂದೇ ವಿಷಯದಲ್ಲಿ ಕ್ರಿಯಾಶೀಲತೆ ತೋರಿಸದೆ ಇನ್ನೂ ಅನೇಕ ವಿಷಯಗಳಲ್ಲಿ ತೋರಿಸುವರು. ಉದಾಹರಣೆಗೆ ರಾಷ್ಟ್ರೀಯ ಬಸವ ದಳವು ಕಾರ್ಯಾಂಗವಾದರೆ ಬಸವ ಧರ್ಮ ಪೀಠ ನ್ಯಾಯಾಂಗ, ಬಸವ ಧರ್ಮ ಸಂಸತ್ ಶಾಸಕಾಂಗ ಎಂಬುದು. ಈ ಮೂರು ಸಂಸ್ಥೆಗಳ ಪರಿಕಲ್ಪನೆ ನಮ್ಮ ಚಿಂತನೆಯ ಫಲ. ನಿಮ್ಮ ಊರಿನವರೂ ಅಂಥದು ಮಾಡಿದ್ದರೆ ಅವರನ್ನು ಅಭಿನಂದಿಸಿರಿ. ಐನ್‌ಸ್ಟೈನ್ ರಿಲೆಟಿವಿಟಿ ಸಿದ್ಧಾಂತ ಕಂಡು ಹಿಡಿದ ಮೇಲೆ ಅದರ ಬಗ್ಗೆ ಉಪನ್ಯಾಸ ನೀಡಲು ಬಹಳ ಆಹ್ವಾನ ಬರುತ್ತಿದ್ದವು. ಮೊದಲನೆಯ ಬಾರಿಗೇ ಆಳವಾದ ವಿಷಯ ಪ್ರತಿಷಾದನೆ ಅಗತ್ಯವಿರಲಿಲ್ಲ. ಹೀಗಾಗಿ ಅವರ ಲಿಖಿತ ಪ್ರಬಂಧವನ್ನು ತಾನೇ ಐನಸ್ಟನ್ ಎಂದು ಹೇಳಿಕೊಂಡು ಅವರ ಕಾರಿನ ಡ್ರೈವರ್ ಓದಲು ಐನ್‌ಸ್ಟನರನ್ನು ಅನುಮತಿ ಕೇಳಿದ. ಅವರು ನಕ್ಕು ಒಪ್ಪಿದರು. ಪ್ರಬಂಧ ಓದಿ ಮುಗಿಸಿದ. ಓರ್ವ ವಿಜ್ಞಾನಿ ತುಂಬಾ ಕ್ಲಿಷ್ಟಕರ ಪ್ರಶ್ನೆ ಕೇಳುತ್ತಲೇ ಉತ್ತರಿಸಲಾರದೆ ತಬ್ಬಿಬ್ಬಾದ. ಆಗ ಸಭೆಯಲ್ಲಿ ಶ್ರೋತೃವಾಗಿ ಈ ತಮಾಷೆ ನೋಡುತ್ತಿದ್ದ ಐನ್‌ಸ್ಟೀನ್ ಎದ್ದು ನಿಂತು, "ನಾನು ಅವರ ಕಾರ್ ಡ್ರೈವರ್. ನಾನೇ ಉತ್ತರಿಸಬಹುದಾದ ಪ್ರಶ್ನೆ ಇದು. ಇಂಥದಕ್ಕೆ ಅವರೇಕೆ ಉತ್ತರಿಸಬೇಕು ?" ಎಂದು ನುಡಿದು ವೇದಿಕೆಗೆ ಬಂದು ಉತ್ತರಿಸಿದರು. ಇಲ್ಲೂ ಹಾಗಾಗದೆ ಇರಲು ಆ ಪ್ರಚಾರ ಪ್ರಿಯರು ಮುನ್ನೆಚ್ಚರಿಕೆ ವಹಿಸಬೇಕಲ್ಲವೆ ?

★

ಕೂಡಲಸಂಗಮದೇವಾ ಕಾಣೆಯಾಗಿದ್ದಾನೆ ?!

ಜುಲೈ-2000ದ ಕಲ್ಯಾಣ ಕಿರಣ ಪುಟ 30ರಲ್ಲಿ ಶರಣರಾದ ಆರ್.ಎಸ್.ಪಾಟೀಲರ ವಚನಾಂಕಿತ-ಒಂದು ಸಲಹೆ ಎಂಬ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಬರೆದ ಪತ್ರವೊಂದು ಪ್ರಕಟವಾಗಿದೆ. ಇಂಥ ಪತ್ರವೊಂದನ್ನು ಪ್ರಕಟಿಸುವುದರ ಮೂಲಕ ಪೂಜ್ಯರು ಪತ್ರಿಕಾ ಧರ್ಮದ ಪಾರದರ್ಶಕತ್ವವನ್ನು ಮತ್ತು ತಮ್ಮ ಮನೋಬಲವನ್ನು ಪ್ರದರ್ಶಿಸಿದ್ದಾರೆ !!

ಪತ್ರ, ಬರೆದವರಿಗೆ ಬಸವ ಧರ್ಮದ ಮೂಲ ಚಿಂತನೆ, ಅಂತಃಸತ್ವ, ಎದೆಗಾರಿಕೆಗಳು ಅರ್ಥವಾಗಿಲ್ಲವೆಂದೇ ಹೇಳಬೇಕು. ಏಕೆಂದರೆ ಕನ್ನಡದ ಖ್ಯಾತ ಸಾಹಿತಿಗಳಾಗಿದ್ದ ದಿವಂಗತ ಅ.ನ.ಕೃ ಅವರು ತಮ್ಮ ಕೃತಿ ಶ್ರೀ ಬಸವಣ್ಣನವರ ಅಮರವಾಣಿಯಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ,

''ಬಸವಣ್ಣನವರ ವಾಣಿಯಲ್ಲಿರುವ ಸತ್ಯವನ್ನು ಪ್ರತಿಪಾದಿಸುವ ಮೂಲಕ ವಿವಾದ-ಚರ್ಚೆಗಳಿಗೆ ಎಡೆಮಾಡದೆ, ಅವರ ವಚನಗಳನ್ನು ಮಾತ್ರ ಮುದ್ರಿಸಿ ಕನ್ನಡಿಗರ ಕೈಯಲ್ಲಿಡುವ ಕಿರುಪ್ರಯತ್ನ ಮಾಡಿದ್ದೇನೆ.''

ಈ ಮಾತುಗಳು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ಸದ್ಯ (ತ್ಯ) ದ ನಿಲುವಿಗೆ ಬಹಳ ಹತ್ತಿರವಾಗಿದೆ ಎಂಬುಧು ಇತ್ತೀಚಿನ ವಿದ್ಯಮಾನಗಳಿಂದ ವೇದ್ಯವಾಗುತ್ತಿದೆ. ಪಾಟೀಲರು ಪತ್ರದಲ್ಲಿ ''-------- ವಚನಾಂಕಿತದಲ್ಲಿ ಅಣ್ಣ ಬಸವಣ್ಣನವರು ತಪ್ಪಿನಿಂದಾಗಿ ಬಳಕೆ ಮಾಡಿದ್ದನ್ನು ಸಂಶೋಧನೆಯಿಂದ ಕಂಡುಹಿಡಿದು ಲಿಂಗದೇವ ಎಂದು ಬದಲಿಸಿ -------'' ಎಂದು ಬರೆದಿದ್ದಾರೆ. ಪೂಜ್ಯರು ಎಲ್ಲಿಯೂ ಈ ರೀತಿ ಧರ್ಮಪಿತರ ಮೇಲೆ ತಪ್ಪನ್ನು ಹೊರಿಸಿ, ತಮ್ಮತನವನ್ನು ಮೆರೆಸಿಕೊಳ್ಳುವ ಸಾಹಸಮಾಡಿದ್ದು, ಅವರ ಸಮೀಪವರ್ತಿಗಳಾದ ನಮಗೇ ತಿಳಿದಿಲ್ಲವೆಂದ ಮೇಲೆ ತತ್ತ್ವ-ಧರ್ಮ ಯಾವ ಸಂಬಂಧವೂ ಇಲ್ಲದ ಪಾಟೀಲರಿಗೆ ಈ ವಿಷಯ ತಿಳಿದದ್ದು ಹೇಗೆ ಎಂಬುದು ಹಾಸ್ಯಾಸ್ಪದವಾಗಿದೆ. ಇದೊಂದು ಕುಚೋದ್ಯದ ಆರೋಪವಲ್ಲದೆ ಬೇರೇನೂ ಅಲ್ಲ ಎಂಬುದು ಮೇಲ್ನೋಟಕ್ಕೆ ತಿಳಿದುಬರುತ್ತಿದೆ. ಏಕೆಂದರೆ ಬಸವ ವಚನ ದೀಪ್ತಿಯ ವಿರೋಧಿಗಳನ್ನು ಗಮನಿಸಿದಾಗ ನಮಗೆ ಈ ವಿಷಯ ಚೆನ್ನಾಗಿ ಮನದಟ್ಟಾಗುತ್ತಿದೆ. ಅವರ ಪರದಾಟ, ಹುಯ್ಲು, ಪ್ರವಚನಕಾರರ ಬೆನ್ನು ಹತ್ತಿ ಪ್ರತಿಭಟಿಸುವುದು, ಪತ್ರಿಕೆಗಳಿಗೆ ಈ ಸಂಬಂಧ ಜಾಹಿರಾತು ಕೊಡುವುದು ಮುಂತಾದ ವ್ಯರ್ಥ ಪ್ರಯತ್ನಗಳನ್ನು ನೋಡಿದರೆ ಅವರು ಲಿಂಗದೇವನನ್ನು ವಿರೋಧಿಸುತ್ತಿಲ್ಲವೆಂದೇ ಖಚಿತವಾಗಿ ತಿಳಿದುಬರುತ್ತಿದೆ. ಪಾಪ !! ಅವರ ನೆಚ್ಚಿನ ಕೂಡಲಸಂಗಮದೇವ ಕಾಣೆಯಾಗಿದ್ದಾನೆ ಎಂದುಕೊಂಡು, ಅವನಿಗಾಗಿ ಹುಡುಕಾಡುತ್ತಿದ್ದಾರೆ.

ಈ ಮಧ್ಯೆ ಧರ್ಮಪಿತ ಬಸವಣ್ಣನವರ ಘನತೆ, ಹಿರಿಮೆ, ಸಾಧನೆ ಇರುವುದು ಜಗದಗಲ-ಮುಗಿಲಗಲನಾದ ವಿಶ್ವಾತ್ಮನನ್ನು ಚುಳುಕಾಗಿಸಿದ್ದಲ್ಲದೆ, ಲಿಂಗದೇವನಿಗೆ ಆಪತ್ತು (?) ಒದಗಿದಾಗ ಅವರ ರಕ್ಷಣೆಗೆಂದು ಒಂದು ಬಲಿಷ್ಠವಾದ ಶರಣ ಪಡೆಯನ್ನು ರೂಪಿಸುವುದರಲ್ಲಿ ಅಪ್ಪನವರ ಮಹಿಮೆ ಅಡಗಿತ್ತು ಎಂಬ ಸರಳ ಸತ್ಯ ಪಾಟೀಲರಿಗೇಕೆ ಹೊಳೆಯಲಿಲ್ಲ ಎಂಬುದು ನಮಗೆ ತಿಳಿಯದಾಗಿದೆ. ಈ ಮಾತಿಗೆ ಅಪ್ಪನವರೇ ತಮ್ಮ ವಚನದಲ್ಲಿ ದಾಖಲೆಯನ್ನು ಒದಗಿಸಿದ್ದಲ್ಲದೇ ಪ್ರತ್ಯಕ್ಷ ಸಾಕ್ಷಿಯನ್ನು ತೋರಿಸುವ ಮೂಲಕ ತಮ್ಮ ಸತ್ಪರಂಪರೆಯನ್ನು ಉಳಿಸಿಕೊಂಡು ಬೆರಗು ಹುಟ್ಟಿಸಿದ್ದಾರೆ. ಬಸವವಾಣಿ ತಮ್ಮ ಶರಣರ ನಿಲುವಿನ ಬಗ್ಗೆ ಹೀಗೆ ಉಲಿಯುತ್ತಿದೆ.

ಕೋಪಿ ಮಜ್ಜನಕ್ಕೆರೆದರೆ ರಕ್ತದ ಧಾರೆ !
ಪಾಪಿ ಹೂವನೇರಿಸಲು ಮಸೆದಾಯುಧದ ಗಾಯ !

ಕೂಪವನಾರನೂ ಕಾಣೆನು ಮಾದಾರ ಚನ್ನಯ್ಯನಲ್ಲದೆ
ಕೂಪವನಾರನೂ ಕಾಣೆನು ಡೋಹರ ಕಕ್ಕಯ್ಯನಲ್ಲದೆ
ಆಪತ್ತಿಗುಳ್ಳವ ನಮ್ಮ ಮಡಿವಾಳ ಮಾಚಯ್ಯ
ನಿನ್ನಾಪತ್ತಿಗರಿವರಯ್ಯಾ ಲಿಂಗದೇವಯ್ಯ !

ಇದು 12ನೇ ಶತಮಾನದ ಮಾತಾಯಿತು. ಇನ್ನು 21ನೇ ಶತಮಾನಕ್ಕೆ ಬಂದರೆ ಬಸವಕಾಲದಲ್ಲಿ ಅಮೂಲ್ಯನು ಅಪ್ರಮಾಣನೂ ಅಗೋಚರನು ಆಗಿದ್ದ ಲಿಂಗದೇವನು ಬಸವಾದಿ ಪ್ರಮಥರ ನಂತರ ಮತಾಂಧರ, ಪುರೋಹಿತಶಾಹಿಗಳ ಸ್ವಾರ್ಥಿಗಳ ಕೈಯಲ್ಲಿ ಸಿಕ್ಕಿ ಮತ್ತೆ ನಾಲ್ಕು ಗೋಡೆಗಳ ಮಧ್ಯೆ ಬಂಧಿತನಾಗಿ ತೊಂದರೆಗೊಳಗಾಗಿದ್ದ !! ಈತನ ಕಷ್ಟವನ್ನು ಅರಿತ ಪೂಜ್ಯ ಶ್ರೀ ಬಸವಾತ್ಮಜೆಯವರು ಬಸವಣ್ಣನವರ ನೆರವಿನೊಂದಿಗೆ, ಬಸವ ವಚನ ದೀಪ್ತಿಯ ಮೂಲಕ ಲಿಂಗದೇವನನ್ನು ಬಿಡಿಸಿ ಸ್ವತಂತ್ರಗೊಳಿಸಿರುವುದು ಈಗ ಸರ್ವವೇದ್ಯವಾಗಿದೆ. ಈಗವನು ನಮ್ಮೆಲ್ಲರ (ಬಸವ ಪಥಿಕರ) ನಡುವೆ ಸಂತೋಷವಾಗಿದ್ದಾನೆ !!

ಆರ್.ಎಸ್.ಪಾಟೀಲರಿಗೆ ಒಂದು ಅಮೂಲ್ಯವಾದ ಸಲಹೆಯನ್ನು ಕೊಡಲು ಬಯಸುತ್ತೇನೆ. ಕೂಡಲಸಂಗಮದೇವ ಎಲ್ಲಿಯೂ ತಪ್ಪಿಸಿಕೊಳ್ಳದೆ ತನ್ನ ಮೂಲಸ್ಥಾನವಾದ ಕೂಡಲಸಂಗಮದಲ್ಲಿ ಸುರಕ್ಷಿತವಾಗಿಯೂ, ಸ್ವಸ್ಥನಾಗಿಯೂ ಇದ್ದಾನೆ ಎಂಬುದನ್ನು ಇನ್ನು ಮುಂದಾದರೂ ಮನಗಂಡು ಲಿಂಗದೇವ-ಕೂಡಲಸಂಗಮದೇವಾ ಇವರಿಂದ ಉಂಟಾಗಿರುವ ಗೊಂದಲದಿಂದ ಹೊರಬರಬೇಕೆಂದು ನಮ್ರತೆಯಿಂದಲೇ ಸೂಚಿಸುತ್ತೇವೆ.

ಕುಹಕ ಸಲಹೆಯ ಬಗ್ಗೆ

ಆರ್.ಎಸ್.ಪಾಟೀಲರು ಅತಿಬುದ್ಧಿವಂತಿಕೆಯ ಸಲಹೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಜಗನ್ಮಾತಾ ಅಕ್ಕಮಹಾದೇವಿ ತಮ್ಮ ವಚನಾಂಕಿತದಲ್ಲಿ ಚನ್ನಮಲ್ಲಿಕಾರ್ಜುನ ಎಂದು ಬಳಕೆಯಲ್ಲಿ ತಂದಿರುವುದಾಗಿ ಅವರ ವಚನ ಸಂಗ್ರಹಗಳನ್ನು ಓದಿದಾಗ ಗಮನಿಸಲಾಗಿದೆ. ಈ ಅಂಕಿತ ಶ್ರೀ ಶೈಲದ ಸ್ಥಾವರಲಿಂಗಾಂಕಿತವೆಂದು ತಿಳಿದು ಅಕ್ಕನಿಂದ ಕನಸಿನಲ್ಲಿ ಆದೇಶಪಡೆದು ಮಹಾದೇವ ಎಂದು ಬದಲಿಸಿ, ಅದರಂತೆ ಪ್ರಚಾರಕ್ಕೆ ತರಬೇಕೆಂದು ವ್ಯಂಗ್ಯವಾಗಿ ಸಲಹೆ ನೀಡಿದ್ದಾರೆ. ಸರಿ. ಇವರ ಮಾತುಗಳ ಬಗ್ಗೆ ಸ್ವಲ್ಪ ಚಿಂತಿಸೋಣ.

''ಶ್ರೀ ಪಾಟೀಲರೇ ಮೊದಲು ವಚನಗಳನ್ನು ಓದುವ, ಅರಿಯುವ, ಚಿಂತನೆಗೈಯುವ ಶೈಲಿಯನ್ನು ಕಲಿಯಿರಿ ; ನಂತರ ಬರೆಯಿರಿ. ಇಲ್ಲದಿದ್ದರೆ ಮಿಂಚುಹುಳವನ್ನು ನೋಡಿ ನರಿ ತನ್ನ ಬಾಲವನ್ನು ಹುಣ್ಣುಮಾಡಿಕೊಂಡಂತೆಯೂ, ಅನುಭವವಿಲ್ಲದ ಬಾಲಕ ಹೋಮ ಹವನಾದಿಗಳನ್ನು ಮಾಡಲು ಹೋಗಿ ಗಡ್ಡ-ಮೀಸೆ ಸುಟ್ಟುಕೊಂಡು ಬಂದಂತೆ ಹಾಸ್ಯಾಸ್ಪದವೂ ಅವಹೇಳನಕರವೂ ಆದೀತು.'' ಎಂದು ಹೇಳಬೇಕಾಗಿದೆ. ಏಕೆಂದರೆ ವಚನ ಪಿತಾಮಹರೆನಿಸಿಕೊಂಡಿದ್ದ ಲಿಂಗೈಕ್ಯ ಫ.ಗು.ಹಳಕಟ್ಟಿಯವರು ಒಂದು ಕಡೆ ಹೀಗೆ ಹೇಳಿದ್ದಾರೆ. ವಚನಗಳು ಸರಳಗನ್ನಡದಲ್ಲಿದ್ದರೂ ವಿಶಿಷ್ಟವಾದ ತಾತ್ತ್ವಿಕ ತರಬೇತಿ ಮತ್ತು ದಾರ್ಶನಿಕ ದೃಷ್ಟಿಕೋನವಿಲ್ಲದೆ ವಚನಗಳನ್ನು ಓದಿದರೆ ಅವು ಅರ್ಥವಾಗುವ ಬದಲು ಕಬ್ಬಿಣದ ಕಡಲೆಯಾಗುತ್ತವೆ.'' ಹಳಕಟ್ಟಿಯವರ ಈ ಮಾತುಗಳು ಪಾಟೀಲರಿಗೆ ಮತ್ತು ಅವರಂಥವರಿಗೆ ಚೆನ್ನಾಗಿ ಅನ್ವಯಿಸುತ್ತಿವೆ.

ಬಸವಾದಿ ಪ್ರಮಥರ ಕಾಲದಲ್ಲಿ ಆಧ್ಯಾತ್ಮಿಕ, ತಾತ್ತ್ವಿಕ, ಧಾರ್ಮಿಕ, ಸಾಮಾಜಿಕ ಶಕ್ತಿಗಳಿಂದ ತುಂಬಿಕೊಂಡು ಲಿಂಗಾಯತ ಸಮಾಜ ಆದರ್ಶಪ್ರಾಯವಾಗಿತ್ತು. ಕಾಲಾನಂತರ ಮಠಾಧೀಶರು, ಸಾಹಿತಿಗಳು, ಸಂಶೋಧಕರು, ರಾಜಕಾರಣಿಗಳು, ಜ್ಞಾನಿಗಳು, ಸಮಾಜ ಸುಧಾರಕರು ಎಂಬ

ಅಷ್ಟಪದಿಯ ಕೈಯಲ್ಲಿ ಸಿಕ್ಕಿ ಲಿಂಗಾಯತ ಸಮಾಜ ಇಂದು ಅಸ್ಥಿಪಂಜರವಾಗಿ ನಮ್ಮ ಮುಂದಿದೆ. ಸಮಾಜಕ್ಕೆ ಮತ್ತೆ ನವಚೈತನ್ಯ ಬರಬೇಕಾದರೆ ಬಸವಣ್ಣ-ವಚನ ಸಾಹಿತ್ಯವನ್ನು ಮೊರೆಹೋಗದೆ ವಿಧಿಯಿಲ್ಲ. ಇದನ್ನರಿತೆ ಪೂಜ್ಯ ಶ್ರೀ ಬಸವಾತ್ಮಜೆಯವರು ಒಂದೊಂದು ಚಿಕಿತ್ಸೆಗಳನ್ನು ಪ್ರಾರಂಭಿಸಿ ಯಶಸ್ವಿಯಾಗುತ್ತಿದ್ದಾರೆ. ಅದರಲ್ಲಿಲಿಂಗದೇವನ ಚಿಕಿತ್ಸೆಯೂ ಒಂದಾಗಿದೆ.

ಲಿಂಗಾಯತ ಸಮಾಜದಲ್ಲಿ ವಿದ್ಯಾವಂತರಿಗೆ, ಅಕ್ಷರಸ್ಥರಿಗೆ, ಪ್ರತಿಭಾವಂತರಿಗೆ ಕೊರತೆಯೇನೂ ಇಲ್ಲ. ಆದರೂ ಬಸವಣ್ಣ, ಲಿಂಗದೇವರು ಇವರಿಗೆ ಏಕೆ ನಿಲುಕುತ್ತಿಲ್ಲ ? ಎಂಬುದು ನಾಚಿಕೆಗೇಡಿನ - ಅವಮಾನದ ಸಂಗತಿಯಾಗಿದೆ. ಬಸವಕಾಲದಲ್ಲಿ ಸಮಾಜದ ಅತ್ಯಂತ ಕೆಳಸ್ತರದಿಂದ ಬಂದ ಬೀಸುವವರು, ಕುಟ್ಟುವವರು, ಅಂಬಿಗರು, ಸಮಗಾರರಂಥ ಜನಸಾಮಾನ್ಯರು ಸಹ ಬಸವ ತತ್ತ್ವವನ್ನು ಅರಗಿಸಿಕೊಂಡು ಬಾಳನ್ನು ಹಸನು ಮಾಡಿಕೊಂಡು ಮುಂದಿನ ಜನಾಂಗಕ್ಕೆ ನುಡಿಮುತ್ತುಗಳನ್ನು ಕೊಟ್ಟು ಹೋಗಿರುವುದು ಪವಾಡ ಸದೃಶವಾಗಿದೆ.

ಸ್ಥಾವರಲಿಂಗ, ಚರಲಿಂಗ, ಇಷ್ಟಲಿಂಗ- ಇವುಗಳ ಮೂಲಭೂತ ವ್ಯತ್ಯಾಸ ತಿಳಿಯದ ಒಂದು ಉದಾಹರಣೆಯನ್ನು ತಮ್ಮ ಮುಂದಿಡುತ್ತೇನೆ. ಬಸವ ಪಥ, ಜುಲೈ 2000, ಪುಟ 8-9 ರಲ್ಲಿ ಶರಣರಾದ ಪ್ರೊ|| ಬಿ. ವಿರುಪಾಕ್ಷಪ್ಪನವರ ಸ್ವರಚಿತ ವಚನಗಳು ಮುದ್ರಣವಾಗಿವೆ. ಸಂತೋಷ. ಇವರ ವಚನಗಳ ಅಂಕಿತ ಹೀಗಿದೆ. ''ಇಷ್ಟಲಿಂಗ ರೂಪಿ ಹಂಪೆಯ ವಿರುಪಾಕ್ಷೇಶ್ವರ !'' ಅಯ್ಯೋ ! ಬಸವ ತಂದೆ ವಿಶ್ವದಾಕಾರದಲ್ಲಿ ದೇವನನ್ನು ದೇಹದಾಕಾರದಲ್ಲಿ ಜೀವನನ್ನು ರೂಪಿಸಿ ; ಬ್ರಹ್ಮಾಂಡದಲ್ಲಿ ಪಿಂಡಾಂಡವಿದೆ, ದೇವನ ಗರ್ಭದಲ್ಲಿ ಜೀವನು ಇದ್ದಾನೆ ಎಂದು ನೀನು ಕೊಟ್ಟ ಘನ ತತ್ತ್ವವೆಲ್ಲಿ ? ಹಂಪೆಯ ಸ್ಥಾನಪತಿ ವಿರುಪಾಕ್ಷನೆಲ್ಲಿ ?? ಅಯ್ಯೋ ದೇವರೇ !! ಬಹುದೇವತೋಪಾಸನೆ ಎಂಬ ಅಂಟುಜಾಡ್ಯದಿಂದ ಲಿಂಗಾಯತ ಸಮಾಜ ಹೊರಬರುವುದು ಯಾವಾಗ ??? ಈ ಸಮಾಜದಲ್ಲಿರುವ ಪ್ರಜ್ಞಾವಂತರಿಗೆ ಜ್ಞಾನೋದಯವಾಗುವುದು ಎಂದು ???

ಬಸವ ತಂದೆಯೇ !! ನಿನ್ನ ಮಕ್ಕಳಲ್ಲಿ ಧರ್ಮಜಾಗೃತಿಯಾಗಿ ಪ್ರಬಲವಾದ ಸಮಾಜ ಸಂಘಟನೆಯಾಗಲು ಇನ್ನು ಎಷ್ಟು ದಿನ ಬೇಕು ? ವಚನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ದೇವನನ್ನು ಮೊಟ್ಟ ಮೊದಲ ಬಾರಿಗೆ ಗುರುತಿಸಿ, ಅವನಿಗೆ ತಾತ್ತ್ವಿಕ - ಯೋಗಿಕ ಆಕಾರವನ್ನು, ಪ್ರಥಮ ಆದ್ಯತೆಯನ್ನು ಕೊಟ್ಟವರು ಸ್ವಯಂಕೃತ, ಧರ್ಮಪಿತ ಬಸವಣ್ಣನವರು ಮಾತ್ರ ಎಂದು ತಿಳಿದು ಬರುತ್ತದೆ. ಅಲ್ಲದೆ ಕಾಲಾನಂತರದಲ್ಲಿ ಈ ತತ್ತ್ವ ಪುರೋಹಿತಶಾಹಿಗಳ ಕೈಯಲ್ಲಿ ಸಿಕ್ಕಿ ವಿಕೃತಗೊಂಡಿದ್ದು ಅರಿವಿಗೆ ಬರುತ್ತದೆ. ಈ ಕಾರಣಕ್ಕಾಗಿಯೇ ವಿಕೃತಿ ಹೊಂದಿದ್ದ ಲಿಂಗತತ್ತ್ವವನ್ನು ಸಕ್ರಮಗೊಳಿಸಲಿಕ್ಕಾಗಿ ಲಿಂಗದೇವನ ಪ್ರತಿಷ್ಠಾಪನೆಯಾಗಿದ್ದು.

ಮತ್ತೊಂದು ಮುಖ್ಯವಾದ ವಿಷಯವೆಂದರೆ ಬಸವಣ್ಣನವರ ಸಮಕಾಲೀನ ಮತ್ತು ನಂತರ ವಚನಕಾರರೆಲ್ಲ ತಮ್ಮ ಇಹಪರದ ಆರಾಧ್ಯಗುರು ಬಸವಣ್ಣನವರಿಗೆ ಅಗ್ರಪೀಠವನ್ನು, ಲಿಂಗದೇವನಿಗೆ ಎರಡನೆ ಸ್ಥಾನವನ್ನು ನೀಡಿದ್ದಾರೆ. ಅಷ್ಟೇ ಅಲ್ಲ ಬಸವಣ್ಣ ಮತ್ತು ಬಸವಣ್ಣವರ ದೇವರು- ಈ ಇಬ್ಬರ ನಡುವೆ, ಬಸವ ಬಲದಿಂದ ತಾವು ಸಾಧಿಸಿ ಪಡೆದ ಘನವ್ಯಕ್ತಿತ್ವವೇ ಮುಖ್ಯವಾಗಿ ದೇವನು ಗೌಣವಾಗಿದ್ದಾನೆ. ಈ ಹಿನ್ನೆಲೆಯಲ್ಲಿ ಬರೆದ ವಚನಗಳ ಅಂಕಿತಗಳು ಸ್ಥಾವರಲಿಂಗದ ನಾಮಗಳೇ ಆಗಿರಲಿ ಲಿಂಗದೇವನೇ ಆಗಿರಲಿ ಇಬ್ಬರೂ ಲೇವಡಿಗೆ ಒಳಗಾಗಿದ್ದಾರೆ. ಉದಾ :

1. ಬಸವಣ್ಣಾ, ನಿಮ್ಮ ಸದ್ಭಕ್ತಿಯ ತಿಳದು
   ಎನಗೆ ನಿಜವು ಸಾಧ್ಯವಾಯಿತ್ತಯ್ಯಾ
   ಚನ್ನಮಲ್ಲಿಕಾರ್ಜುನಯ್ಯನ ಹೆಸರಿಟ್ಟ ಗುರು

   ನೀವಾದ ಕಾರಣ ನಿಮ್ಮ ಶ್ರೀಪಾದಕ್ಕೆ ನಮೋ
   ನಮೋ ಎನುತಿರ್ದೆನು ಕಾಣಾ ಸಂಗನ ಬಸವಣ್ಣಾ....
2. ಅತಿಕಾಮಿ ಚನ್ನಮಲ್ಲಿಕಾರ್ಜುನಂಗೆ ತೊಡರನಿಕ್ಕಿ
   ಎರಡುವರಿಯದೆ ಕೂಡಿದೆನು ಬಸವಾ ನಿಮ್ಮ ಕೃಪೆಯಿಂದ — -ಅಕ್ಕಮಹಾದೇವಿ
3. ಎಲೆ ಕಪಿಲಸಿದ್ದ ಮಲ್ಲಿನಾಥಯ್ಯ, ನಾ ಧರಿಸಿಕೊಂಬುವೆ ಲಿಂಗವ
   ನೀ ಕರೆಸಿಕೊಂಬುವನಾಗು ಮತ್ತೋರ್ವನ ನಿನ್ನ ಪೂಜೆಗೆ
   ನಾ ನಿನ್ನವನಲ್ಲೆಲೆ ದೇವಾ ! — -ಶ್ರೀ ಸಿದ್ಧರಾಮೇಶ್ವರ
4. ಅಯ್ಯಾ ನಿನ್ನ ಧ್ಯಾನದಲ್ಲಿರಿಸಲೊಲ್ಲದೆ ಬಸವಣ್ಣನ
   ಧ್ಯಾನದಲ್ಲಿರಿಸಯ್ಯಾ ಎನ್ನನು. — -ಮಡಿವಾಳ ಮಾಚಿದೇವರು
5. ನಮ್ಮ ಕಟ್ಟಿನ ನೇಮದ ನಿಷ್ಠೆ ನೀನೆಯಯ್ಯಾ
   ಅಮರೇಶ್ವರ ಲಿಂಗದ ಒಡಲು ಸಂಗನ ಬಸವಣ್ಣಾ — -ಆಯ್ದಕ್ಕಿ ಮಾರಯ್ಯಾ
6. ಕರುಣೆ ಕಪಿಲಸಿದ್ಧಮಲ್ಲಿನಾಥಯ್ಯಾ
   ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ — -ಶ್ರೀ ಸಿದ್ಧರಾಮೇಶ್ವರ
7. ನಮ್ಮ ಗುಹೇಶ್ವರ ಲಿಂಗಕ್ಕೆ ವಿಳಾಸವಾದಯಲ್ಲೆ ಸಂಗನ ಬಸವಣ್ಣಾ — -ಅಲ್ಲಮಪ್ರಭುದೇವರು

ಇಂಥ ಅಸಂಖ್ಯಾತ ವಚನ ಸಾಲುಗಳು ವಚನ ಸಾಹಿತ್ಯದಲ್ಲಿ ಸಿಗುತ್ತವೆ. ಇದನ್ನು ಸರಿಯಾಗಿ ಅರಿತುಕೊಂಡರೆ ಉಳಿದ ಶರಣರ ವಚನಾಂಕಿತಗಳಿಗೆ ಬದಲಾವಣೆಯಾಗಲಿ, ತಿದ್ದುಪಡಿಯಾಗಲಿ, ಪ್ರಕ್ಷಿಪ್ತತ್ವವಾಗಲಿ ಅಗತ್ಯವಿದ್ದಂತೆ ಕಾಣುತ್ತಿಲ್ಲ.

ಆದ್ದರಿಂದ ಪಾಟೀಲರಾಗಲಿ ಅವರಂಥ ಇತರ ಕುಹಕಿಗಳಾಗಲಿ ತಮ್ಮ ಬುದ್ಧಿ-ಪ್ರತಿಭೆಗಳನ್ನು ಮತ್ಸರ ಕುಟಿಲ, ಕುಹಕತನಗಳಿಗೆ ಒತ್ತೆ ಇಡದೆ ಬಸವ ಸತ್ಯವನ್ನು ಇದ್ದಂತೆ ಅರಿಯುವ ಪ್ರಯತ್ನಕ್ಕೆ ಬಳಸಬೇಕೆಂದು ಸೂಚಿಸುತ್ತೇವೆ. ತಮ್ಮ ಪಂಚೇಂದ್ರಿಯಗಳನ್ನು ವ್ಯರ್ಥಗೊಳಿಸದೆ ಕಲಿಗಳನ್ನಾಗಿ ಮಾಡಿಕೊಂಡು ಬಸವಣ್ಣ-ಲಿಂಗದೇವರನ್ನು ಹಿಡಿದರೆ ತಮ್ಮಿಂದ ಲೋಕಕಲ್ಯಾಣವಾದೀತೆಂದು ಬೋಧಿಸುತ್ತಾ ಈ ಲೇಖನಿಯನ್ನು ಕೆಳಗಿಡುತ್ತೇನೆ.

-ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬಸವ ಗಂಗೋತ್ರಿ, ಕುಂಬಳಗೋಡು

ಧರ್ಮದ ಕಾಳಜಿ

ಬಂದಿತು ಬಂದಿತು ಜನಗಣತಿಯ ಸಮಯ
ತೋರಿರಿ ನೀವೆಲ್ಲ ಧರ್ಮದ ಕಾಳಜಿಯ
ಸ್ವತಂತ್ರ ಧರ್ಮ ನಮ್ಮದೆಂದು ಸಾರಿ ಸಾರಿ ಹೇಳುವ
ಜನಗಣತಿಯಲಿ "ಲಿಂಗಾಯತ" ಎಂದೆ ನಾವು ಬರೆಸುವ
ಧರ್ಮಗುರು, ಧರ್ಮಕ್ಷೇತ್ರ, ಧರ್ಮಲಾಂಛನ ಹೊಂದಿದೆ
ಧರ್ಮ ಧ್ವಜ, ಧರ್ಮಭಾಷೆ ಧರ್ಮ ಧ್ಯೇಯ ಹೊಂದಿದೆ
ಸೋದರತ್ವದ ಬತ್ತಿ ಹೊಸೆದು ಜಾತೀಯತೆಯ ತಿಮಿರ ಕಳೆದು
ಧರ್ಮದ ಹಣತೆಗಿಂದು ನಾವು ಜ್ಞಾನ ತೈಲವೆರೆಯುವ
ಮರೆವಿನಿಂದ ನಡೆದಿರಲು ಅರಿವು ತೋರೆ ಗುರುವಿರಲು
ಧರ್ಮ ಕಹಳೆ ಊದಲು ಜನಗಣತಿಯೆ ಮೆಟ್ಟಲು
ಧರ್ಮ ಗುರುವ ನೆನೆಯುವ ಧರ್ಮಕಾಗಿ ಶ್ರಮಿಸುವ
ಧರ್ಮದುಳಿವು ನಮ್ಮ ಉಸಿರು ಸಾರಿ ಸಾರಿ ಹೇಳುವ

-ವಿ. ನಿರ್ಮಲಾ ಪ್ರಭಾಕರ್, ಗಣನಾಯಕನಹಳ್ಳಿ

ಬೆಳಕಿನಲ್ಲಿ ದರ್ಪಣವ ಹಿಡಿದರೆ
ಮೊಗ ಕಾಣುವುದು
ಕತ್ತಲಲ್ಲಿ ದರ್ಪಣವ ಹಿಡಿದರೆ
ಮೊಗ ಕಾಣದು
ಹಾಗೆ, ಗುರುವಿನ ಮಾರ್ಗ ದರ್ಶನವೆಂಬ
ಬೆಳಕಿನಲ್ಲಿ, ಲಿಂಗವೆಂಬ ದರ್ಪಣವನ್ನು
ಪೂಜಿಸಿದರೆ, ತನ್ನ ತಾನರಿಯಬಹುದು
ಬಸವ ಪ್ರಿಯ ಲಿಂಗತಂದೆ

ಅವಿನಾಶ್ ಕವಿ, ಭದ್ರಾವತಿ

ಮಾತೆಯಾಗಿ ಶರಣ ವೃಂದಕ್ಕೆಲ್ಲ
ತಾರೆಯಾಗಿ ಜ್ಞಾನದ ಬೆಳಕನ್ನು ನೀಡಿ
ಜೀವನ ಪರ್ಯಂತ ನಮ್ಮನ್ನು
ಮುನ್ನಡೆಸಲೆಂದು, ಆಯುಷ್ಯ ನೀಡೆಂದು
ಬೇಡವೆ ಬಸವ ಪ್ರಿಯ ಲಿಂಗ ತಂದೆ

ವೀರಶೈವ ಧರ್ಮ ಚರಿತ್ರೆ (ಮೂರನೆಯ ಭಾಗ)

ವಿಮರ್ಶೆ -ಮಾತಾಜಿ

(ಡಾ|| ಎಂ. ಚಿದಾನಂದ ಮೂರ್ತಿಯವರ ಲೇಖನ, ಕನ್ನಡ ಪ್ರಭಾದ ದಿ. 24-5-2000ರ ಸಂಚಿಕೆಯಲ್ಲಿ ಪ್ರಕಟವಾಯಿತು. ಆ ಲೇಖನದ ಎರಡು ಭಾಗಗಳನ್ನು ಕ್ರಮವಾಗಿ ಜುಲೈ ಮತ್ತು ಆಗಸ್ಟ್ ಕಲ್ಯಾಣ ಕಿರಣದಲ್ಲಿ ಕೊಡಲಾಯಿತು. ಉತ್ತರವನ್ನು ಆ ಎರಡು ಸಂಚಿಕೆಗಳಲ್ಲಿ ಕೊಡಲಾಗಿದೆ. ಅಪೂರ್ಣವಾಗಿದ್ದರಿಂದ ಈಗ ಮುಂದುವರಿಸಲಾಗಿದೆ. ಚಿದಾನಂದ ಮೂರ್ತಿಯವರ ವಿಚಾರಗಳಿಗಾಗಿ ಆಗಸ್ಟ್ ಸಂಚಿಕೆಯ ಪುಟ 14 ನೋಡಬೇಕು. ಪುನರಾವರ್ತನೆಯಾಗಬಾರದೆಂದು ಈಗ ಕೊಟ್ಟಿಲ್ಲ.)

ದಿ. 21-8-2000ದಂದು ಶಿವಮೊಗ್ಗದಲ್ಲಿ 'ಹೊಸದಿಗಂತ' ಪತ್ರಿಕೆಯ ಪ್ರತಿನಿಧಿಗಳು ನನ್ನನ್ನು ಸಂದರ್ಶಿಸಿದರು. ಬೆಳಿಗ್ಗೆ 11-30ರಿಂದ ಮಧ್ಯಾಹ್ನ 1-30ರವರೆಗೆ ಪ್ರಶ್ನೋತ್ತರ ನಡೆಯಿತು. ಒಂದು ಪ್ರಶ್ನೆ ಹೀಗಿತ್ತು. "ಶ್ರೀ ರಾಮಾಜೋಯಿಸ್ ಎಂಬುವವರು ಬರೆದಿದ್ದಾರೆ. ಶ್ರೀ ಬಸವಣ್ಣನವರು ಉಪನಿಷತ್-ಭಗವದ್ಗೀತೆಗಳಲ್ಲಿ ಏನು ಸಂಸ್ಕೃತದಲ್ಲಿ ಹೇಳಲ್ಪಟ್ಟಿದೆಯೋ ಅದನ್ನೇ ಸರಳಗನ್ನಡದಲ್ಲಿ ವಚನಗಳ ರೂಪದಲ್ಲಿ ಹೇಳಿದ್ದಾರೆ ಎಂದು. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?"

"ಇದನ್ನು ನಾನು ಸಂಪೂರ್ಣವಾಗಿ ನಿರಾಕರಿಸುತ್ತೇನೆ. ಯಾವಾಗಲೂ ನೀತಿಗೆ (moral values) ಸಂಬಂಧಿಸಿದ ಕೆಲವು ಮಾತುಗಳು, ಅಧ್ಯಾತ್ಮಿಕ ಅನುಭವಕ್ಕೆ ಸಂಬಂಧಿಸಿದ ಕೆಲವು ಪರಸ್ಪರ ಹೋಲಿಕೆ ಹೊಂದಿರುತ್ತವೆ. ಯಾವ ಧರ್ಮವೂ ಕಳುವು ಮಾಡು, ಕೊಲ್ಲು, ಹಿಂಸಿಸು, ಸುಳ್ಳು ಹೇಳು ಎಂದು ಹೇಳುವುದಿಲ್ಲ. ಹಾಗೆ ಕೆಲವೊಂದು ಸಾಮ್ಯಗಳು ಇರಬಹುದು. ಆದರೆ ಮೂಲಭೂತವಾಗಿ ವೈದಿಕ ಧರ್ಮ ಬಸವೋಕ್ತ ಲಿಂಗಾಯತ ಧರ್ಮಕ್ಕೆ ವ್ಯತ್ಯಾಸವಿದೆ, ಇವು ಪರಸ್ಪರ ತದ್ವಿರುದ್ಧ ನಿಲುವು ತಾಳಿವೆ." ಎಂದು ಹೇಳಿ ಕೆಲವು ಉದಾಹರಣೆ ನೀಡಿದೆ.

1. ಭಗವದ್ಗೀತೆ ಹೇಳುತ್ತದೆ, " ಓರ್ವ ವ್ಯಕ್ತಿ ಕ್ಷುದ್ರ ದೈವಂಗಳ ಉಪಾಸನೆ ಮಾಡಬಹುದು, ನಿರಾಕಾರ ಬ್ರಹ್ಮನ ಉಪಾಸನೆ ಮತ್ತೊಬ್ಬ ಮಾಡಬಹುದು. ಆದರೆ ಎಲ್ಲ ನದಿಗಳು ಸಮುದ್ರವನ್ನು ಸೇರುವಂತೆ ಎಲ್ಲವೂ ದೇವರನ್ನೇ ಸೇರುತ್ತವೆ."

ಇದನ್ನು ಬಸವಣ್ಣನವರು ವಿರೋಧಿಸುತ್ತಾರೆ. "ಯಾವುದೇ ದಾರಿಯಲ್ಲಿ ಹೋದರೂ ಮುಟ್ಟುವುದು ಒಂದೇ ಗುರಿ ಎಂಬ ಈ ವಾದ ತಪ್ಪು. ಸರಿದಾರಿಯಲ್ಲಿ ಹೋದರೆ ಮನುಷ್ಯ ಗುರಿ ಮುಟ್ಟುತ್ತಾನೆ. ಹಳ್ಳಕೊಳ್ಳದ ದಾರಿ ಹಿಡಿದರೆ ಪ್ರಪಾತಕ್ಕೆ ಬೀಳುತ್ತಾನೆ. ಕಣ್ಣು ಕಟ್ಟಿಕೊಂಡು ಎತ್ತು ಗಾಣವನ್ನು ಸುತ್ತಿದಂತೆ" ಎಂದು ಟೀಕಿಸುತ್ತಾರೆ. ಏಕದೇವೋಪಾಸನೆಯನ್ನು ಪ್ರತಿಪಾದಿಸುತ್ತಾರೆ.

2. ಭಗವದ್ಗೀತೆಯ 9ನೆಯ ಅಧ್ಯಾಯದಲ್ಲಿ ಬ್ರಾಹ್ಮಣರು, ಕ್ಷತ್ರಿಯರನ್ನು ಪುಣ್ಯ ಯೋನಿಜರೆಂದು ವೈಶ್ಯರು, ಶೂದ್ರರು ಮತ್ತು ಸ್ತ್ರೀಯರನ್ನು ಪಾಪ ಯೋನಿಜರೆಂದು ಕರೆಯಲಾಗಿದೆ.

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಪಿ ಸ್ಯುಃ ಪಾಪಯೋನಯಃ ।
ಸ್ತ್ರೀಯೋ ವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾಂತಿ ಪರಾಂ ಗತಿಮ್ ॥
ಕಿಂ ಪುನರ್ಬ್ರಾಹ್ಮಣಾ ಪುಣ್ಯಾ ಭಕ್ತಾ ರಾಜರ್ಷಯಾಸ್ತಥಾ
ಅನಿತ್ಯ ಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್ ॥

-ಭಗವದ್ಗೀತೆ ಅಧ್ಯಾಯ 9. ಶ್ಲೋಕ 32-33

ಈ ಭಗವದ್ಗೀತೆಯ ಶ್ಲೋಕದಲ್ಲಿ ಶ್ರೀಕೃಷ್ಣನು ಹೇಳುತ್ತಾನೆ. "ಎಲೈ ಅರ್ಜುನನೇ ಪಾಪಯೋನಿಜರಾದ ಸ್ತ್ರೀಯರುದ ವೈಶ್ಯರು ಮತ್ತು ಶೂದ್ರರೂ ಕೂಡ ನನ್ನನ್ನು ಆಶ್ರಯಿಸಿ

ಪರಮಗತಿಯನ್ನು ಹೊಂದುತ್ತಾರೆ. ಹೀಗಿರುವಾಗ ಪುಣ್ಯಯೋನಿಜರೂ ಭಕ್ತರೂ ಆದ ಬ್ರಾಹ್ಮಣರು ಮತ್ತು ರಾಜರ್ಷಿಗಳೂ ಪರಮ ಗತಿಯನ್ನು ಹೊಂದುವರೆಂದು ಹೇಳಬೇಕಾದುದೇನಿದೆ ? ಅನಿತ್ಯವೂ ಅಸುಖವೂ ಆದ ಈ ಲೋಕವನ್ನು ಪಡೆದಿರುವ ನೀನು ನನ್ನನ್ನು ಭಜಿಸು" (ಶ್ರೀ ಮದ್ಭಗವದ್ಗೀತಾ - ಶ್ರೀ ರಾಮಕೃಷ್ಣಾಶ್ರಮ ಪ್ರಕಟನೆ)

ಬಸವಣ್ಣನವರ ದೃಷ್ಟಿಯಲ್ಲಿ ಹುಟ್ಟಿನಿಂದ ಯಾರೂ ಶ್ರೇಷ್ಠ-ಕನಿಷ್ಠರಲ್ಲ. ಅಲ್ಲಿ ವರ್ಣದ ಆಧಾರದ ಮೇಲೆ ವರ್ಗೀಕರಣವಿಲ್ಲ. ಇರುವುದು ಎರಡೆ ; ಮರೆತವ ಮಾನವ-ಅರಿತವ ಶರಣ. ಇದು ಗುಣಪ್ರಧಾನ ವ್ಯವಸ್ಥೆ.

3. ವೈದಿಕ ಧರ್ಮ ಅಗ್ನಿಪೂಜಕ ಧರ್ಮ. ಅಗ್ನಿಯ ಮೂಲಕವೇ ಹವಿಸ್ಸು ಕೊಡುವುದು ; ಹೋಮ-ಹವನ, ಯಜ್ಞ-ಯಾಗ ಪ್ರಮುಖ ಆಚರಣೆಗಳು. ಧರ್ಮಪಿತ ಬಸವಣ್ಣನವರು ಸೃಷ್ಟಿಕರ್ತನಿಗೆ ಪರಮೋನ್ನತ ಸ್ಥಾನ ಕೊಡುತ್ತಾರೆ. ಇಲ್ಲಿ ಧಾರ್ಮಿಕ ಕ್ರಿಯೆಗಳು ಅಗ್ನಿ ಸಾಕ್ಷಿಯಾಗಿ ನಡೆಯದೆ, ಗುರು-ಲಿಂಗ-ಜಂಗಮ ಸಾಕ್ಷಿಯಾಗಿ ನಡೆಯುತ್ತವೆ. ಜಡವಾದ ಬೆಂಕಿಯ ಬಾಯಿಗೆ ವಸ್ತುಗಳನ್ನು ಹಾಕಿ ಸುಡುವುದನ್ನು ವಿರೋಧಿಸಿ ದಾಸೋಹದ ಮೂಲಕ ಜಠರಾಗ್ನಿ ಎಂಬ ಚೇತನಾತ್ಮಕ ಅಗ್ನಿಗೆ ಆಹಾರ ನೀಡುವುದನ್ನು ಪ್ರತಿಪಾದಿಸುತ್ತಾರೆ.

4. "ಎಲ್ಲಾ ಧರ್ಮಗಳನ್ನು ಪರಿತ್ಯಜಿಸಿ ನನಗೆ ಶರಣಾಗು" ಎಂದು ಹೇಳುತ್ತ ಶ್ರೀಕೃಷ್ಣನು ತನ್ನನ್ನು ತಾನು ವೈಭವಿಸಿಕೊಳ್ಳುತ್ತಾನೆ. ಬಸವಣ್ಣನವರ ದೃಷ್ಟಿಕೋನದಲ್ಲಿ ಯಾವ ವ್ಯಕ್ತಿಯೂ ದೇವರಲ್ಲ ; ಸೃಷ್ಟಿಕರ್ತನ ಸ್ಥಾನವನ್ನು ಯಾರಿಗೂ ಎಷ್ಟೇ ದೊಡ್ಡವರಿರಲಿ ಕೊಡಬಾರದು. ಹೀಗೆ ಮೂಲಭೂತ, ಸೈದ್ಧಾಂತಿಕ ವ್ಯತ್ಯಾಸ ಇರುವಾಗ ಭಗವದ್ಗೀತೆಯನ್ನು ಸರಳಗನ್ನಡದಲ್ಲಿ ಭಾಷಾಂತರಿಸಿದರು ಎನ್ನುವುದು ಬಹಳ ಅಪಚಾರವಾಗುತ್ತದೆ.

ಇದೇ ರೀತಿ ಡಾ|| ಚಿ.ಮೂ ಅವರು ತುಂಡು ತುಂಡು ಮಾತುಗಳನ್ನು ಹೇಳಿ ಲಿಂಗಾಯತ-ವೀರಶೈವಗಳನ್ನು ಸಮೀಕರಿಸುವ ಪ್ರಮಾದ ಮಾಡುತ್ತಾರೆ. ಇದು ಹೇಗೆಂದರೆ, ರಾಜಶೇಖರ್ ಎಂಬುವವನ ಪತ್ನಿಯ ಬಳಿ ಒಂದು ಹೂವಿನ ಚಿತ್ರದ ನೀಲಿ ಸೀರೆ ಇದೆ. ಆತ ಮಾರುಕಟ್ಟೆಯಲ್ಲಿ ಹೋಗುವಾಗ ಅಲ್ಲಿ ಓರ್ವ ಮಹಿಳೆ ಅದೇ ಬಗೆಯ ಸೀರೆ ಉಟ್ಟು ಹೊರಟಿರುತ್ತಾಳೆ. ಆ ಸೀರೆ ಉಟ್ಟ ಕಾರಣ ಆಕೆ ತನ್ನ ಹೆಂಡತಿ ಎಂಬುದು ಎಷ್ಟು ಹಾಸ್ಯಾಸ್ಪದವೋ, ಅವಳು ತನ್ನ ಪತ್ನಿಯು ಹೊಂದಿರುವಂಥ ನೀಲಿ ಸೀರೆಯುಟ್ಟ ಕಾರಣ ಹೆಂಡತಿ ಎಂದು ವರ್ತಿಸಹೋದರೆ ಹೇಗೆ ಕಪಾಳಮೋಕ್ಷ ಮಾಡಿಸಿಕೊಳ್ಳಬೇಕಾಗುವುದೋ ಹಾಗೆಯೇ ಇವರು ವೀರಶೈವದ ಕೆಲವು ವಿಚಾರವನ್ನು ಲಿಂಗಾಯತ ಧರ್ಮದಲ್ಲಿ ಹುಡುಕಲು ಹೋಗುವುದು.

ದೀಕ್ಷೆ ಕೊಟ್ಟ ನಂತರ ಗುರು-ಜಂಗಮರು ದೀಕ್ಷಿತನ ಪೂರ್ವದ ಕುಲಜಾತಿಗಳನ್ನು ಅರಸದೆ, ಹೋಗಿ ಪ್ರಸಾದ ಸ್ವೀಕರಿಸುವುದು ಲಿಂಗಾಯತ ಧರ್ಮದ ಮಹತ್ವದ ಆಚಾರ, ಸಮಾನತೆಯ ಆಧಾರದ ಸಮಪಾತಳಿಯ (horizontal) ಸಮಾಜ ವ್ಯವಸ್ಥೆಗೆ ಮುಖ್ಯ ಮೂರು ಸಾಧನಗಳು ಗುರು-ಬಸವಣ್ಣ, ಲಿಂಗ (ಇಷ್ಟಲಿಂಗ) ಮತ್ತು ಜಂಗಮ. ಯಾವುದೇ ಭೇದಭಾವವಿಲ್ಲದೆ ಧರ್ಮಪಿತರು ಎಲ್ಲರನ್ನೂ ಇಂಬಿಟ್ಟುಕೊಂಡು ಇಷ್ಟಲಿಂಗವನ್ನು ಕೊಡುತ್ತಿದ್ದರು. ಕೇವಲ ಇಷ್ಟರಿಂದಲೇ ಸಾಮರಸ್ಯ ಸಾಧ್ಯವಾಗದು. ದೀಕ್ಷಿತರಾದ ಮೇಲ್ಜಾತಿಯವರಲ್ಲಿದ್ದ ಮೇಲರಿಮೆ (superiority complex) ಕೆಳವರ್ಗಗಳವರಲ್ಲಿದ್ದ ಕೀಳರಿಮೆ (inferiority complex) ಎಂಬ ದಿಬ್ಬ ತಗ್ಗುಗಳ ನಿರ್ಮೂಲನ ಮಾಡಲು ಇಷ್ಟಲಿಂಗ ಒಂದು ಬುಲ್‌ಡೋಜರ್ ಆದರೆ, ಇಬ್ಬರ ಮಧ್ಯದ ಅಂತರ ಕಡಿಮೆ ಮಾಡಲು ಜಂಗಮ ಮತ್ತೊಂದು ಸಾಧನ. ವೀರಶೈವ ಗುರು ವರ್ಣಾಶ್ರಮ ಪಾಲಕನಾದ್ದರಿಂದ ಅವನು ಹೋಗಿ ಅಕ್ಕಿಬೇಳೆ ಬೆಲ್ಲ

ಪಡೆಯುತ್ತಿದ್ದನೇ ಹೊರತು ಕೆಳಜಾತಿಯ ಅನುಯಾಯಿಗಳ ಮನೆಯಲ್ಲಿ ಊಟ ಮಾಡುತ್ತಿರಲಿಲ್ಲ. ಈ ವೀರಶೈವ ಆಚರಣೆಯನ್ನು ಶರಣರು ಖಂಡಿಸುತ್ತಾರೆ. ''ಕಬ್ಬಿಣದ ಕೋಡಗವ ಪರುಷ ಮುಟ್ಟಲು ಹೊನ್ನಾದರೇನು, ಮತ್ತೇನಾದರೇನು ತನ್ನ ಮುನ್ನಿನ ರೂಪ ಬಿಡದನ್ನಕ್ಕ'' ಎಂದು ಧರ್ಮಗುರು ಟೀಕಿಸುವಂತೆ ಆ ವೀರಶೈವರು ಬಹಿರಂಗದಲ್ಲಿ ಲಿಂಗಕಟ್ಟಿಕೊಂಡು ಪರುಷ ಮುಟ್ಟಿ ಚಿನ್ನವಾದಂತೆ. ಲಿಂಗಾಯತರಾದರೂ ಸಹ ಆ ಗೊಂಬೆ ಕೋತಿಯ ರೂಪ ಬಿಡದಂತೆ ಒಳಸೇರಿದ ವೀರಶೈವರು ತಮ್ಮ ಹಳೆಯ ನಂಬಿಕೆ, ಆಚರಣೆ ಉಳಿಸಿಕೊಂಡು ಹೊಸಧರ್ಮವನ್ನು ಮಲಿನಗೊಳಿಸಿದರು.

ಚಿ.ಮೂ ಅವರು ವಿಷಯಕ್ಕೆ ಅಗತ್ಯವಿಲ್ಲದ ಅಂಶಗಳನ್ನು ಉದಾಹರಿಸಿ ಗೊಂದಲ ಉಂಟುಮಾಡುತ್ತಾರೆ. convince (ಮನವರಿಕೆ) ಮಾಡಲು ಆಗದೆ confusion (ಗೊಂದಲ) ಉಂಟುಮಾಡಿ ಜನರನ್ನು ಅಸ್ಪಷ್ಟ ಬೌದ್ಧಿಕ ಸ್ಥಿತಿಗೆ ತರುತ್ತಾರೆ. ಜೀವನಕ್ಕೆ ಬೇಕಾದ ಎಲ್ಲ ಅಂಶಗಳನ್ನು ಪ್ರಸ್ತಾಪಿಸುವ ಶರಣರು ಜಾತಿ ಭೇದ, ಅನೈತಿಕತೆ ಮುಂತಾಗಿ ಎಲ್ಲ ಖಂಡಿಸಿದ್ದಾರೆ. ಬಸವಣ್ಣನವರು, ಸೊಡ್ಡಳ ಬಾಚರಸರು ಬ್ರಾಹ್ಮಣರು, ಬ್ರಾಹ್ಮಣ ಧರ್ಮವನ್ನೇ ದೃಷ್ಟಿಯಾಗಿಟ್ಟುಕೊಂಡು ಟೀಕಿಸಿದ್ದಾರೆ. ವಿಮರ್ಶಿಸಿದ್ದಾರೆ. ಕಾರಣ ಎರಡು. 1. ಓರ್ವ ವ್ಯಕ್ತಿ, ವಿಶಿಷ್ಟ ಸಮಾಜದ ಅಂಗವಾಗಿದ್ದಾಗ ಅಲ್ಲಿಯ ಲೋಪದೋಷ ತಿಳಿದಷ್ಟು ಬೇರೆಯವರಿಗೆ ತಿಳಿಯಲು ಸಾಧ್ಯವಾಗದು. ಹೀಗಾಗಿ ಅದೇ ಜಾತಿ ಧರ್ಮಗಳಲ್ಲಿ ಹುಟ್ಟಿದವರು ಚೆನ್ನಾಗಿ ಟೀಕಿಸಬಲ್ಲರು, ವಿಮರ್ಶಿಸಬಲ್ಲರು.

2. ತನ್ನ ಜಾತಿ, ಧರ್ಮದವರೇ ವಿಮರ್ಶಿಸಿದಾಗ ಸಹಿಸಿಕೊಂಡಷ್ಟು ಜನರು ಅನ್ಯರು ವಿಮರ್ಶಿಸಿದಾಗ ಸಹಿಸಿಕೊಳ್ಳುವುದಿಲ್ಲ.

ವಚನ ಸಾಹಿತ್ಯ ಓದುತ್ತಾ ಹೋದಾಗ ಲಿಂಗಾಯತರು ಸ್ವಧರ್ಮಕ್ಕೆ ವಿರುದ್ಧವಾಗಿ ಮಾಡುವ ತಪ್ಪೇನು ಎಂದು ತಿಳಿದು ಬಂದು ನಾವು ವಿಮರ್ಶಿಸುತ್ತೇವೆ. ನಮ್ಮ ಸಮಾಜದ ತಪ್ಪು ಅಥವಾ ಹಿರಿಮೆ ನಮಗೆ ತಿಳಿದಷ್ಟು ತಟ್ಟನೆ ಬೇರೆಯವರಿಗೆ ತಿಳಿಯದು. ನಾವು ಪ್ರತಿ ಬರಹದಲ್ಲೂ ಕಳಕಳಿ ಸ್ವವಿಮರ್ಶೆಯ ದೃಷ್ಟಿಯಿಂದ ಲಿಂಗಾಯತರನ್ನು ವಿಮರ್ಶಿಸುತ್ತೇವೆ. ಆದರೂ ಅನೇಕರು ಸ್ವಾವಲೋಕನ ಮಾಡಿ, ತಿದ್ದಿಕೊಳ್ಳುತ್ತಾರೆಯೇ ವಿನಾ ಸಿಟ್ಟಿಗೇಳುವುದಿಲ್ಲ. ಅದೇ ಡಾ|| ಪಿ.ವಿ.ನಾರಾಯಣ ದುರುದ್ದೇಶ, ಪೂರ್ವಾಗ್ರಹ ಪೀಡಿತರಾಗಿ. ವಚನ-ನಿರ್ವಚನದಲ್ಲಿ ಬರೆದಾಗ ಬಹಳ ನೋವೆನಿಸಿತು. ಈ ದೃಷ್ಟಿಯಿಂದ ಧರ್ಮಗುರು ಬಸವಣ್ಣನವರು ವೈದಿಕ ಧರ್ಮವನ್ನು-ಸಮಾಜವನ್ನು ವಿಮರ್ಶಿಸಿದ್ದಾರೆ.

''ಹಿಂದು ಧರ್ಮದ ಆಧಾರ ಗ್ರಂಥಗಳಾದ ವೇದ ಉಪನಿಷತ್ತು ಆಗಮ, ಸ್ಮೃತಿ, ಪುರಾಣಗಳಿಂದ ಶರಣರು ನೂರಾರು ಉಕ್ತಿಗಳನ್ನು ಗೌರವದಿಂದ ಉಲ್ಲೇಖಿಸಿದ್ದಾರೆ.'' ಎನ್ನುತ್ತಾರೆ ಚಿದಾನಂದ ಮೂರ್ತಿಗಳು. ಕೆಲವೊಂದು ಸಂಸ್ಕೃತ ಶ್ಲೋಕಗಳನ್ನು ಶರಣರು ಉಲ್ಲೇಖಿಸಿರುವುದು ನಿಜ. ಆದರೆ ಈ ಬಗೆಯ ಕ್ರಿಯೆಯನ್ನು ನಾವು ಸರಿಯಾಗಿ ವಿಮರ್ಶಿಸಬೇಕಾಗುತ್ತದೆ.

1. ಈ ಗ್ರಂಥಗಳು ಲಿಂಗಾಯತ ಧರ್ಮದ ಧಾರ್ಮಿಕ ಸಂಹಿತೆಗಳೆಂದಾಗಲೀ, ಇವುಗಳನ್ನು ಅವಲಂಬಿಸಿ ಜೀವನ ವಿಧಾನವನ್ನು ರೂಪಿಸಿಕೊಳ್ಳಬೇಕೆಂದಾಗಲೀ ಆಲೋಚಿಸಿ ಇವನ್ನು ಉಲ್ಲೇಖಿಸುವುದಿಲ್ಲ ಎಂಬುದನ್ನು ಮೊದಲು ಮನದಟ್ಟು ಮಾಡಿಕೊಳ್ಳಬೇಕು.

2. ವೇದಗಳು ಏಕೇಶ್ವರವಾದವನ್ನು ಪ್ರತಿಪಾದಿಸುತ್ತೇವೆ. ನಂತರ ಬಂದ ಪುರಾಣ ಯುಗದಲ್ಲಿ ಹಲವಾರು ದೇವತೆಗಳ ಕಲ್ಪನೆ ಬಂದಿದೆ. ಇದು ತಪ್ಪು ಎಂದು ಹಲವರು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅದನ್ನೇ ಬಸವಣ್ಣನವರು ಸಹ ಹೇಳಿ '' ವೇದಗಳು ಒಬ್ಬನೇ ದೇವ ಎನ್ನುತ್ತವೆ'' ಎನ್ನುತ್ತಾರೆ ; ವೇದವೆಂಬುದು ನಿಮಗೆ ತಿಳಿಯದು ಎಂದೂ ಹೇಳುತ್ತಾರೆ. ''ವೇದಗಳು ನಮ್ಮ ಆಧಾರಗ್ರಂಥ ಎಂದು

ಬಡಬಡಿಸುವ ನೀವು ವೇದಗಳು ಹೇಳುವ ಏಕದೇವ ವಿಶ್ವಾಸವನ್ನು ಏಕೆ ಆಚರಿಸುವುದಿಲ್ಲ ?'' ಎಂದು ವೈದಿಕರನ್ನು ಪ್ರಶ್ನಿಸುತ್ತಾರೆ.

3. ತಮ್ಮ ವಿಚಾರಕ್ಕೆ ಸರಿ ಹೊಂದುವ, ಅದನ್ನು ಪ್ರೋತ್ಸಾಹಿಸುವ ಉಕ್ತಿಯು ವೇದ, ಆಗಮ, ಉಪನಿಷತ್‌ದಲ್ಲಿದ್ದರೆ ಅಂಥವನ್ನು ಉಕ್ತಿಯನ್ನಾಗಿ ಬಳಸಿಕೊಂಡಿದ್ದಾರೆ, ಆದರೆ ಇದರರ್ಥ ಎಲ್ಲ ವಿಚಾರಗಳಲ್ಲೂ ವೇದ, ಸ್ಮೃತಿಗಳು ಪ್ರಮಾಣ ಗ್ರಂಥಗಳೆಂದಲ್ಲ. ನಾವು ಮಾತನಾಡುವಾಗ ಬೈಬಲ್ಲಿನ ಒಂದು ಉಕ್ತಿಯನ್ನು ಸಾಂದರ್ಭಿಕವಾಗಿ ಉಲ್ಲೇಖಿಸುತ್ತೇವೆ ಎಂದುಕೊಳ್ಳೋಣ. ಅದರರ್ಥ ಇಡೀ ಬೈಬಲ್ಲಿನ ಎಲ್ಲ ವಿಚಾರಗಳನ್ನು ಕ್ರೈಸ್ತರು ನಂಬುವಂತೆ ನಂಬಿ, ಆಚರಿಸುತ್ತೇವೆಂದು ಅರ್ಥವಲ್ಲ.

4. ಕೆಲವೊಂದು ವಚನಗಳಲ್ಲಿ ಸಂಸ್ಕೃತ ಶ್ಲೋಕಗಳು ವಿಲಕ್ಷಣವಾಗಿ ಸೇರಿಸಲ್ಪಟ್ಟಿವೆ. ವಚನದ ಇತರ ವಾಕ್ಯಗಳಲ್ಲಿ ಸಂವಹನವಾಗಿರುವ ವಿಚಾರಕ್ಕೂ ಆ ವಚನದ ಮಧ್ಯೆ ತೂರಿಸಲ್ಪಟ್ಟ ಸಂಸ್ಕೃತ ಶ್ಲೋಕಕ್ಕೂ ಪರಸ್ಪರ ಸಂಬಂಧವೇ ಇರದು. ಈ ರೀತಿ ಕೃತ್ರಿಮವಾಗಿ ತೂರಿಸಲ್ಪಟ್ಟುದರ ಹಿಂದೆ ಕೆಳಕಂಡ ಕಾರಣ ಗುರುತಿಸಬಹುದು.

ಅ) ಪ್ರವಚನಕಾರರು, ವ್ಯಾಖ್ಯಾನಕಾರರು ವಚನಗಳನ್ನು ವಿಶ್ಲೇಷಿಸುವಾಗ ಅದರೊಳಗಣ ವಿಚಾರವನ್ನು ಇನ್ನಷ್ಟು ಬಲಪಡಿಸುವ ಸಂಸ್ಕೃತ ಶ್ಲೋಕವೊಂದನ್ನು ಕಂಡು ಬೆನ್ನು ಪುಟದಲ್ಲಿ ಬರೆದು ಇಟ್ಟುಕೊಂಡಾಗ ನಂತರ ಪ್ರತಿ ಮಾಡುವವರು ಆ ಶ್ಲೋಕವನ್ನು ಸೇರಿಸಿಯೇ ಪ್ರತಿ ತೆಗೆದಿರುವ ಸಾಧ್ಯತೆ ಇದೆ.

ಆ) ತೌಲನಿಕವಾಗಿ ವಿಮರ್ಶೆ ಮಾಡುವಾಗ ಶಾಸ್ತ್ರಕಾರರು ಆ ವಚನದ ಭಾವಕ್ಕೆ ತದ್ವಿರುದ್ಧವಾದ ಆಲೋಚನೆಯ ವಚನವೊಂದನ್ನು ಪ್ರತಿಪಾದಿಸಿರಬಹುದು. ಪ್ರತಿ ಮಾಡುವವರು ವಿರುದ್ಧ ಅರ್ಥದ ಶ್ಲೋಕವನ್ನು ಸೇರಿಸಿಯೇ ಪ್ರತಿ ಮಾಡಿರಲೂ ಸಾಧ್ಯವಿದೆ.

ಇ) ಅಚ್ಚ ಕನ್ನಡದಲ್ಲಿ ಹುಟ್ಟಿದ ಲಿಂಗಾಯತ ಧರ್ಮದ ಸಂವಿಧಾನ ವಚನ ಸಾಹಿತ್ಯ. ಇದನ್ನು ವ್ಯಾಪಕವಾಗಿ ಪ್ರಚಾರಗೊಳಿಸಬೇಕೆಂದು ಕೆಲವು ವಿದ್ವಾಂಸರು ವಚನಗಳಲ್ಲಿ ಬರುವ ಧಾರ್ಮಿಕ ತತ್ತ್ವ ಸಿದ್ಧಾಂತಗಳನ್ನು ಸಿದ್ಧಾಂತ ಶಿಖಾಮಣಿಯಂತಹ ಪುಸ್ತಕಗಳ ಮೂಲಕ ಜನರಿಗೆ ಕೊಟ್ಟಿರಬಹುದು. ನಂತರ ಆ ಸಂಸ್ಕೃತ ಶ್ಲೋಕಗಳನ್ನು ವಚನಗಳ ಜೊತೆಗೆ ಸೇರಿಸುತ್ತ ಪ್ರತಿ (copying) ಮಾಡುತ್ತ, ಜನಜೀವನದಲ್ಲಿ ರೂಢಿಗೆ ತಂದಿರಬಹುದು.

ಸಿದ್ಧಾಂತ ಶಿಖಾಮಣಿಯ ಸಂಸ್ಕೃತವನ್ನು ಅಧ್ಯಯನ ಮಾಡಿರುವ ವಿದ್ವಾಂಸರು ಇದು 16ನೇ ಶತಮಾನದ ಸಂಸ್ಕೃತವೇ ವಿನಾ ಪುರಾತನ ಸಂಸ್ಕೃತವಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಸಿದ್ಧಾಂತ ಶಿಖಾಮಣಿಯ ಲಭ್ಯವಿರುವ ತಾಡ ಓಲೆಯ 3 ಹಸ್ತ ಪ್ರತಿಗಳಲ್ಲಿ 2 ರಲ್ಲಿ ಶ್ರೀ ಗುರುಬಸವಲಿಂಗಾಯ ನಮಃ ಎಂದೇ ಆರಂಭಿಸಲಾಗಿದೆ. ಶ್ರೀ ಮರಿ ತೋಂಟದಾರ್ಯರ ವ್ಯಾಖ್ಯಾನವಿರುವ ಸಿದ್ಧಾಂತ ಶಿಖಾಮಣಿಯವರೆಗೂ ರೇಣುಕರ ಕಲ್ಪನೆ ಮೂಡಿರಲಿಲ್ಲ. ಮೈಸೂರಿನ ಪಂಚಗ್ರಹ ಹಿರೇಮಠದ ಅಧಿಕಾರಿಗಳಾದ ಶ್ರೀ ಕಾಶಿನಾಥ ಶಾಸ್ತ್ರಿಗಳು ಮುದ್ರಿಸಿದ ಸಿದ್ಧಾಂತ ಶಿಖಾಮಣಿಯ ಪತ್ರದಲ್ಲಿಲ್ಲದ ಒಂದು ಪೀಠಿಕೆ ಹುಟ್ಟಿ ಅದರಲ್ಲಿ ರೇಣುಕಾಚಾರ್ಯರ ಕಥೆ ಸೃಷ್ಟಿಯಾಗಿ ಸಿದ್ಧಾಂತ ಶಿಖಾಮಣಿಯ ಸಾರವನ್ನು ರೇಣುಕಾಚಾರ್ಯರು ಅಗಸ್ತ್ಯಮುನಿಗೆ ಬೋಧೆ ಮಾಡಿದ ಕಥೆ ಹೆಣೆಯಲ್ಪಟ್ಟಿತು. ಅಲ್ಲಿಂದ ಮುಂದೆ ಸಮಾಜದಲ್ಲಿ ಒಡಕು, ಭಿನ್ನಾಭಿಪ್ರಾಯ, ಜಾತಿ ವಿಭಜನೆ, ಕೃತ್ರಿಮ ಇತಿಹಾಸ ಸೃಷ್ಟಿ ನಡೆಯುತ್ತ ಬಂದವು.

''ಭವಿಯನ್ನು ಲಿಂಗವಂತನನ್ನಾಗಿ ಮಾಡುವ ದೀಕ್ಷೆಯ ಸಂದರ್ಭದಲ್ಲಿ ಅವನ ಮುಂದೆ ವೇದವನ್ನು ಪಠಿಸಿ, ಅವನ ಬಾಯಿಂದ ವೇದ ಹೇಳಿಸಬೇಕು ಎಂದು ವಿಧಿಸಿದ್ದಾನೆ ಚನ್ನಬಸವ (ಇವನೇ

ಲಿಂಗವಂತರಿಗೆ ನೀತಿ ಸಂಹಿತೆ ನೀಡಿದವನು.) ಚಿದಾನಂದ ಮೂರ್ತಿಯ ಸುಸಂಸ್ಕೃತ ಭಾಷೆಯ ವೈಖರಿ ಇದು ! ಚಿದಾನಂದ ಮೂರ್ತಿ ಹೇಳಿದ್ದಾನೆ, ಇವನು ಹೀಗನ್ನುತ್ತಾನೆ ಎಂದರೆ ಈ ಸಂಸ್ಕೃತ ಪ್ರೇಮಿ ಸಹಿಸಿಕೊಳ್ಳಬಹುದೋ ? ಷಡ್‌ಗಣಾಧೀಶರಲ್ಲಿ ಒಬ್ಬರಾದ, ಷಟಸ್ಥಲಜ್ಞಾನಿ ಎಂದು ಗೌರವಿಸಲ್ಪಟ್ಟ ಚೆನ್ಮಯಜ್ಞಾನಿ ಚೆನ್ನಬಸವಣ್ಣನವರನ್ನು ಎಷ್ಟು ಹಗುರವಾಗಿ ಏಕವಚನದಲ್ಲಿ ಸಂಬೋಧಿಸಿದ್ದಾರೆ ನೋಡಿರಿ. ಈ ಹೊಟ್ಟೆಪಾಡಿನ ವಿದ್ವಾಂಸರಿಗೆ ವಚನ ಸಾಹಿತ್ಯ ಉದಾಹರಿಸಲು, ವಚನಕಾರರು ಸಾಹಿತ್ಯದ ಬಂಡವಾಳ ಒದಗಿಸಲು ಬೇಕು. ಅವರನ್ನು ಗೌರವಿಸುವುದು ಬೇಕಾಗಿಲ್ಲ.

ಇಸ್ಲಾಂ ಧರ್ಮದಲ್ಲಿ ಮೊಹಮ್ಮದ(ಸ)ರನ್ನು ಹಜರತ್, ಪ್ರವಾದಿವರ್ಯ ಎಂದು ಗೌರವಪೂರ್ವಕವಾಗಿ ಸಂಬೋಧಿಸುವುದಲ್ಲದೆ, ಉಳಿದ ಸಂತರನ್ನು ಸಹ ಹಜರತ್ ಎಂದು ಗೌರವಪೂರ್ವಕವಾಗಿ ಕರೆಯುವರು. ಆದರೆ ಚಿದಾನಂದ ಮೂರ್ತಿಯವರ ಕಣ್ಣಲ್ಲಿ ಧರ್ಮಪಿತ ಬಸವಣ್ಣ, ಚಿನ್ಮಯಜ್ಞಾನಿ ಚನ್ನಬಸವಣ್ಣ, ಶಿವಯೋಗಿ ಸಿದ್ಧರಾಮೇಶ್ವರ ಮುಂತಾದವರು ಅವನು, ಇವನು ಆಗುತ್ತಾರೆ. ಇವರಿಗೆ ಭಾಷೆಯ ಶಿಷ್ಟಾಚಾರವಾದರೂ ತಿಳಿದಿದೆಯೆ ?

ಚೆನ್ನಬಸವಣ್ಣನವರು ವಹಿಸಿದ್ದು ವಿಶೇಷವಾದ ಪಾತ್ರ. ಅದಕ್ಕೇ ಅವರಿಗೆ ಷಟಸ್ಥಲ ಜ್ಞಾನಿ ಎಂಬ ಬಿರುದು ಬಂದುದು. ಅನುಭವ ಮಂಟಪದಲ್ಲಿ ನಿರರ್ಗಳವಾಗಿ ವಚನ ವಾಙ್ಮಯವು ಸಂವಾದ ರೂಪದಲ್ಲಿ ಹೊಮ್ಮಿ ಹರಿಯುತ್ತಿತ್ತು. ಶರಣ ವಚನ ಭಂಡಾರಿ ಶಾಂತರಸರ ನೇತೃತ್ವದಲ್ಲಿ ಲಿಪಿಕಾರರು ಆ ವಚನಗಳನ್ನು ಬರೆದುಕೊಳ್ಳುತ್ತಿದ್ದರು. ಅವನ್ನು ಸೈದ್ಧಾಂತಿಕ ಚೌಕಟ್ಟಿನಲ್ಲಿ ಪರಿಶೀಲಿಸಿ, ಪರಿಷ್ಕರಿಸಿ ಕಡತಕ್ಕೆ ಸೇರಿಸಲಾಗುತ್ತಿತ್ತು. ಈ ಪರಿಶೀಲನಾ ಕಾರ್ಯದ ಹೊಣೆ ಹೊತ್ತವರು ಚೆನ್ನಬಸವಣ್ಣನವರು. ಕಾಲಜ್ಞಾನ ವಚನಗಳನ್ನು ಹೇಳಿದ ಶರಣರು ಚೆನ್ನಬಸವಣ್ಣನವರನ್ನು ತಪ್ಪದೆ ಸ್ಮರಿಸುತ್ತಾರೆ. ಕಾಲಜ್ಞಾನ ವಚನಗಳಲ್ಲಿ ಎರಡು ಪ್ರಕಾರ ; ಒಂದು ಭವಿಷ್ಯ ಸೂಚಕ, ಅಧ್ಯಾತ್ಮಿಕ ಅನುಭಾವದ ದ್ವಾರಾ ಪಡೆದ ದೇಶಕಾಲಾತೀತ ದಿವ್ಯಜ್ಞಾನದ ಮೂಲಕ ಮುಂದಿನ ಘಟನೆಗಳನ್ನು ಹೇಳುವುದು. ಮತ್ತೊಂದು, ನಡೆದು ಹೋದ ಘಟನೆಗಳನ್ನು ಧರ್ಮಾನುಯಾಯಿಗಳಿಗೆ ಹೇಳುತ್ತಾ (ಸಾರುತ್ತಾ) ಬರುವುದು.

ಕಲ್ಯಾಣವನ್ನು ಧರ್ಮಗುರು ಬಸವಣ್ಣನವರು ತೊರೆದ 780 ವರ್ಷಗಳಿಗೆ ನಾವು (ಶರಣರು) ಹುಟ್ಟಿ ಬರುತ್ತೇವೆ ಎಂದು ಹೇಳಿದುದು ; ದಕ್ಷಿಣದ ಕೃಷ್ಣೆಗೆ ಕರೆವರು, ಜನ ನೆರೆವರು (ಶರಣ ಮೇಳ) ಎಂದುದು ಭವಿಷ್ಯ ಸೂಚಕ. ಇಂಥ ದಿನ ಲಿಂಗೈಕ್ಯರಾದರು, ಇಂಥ ದಿನ ಚನ್ನಬಸವಣ್ಣನವರು ವಚನ ಸಾಹಿತ್ಯ ಸಹಿತ ಉಳಿವೆಯನ್ನು ಸೇರಿದರು ಎಂದು ಹೇಳಿದುದು ಐತಿಹಾಸಿಕ . ಈ ರೀತಿ ಇತಿಹಾಸವನ್ನು ಮತ್ತು ವಂಶಾವಳಿಯನ್ನು ಸಹ ದಾಖಲಿಸಿ, ಸಾರುವ ವಿನೂತನ ವಿಧಾನದ ಪರಿಕಲ್ಪನೆ ಕೊಟ್ಟವರು ಚನ್ನಬಸವಣ್ಣನವರಾದ ಕಾರಣ ಅವರನ್ನು ನೆನೆಯಲಾಗಿದೆ.

ಅನುಭಾವಿಗಳು ಕೊಡುವ ದಿವ್ಯಾನುಭವದ ನಿರೂಪಣೆ ಓರ್ವ ಕಲಾವಿದ ಚಿತ್ರವನ್ನು ಚಿತ್ರಿಸಿದಂತೆ, ನದಿ ನೈಸರ್ಗಿಕವಾಗಿ ಹರಿದಂತೆ. ನಂತರ ಓರ್ವ ಕಾರ್ಮಿಕ ಆ ಚಿತ್ರಕ್ಕೆ ಗಾಜನ್ನು, ಕಟ್ಟನ್ನು ಹಾಕುವಂತೆ, ಇಂಜಿನಿಯರ್ಸ್ ನದಿಯ ಉಪಯೋಗ ತೆಗೆದುಕೊಳ್ಳಲು ಕಟ್ಟೆ ಕಟ್ಟುವಂತೆ ತತ್ವಜ್ಞಾನಿಗಳು ಅನುಭಾವ ಸಾಹಿತ್ಯಕ್ಕೆ ತತ್ವಜ್ಞಾನದ ಚೌಕಟ್ಟು ತೊಡಿಸುವರು. ಚನ್ನಬಸವಣ್ಣನವರು ಈ ಮಹತ್ತರ ಕಾರ್ಯ ಮಾಡಿದರು.

ಚಿ.ಮೂ ಎಂಬ ಬರಹಗಾರನು (ಏಕ ವಚನ ಬರೆದುದಕ್ಕೆ ವಿಷಾದಿಸುತ್ತೇನೆ.) ಚನ್ನಬಸವ-ಇವನೇ ಲಿಂಗವಂತರಿಗೆ ನೀತಿ ಸಂಹಿತೆ ನೀಡಿದವನು ಎಂದು ಬರೆಯುವ ಬದಲು ಗೌರವ ಪೂರ್ಣವಾಗಿ "ಲಿಂಗಾಯತ ಧರ್ಮದ ವಿಚಾರ-ಆಚಾರ ಸಂಹಿತೆಯನ್ನು (code of conduct) ರೂಪಿಸಿಕೊಟ್ಟವರು ಚನ್ನಬಸವಣ್ಣನವರು ಎಂದಿದ್ದರೆ ಇವನ ಲೆಕ್ಕಣಿಕೆ ಬತ್ತಿ ಬರಡಾಗುತ್ತಿತ್ತೆ ?

ಒಂದು ಧರ್ಮವು ತತ್ವಸಂಹಿತೆ (philosophy)ಯ ಮಟ್ಟದಿಂದ ಆಚಾರ ಸಂಹಿತೆಯಾಗಿ ರೂಪುಗೊಳ್ಳುವಾಗ ಕೆಲವೊಂದು ಆಚರಣೆಗಳು ಅತ್ಯಗತ್ಯ. ಉದಾ : ಜನನ ಸಮಯದ ಲಿಂಗಧಾರಣೆ, ನಂತರದ ಲಿಂಗದೀಕ್ಷೆ, ವಿವಾಹ, ಲಿಂಗೈಕ್ಯರ ಸಂಸ್ಕಾರ ಇಂಥ ಎಲ್ಲ ವಿಧಿ-ವಿಧಾನಗಳು ಚನ್ನಬಸವಣ್ಣನವರ ವಚನಗಳಲ್ಲೇ ಕಾಣಬರುತ್ತವೆ. ಅನುಭವ ಮಂಟಪದಲ್ಲಿ ಚರ್ಚಿತವಾಗಿ ಇವು ಕ್ರಿಯಾರೂಪಕ್ಕೆ ಬಂದು, ವಚನಗಳ ಮೂಲಕ ದಾಖಲಿಸಲ್ಪಟ್ಟಿವೆ. ಈ ಕಾರ್ಯವನ್ನು ಚನ್ನಬಸವಣ್ಣನವರು ಒಬ್ಬರೇ ಮಾಡಿದ್ದಲ್ಲ ; ಧರ್ಮಗುರು ಬಸವಣ್ಣನವರ ಮಾರ್ಗದರ್ಶನದಲ್ಲಿ ಶರಣರು ಮಾಡಿದ ಸಾಮೂಹಿಕ ಚಿಂತನೆಯ ಫಲ . ಆದರೆ ವ್ಯವಸ್ಥಿತವಾಗಿ ಅಭಿವ್ಯಕ್ತಗೊಳಿಸಿದ ಮಹಾಪುರುಷರು ಚನ್ನಬಸವಣ್ಣನವರು. ಹೀಗಾಗಿ ತತ್ವಸಂಹಿತೆಯ ಜನಕರಾದ ಧರ್ಮಪಿತ ಬಸವಣ್ಣನವರಿಗೆ ಅಗ್ರಪೀಠವು ಎಲ್ಲ ಶರಣರಿಂದ ಕೊಡಲ್ಪಟ್ಟಿದ್ದರೆ ಎರಡನೆಯ ಸ್ಥಾನವನ್ನು ಆಚಾರ ಸಂಹಿತೆ ನೀಡಿದ ಚನ್ನಬಸವಣ್ಣನವರು ಪಡೆದುಕೊಂಡಿರುವುದು ಹೆಮ್ಮೆಯ ವಿಷಯ.

ಲಭ್ಯವಿರುವ ಧರ್ಮಪಿತ ಬಸವಣ್ಣನವರ ವಚನಗಳಲ್ಲಿ ಸುಮಾರು 22-25 ವಚನಗಳನ್ನು ಪಟ್ಟಭದ್ರ ಹಿತಾಸಕ್ತರು ಕೊಳಕು ಮಾಡಿದ್ದರೆ, ಚನ್ನಬಸವಣ್ಣನವರ ತುಂಬಾ ಸಂಖ್ಯೆಯ ವಚನಗಳನ್ನು ಜಾತಿವಾದಿಗಳು, ಅನೀತಿವಂತರು ವಿಕೃತಗೊಳಿಸಿದ್ದಾರೆ. ಮತಾಂಧತೆಯಿಂದ ಉಗ್ರಗೊಳಿಸಿದ್ದಾರೆ. ಅನವಶ್ಯಕ ಮತಾಚರಣೆಯ ಹೊರೆಯಿಂದ ಜಡಗೊಳಿಸಿದ್ದಾರೆ. ಕೆಲವು ಪಾಪಿಗಳು ಮಾಡಿದ ದ್ರೋಹದಿಂದ ಚನ್ನಬಸವಣ್ಣನವರಂತಹ ಜ್ಞಾನಿಗಳು ಡಾ॥ ಪಿ.ವಿ.ನಾರಾಯಣರಂಥ ಧೂರ್ತ, ಅಪಕ್ವ ಚಿಂತನೆಯ ಲೇಖಕರಿಂದ ಟೀಕೆಗೆ ಒಳಗಾಗಬೇಕಾಯಿತು. ಈ ವಾಕ್ಯವೃಂದಕ್ಕೆ ಉದಾಹರಣೆ-ವಿವರಣೆ ಕೊಡಲು ಹೋದರೆ ನಾನು ತುಂಬಾ ವಿಸ್ತಾರವಾದ ಪ್ರಬಂಧವನ್ನೇ ಬರೆಯಬೇಕಾದೀತು. ಒಂದು ಕಡೆಯಿಂದ ಶರಣ ಧರ್ಮದ ಮೂಲ ಸಿದ್ಧಾಂತ, ಆಶಯಕ್ಕೆ ವಿರುದ್ಧವಾದ ಆಚಾರ-ವಿಚಾರಗಳನ್ನು ಸೇರ್ಪಡೆ ಮಾಡಿ ಕೆಲವು ಧೂರ್ತರು ಒಂದು ಕಾಲದಲ್ಲಿ ವಚನ ವಾಙ್ಮಯವನ್ನು ಕೆಡಿಸಿದ್ದರೆ ಇಂದು ಅದೇ ಧೂರ್ತತೆಯ ಪಿ.ವಿ.ನಾರಾಯಣರಂಥವರು "ಚನ್ನಬಸವಣ್ಣನವರು ಜಾತಿವಾದಿ" ಎಂದು ಧರ್ಮಕಾರಣ ಪುಸ್ತಕದಲ್ಲಿ ಎತ್ತಿ ಆಡುತ್ತಾರೆ. ಚಿದಾನಂದ ಮೂರ್ತಿಯವರು ಒಂದಾದ ಮೇಲೊಂದು ಮಾತನ್ನು ಪೂತ್ಕರಿಸುತ್ತ ಬರೆದ ಈ ಬರಹವನ್ನು ನೋಡಿದರೆ ನಿಜಕ್ಕೂ ಇವರೊಂದು ಸಾಹಿತ್ಯದ ವಿಷ ಸರ್ಪ ಎಂದರೆ ಉತ್ಪ್ರೇಕ್ಷೆ ಎನ್ನಿಸದು ; ಪಾಪವೂ ಬರದು. ಇಂಥ ವಿಷ ಹೃದಯದ, ಶರಣ ದ್ವೇಷಿ ಚಿದಾನಂದ ಮೂರ್ತಿಯವರು ಈವರೆಗೂ ವಚನ ಸಾಹಿತ್ಯದ ಮನೆಯೊಳಗಿದ್ದುಕೊಂಡೇ ಸಾಹಿತ್ಯದ ಅಡಿಗೆ ಮಾಡುತ್ತಿದ್ದುದು, ಅದನ್ನೇ ನಂಬಿ ನಾವು-ನೀವೆಲ್ಲ ಉಣ್ಣುತ್ತಿದ್ದುದು. ಇವರನ್ನು ವಚನ ವಾಙ್ಮಯದ ವಿಶ್ಲೇಷಕ, ಹಿತ ಚಿಂತಕ ಎಂದು ನಂಬಿದ್ದು ಎಷ್ಟು ಅಪಾಯಕರ ಎನ್ನಿಸುತ್ತಲಿದೆ. ನಾನು ಇಷ್ಟು ಕಟು ಮಾತುಗಳನ್ನು ಬರೆಯಲು ಅವರ ಲೇಖನದಲ್ಲಿ ಬಂದಿರುವ ಈ ವಾಕ್ಯಗಳೇ ಪ್ರೇರಕ.

ಲಿಂಗಾಯತ ದೀಕ್ಷಾ ಸಂದರ್ಭದಲ್ಲಿ ವೇದವನ್ನು ಪಠಿಸಿ, ಅದನ್ನು ಪುನಃ ಹೇಳಿಸಬೇಕಂತೆ. "ಸಂಸ್ಕೃತ ಮಂತ್ರಗಳ ಜಂಜಡ ಹರಿದು ಅಚ್ಚ ಕನ್ನಡದ ವಚನಗಳ ಮೂಲಕ ಮನ ಒಲಿದಂತೆ ಹಾಡುವೆ" ಎಂದು ನುಡಿದ ಬಸವಾದಿ ಪ್ರಮಥರ ಮೂಲ ಆಶಯಕ್ಕೆ ಚ್ಯುತಿ ತರುವ ದ್ರೋಹವನ್ನು ಚಿ.ಮೂ ಮಾಡಿದ್ದಾರೆ. ವೇದಾಗಮಗಳನ್ನು ಕುರಿತು ಶರಣರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ನೋಡೋಣ.

೧. ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ
ಆಗಮದ ಮೂಗ ಕೊಯಿವೆ ನೋಡಯ್ಯಾ
ಮಹಾದಾನಿ ಲಿಂಗದೇವಾ,

ಮಾದರ ಚನ್ನಯ್ಯನ ಮನೆಯ ಮಗ ನಾನಯ್ಯಾ. -ಬ.ವ.ದೀ 714

೨. ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೆ ಇಷ್ಟವಯ್ಯಾ
ಸ್ಮೃತಿಗಳು ಸಮುದ್ರದ ಪಾಲಾಗಲಿ ;
ಶ್ರುತಿಗಳು ವೈಕುಂಠವ ಸೇರಲಿ ;
ಪುರಾಣಗಳು ಅಗ್ನಿಯ ಸೇರಲಿ ;
ಆಗಮಗಳು ವಾಯುವ ಹೊಂದಲಿ.
ಎಮ್ಮ ನುಡಿ, ಕಪಿಲಸಿದ್ದಮಲ್ಲಿಕಾರ್ಜುನ ಮಹಾಲಿಂಗದ
ಹೃದಯದೊಳು ಗ್ರಂಥಿಯಾಗಿರಲಿ. -ಸಿ.ವ. 857

೩. ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂಧು ಪುರಾಣ ಸಮಬಾರದಯ್ಯಾ
ಎಮ್ಮ ವಚನದ ನೂರೆಂಟರಧ್ಯಯನಕ್ಕೆ
ಶತರುದ್ರೀಯ ಯಾಗ ಸಮಬಾರದಯ್ಯಾ
ಎಮ್ಮ ವಚನದ ಸಾಸಿರಪಾರಾಯಣಕ್ಕೆ
ಗಾಯತ್ರಿ ಲಕ್ಷಜಪ ಸಮಬಾರದಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. -ಸಿ.ವ. 856

ವಚನಗಳ ಮೂಲಕ ಪಾರಾಯಣ, ಪಠಣ, ಧಾರ್ಮಿಕ ವಿಧಿ-ವಿಧಾನ ನಡೆಯುತ್ತಿದ್ದುದು ಎಂಬುದಕ್ಕೆ ಈ ವಚನವೇ ಸಾಕ್ಷಿಯಾಗಿದೆ.

ನಾವು ಈಗ ನೇರವಾಗಿ ವಚನ ವಾಙ್ಮಯದ ಸಾಗರದ ಆಳಕ್ಕೆ ಇಳಿದು ಅನೇಕ ಸತ್ಯ ತತ್ವಗಳನ್ನು ಹೊರಗೆ ತರುತ್ತಿದ್ದೇವೆ. ಇದಕ್ಕೆ ಪೂರ್ವದಲ್ಲಿ ನಾವು ಕಂಡಂತೆ ಸಂಪ್ರದಾಯ ಸ್ವಾಮಿಗಳಲ್ಲಿ ಮೂರು ಪ್ರಕಾರವನ್ನು ಕಾಣಬಹುದು.

1. ಲಿಂಗಾಯತ ಧರ್ಮದ ಸ್ಪರ್ಶವೇ ಇಲ್ಲದೆ ಶೈವ-ವೈದಿಕ ಬಣ್ಣದಲ್ಲಿ ಮುಳುಗಿ ಏಳುವ ಪಂಚಪೀಠದ ಸ್ವಾಮಿಗಳು.

2. ವಿರಕ್ತ ವರ್ಗದವರಿದ್ದೂ ಸಹ, ಶ್ರೀ ಗುರುಬಸವಲಿಂಗಾಯ ನಮಃ ತೋರಿಕೆಗೆ ತಗುಲಿ ಹಾಕಿಕೊಂಡರೂ, ಆಚಾರ-ವಿಚಾರಗಳಲ್ಲಿ ಲಿಂಗಾಯತ ಧರ್ಮದಿಂದ ದೂರ ಉಳಿದವರು ; ಪೂಜೆ-ಪುರಸ್ಕಾರಗಳನ್ನು ಶರಣ ಧರ್ಮಕ್ಕೆ ವಿರುದ್ಧವಾಗಿ ಮಾಡುವವರು.

3. ತಾತ್ವಿಕವಾಗಿ ತಿಳಿದುಕೊಂಡಿರದಿದ್ದರೂ ಸಾಂಪ್ರದಾಯಿಕವಾಗಿ ಶರಣ ಧರ್ಮವನ್ನು ಅಳವಡಿಸಿಕೊಂಡ ವಿರಕ್ತರು. ಇಂಥವರನ್ನು ಕಂಡು ರೆ|| ಉತ್ತಂಗಿ ಚೆನ್ನಪ್ಪನವರು ಮೆಚ್ಚುಗೆಯಿಂದ ಉದ್ಗರಿಸುತ್ತಾರೆ. ವಿರಕ್ತ ಸ್ವಾಮಿಗಳಿಗೆ ವಿರಕ್ತ ದೀಕ್ಷೆ ಕೊಡುವಾಗ, ಪಟ್ಟಾಧಿಕಾರ ಕೊಡುವಾಗ ಕಾಷಾಯ ವಸ್ತ್ರ ಬೆತ್ತ, ಜೋಳಿಗೆ ಕೊಡುತ್ತ ಶ್ರೀ ಗುರುಬಸವಲಿಂಗಾಯ ನಮಃ ಮಂತ್ರ ನೀಡಿ, ಬಸವಣ್ಣನವರ ಷಟಸ್ಥಲದ ವಚನ, ಶೂನ್ಯ ಸಂಪಾದನೆ, ಪ್ರಭುದೇವರ ಮಂತ್ರಗೋಪ್ಯ, ಚನ್ನಬಸವಣ್ಣನವರ ಕರಣ ಹಸುಗೆ ಗ್ರಂಥಗಳನ್ನು ಕೊಡುವ ಪರಿಪಾಠವಿದೆ. ಈ ವಿರಕ್ತರು ಚಿದಾನಂದಮೂರ್ತಿಯವರನ್ನು ಕಿವಿ ಹಿಡಿದು ಕೇಳಬೇಕು, ''ಶ್ರೀ ಗುರು ಬಸವಲಿಂಗಾಯ ನಮಃ'' ವೇದೋಕ್ತ ಮಂತ್ರವೋ, ವಚನೋಕ್ತ ಮಂತ್ರವೋ ? ಉತ್ತರಿಸಿರಿ ಎಂದು. ಜೋಳಿಗೆಯಲ್ಲಿ ವೇದ, ಬ್ರಹ್ಮ ಸೂತ್ರ, ಭಗವದ್ಗೀತೆ ಹಾಕದೆ ವಚನ ಗ್ರಂಥಗಳನ್ನು ಏಕೆ ಹಾಕಲಾಗುತ್ತದೆ ಎಂದು ಚಿ.ಮೂರನ್ನು ಕೇಳಲೇಬೇಕಾಗಿದೆ.

''ವೀರಶೈವ ಭಕ್ತಿ ಚಳುವಳಿಯ ಎಲ್ಲ ಲಕ್ಷಣಗಳೂ ಭಾರತದ ಇತರೆಡೆಯ ಭಕ್ತಿ

ಚಳುವಳಿಗಳಲ್ಲಿಯೂ ಇವೆ.'' ಎನ್ನುತ್ತಾರೆ ಧೂರ್ತ ಚಿದಾನಂದಮೂರ್ತಿಯವರು. ವೀರಶೈವ-ಲಿಂಗಾಯತಗಳನ್ನು ಕಲಬೆರಕೆ ಮಾಡಿ ಗೊಂದಲ ಹುಟ್ಟಿಸುವ ಈ ಕೆಡುಕು ಜಾತಿವಾದಿ ಮನುಷ್ಯನ ಅಪ್ರಾಮಾಣಿಕತೆಗೆ ಮಿತಿಯೇ ಇಲ್ಲ. ವೀರಶೈವ ಒಂದು ಮತಾಂಧ ಪಂಥ. ಅದು ವೈಷ್ಣವರನ್ನು ದ್ವೇಷಿಸಿತು. ಬೌದ್ಧ-ಜೈನರನ್ನು ದ್ವೇಷಿಸಿತು. ಉದಾಹರಣೆಗೆ ಆಂಧ್ರದ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಬದುಕಿನಲ್ಲಿ ನಡೆದ ಒಂದು ಪ್ರಸಂಗ. ಇವರ ಪರಮಶಿಷ್ಯರಾದ ರೇವಯ್ಯ ಎಂಬುವವರು ಬೌದ್ಧಾಚಾರ್ಯರನ್ನು ಕೊಲ್ಲಲು ಧನದಪುರದ ರಾಜನಾದ ವೆಲನಾಡ ಚೋಳರಾಜನು ಕೋಪದಿಂದ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಕಣ್ಣುಗಳನ್ನು ಕೀಳಿಸಿದನು. (ಶಿವಶರಣ ಕಥಾರತ್ನಕೋಶ. ಪುಟ 234) ಬಸವ ಸ್ಥಾಪಿತ ಲಿಂಗಾಯತ ಧರ್ಮವು ಎಂದೂ ಇಂಥ ಮತಾಂಧ ಕೆಲಸಕ್ಕೆ ಕೈಹಾಕದೆ ಜನರ ಮನಸ್ಸನ್ನು ಪರಿವರ್ತಿಸುವ ಕಾರ್ಯವನ್ನು ಮಾಡಿತು. ಲಿಂಗಾಯತ ಧರ್ಮವು ಸಾಮಾಜಿಕ ಪರಿವರ್ತನೆಗಾಗಿ ಚಳುವಳಿಯನ್ನು ಹಮ್ಮಿಕೊಂಡಿತೇ ವಿನಾ ವೀರಶೈವವಲ್ಲ. ಭಾಕ್ತಿಕ ಚಳುವಳಿಗಳು ಭಾರತದೇಶದಲ್ಲಿ ಸಾಕಷ್ಟು ನಡೆದರೂ ಅವಾವನ್ನೂ ವಚನಕಾರರ ಚಳುವಳಿಗೆ ಹೋಲಿಸಲು ಸಾಧ್ಯವಿಲ್ಲ. ನೈತಿಕ ನೆಲೆಗಟ್ಟಿನ ಮೇಲೆ ಓರ್ವ ವ್ಯಕ್ತಿ ಉಪವಾಸವಿದ್ದಾಗ ಉಣಲಿಕ್ಕುವುದು, ದಾನ ಕೊಡುವುದು ಬೇರೆ. ಅವನನ್ನು ಕಾಯಕ ಮುಖಿಯನ್ನಾಗಿ ಮಾಡಿ, ಜೀವನದ ಮೌಲ್ಯಗಳ ಬಗ್ಗೆ ಅರಿವು ನೀಡಿ ಅವನು ಸ್ವಾವಲಂಬಿಯಾಗಿ ಬದುಕುವಂತೆ ಮಾಡುವುದು ಬೇರೆ. ಒಂದು ಭಕ್ತಿ ಪಂಥದ ಸದಸ್ಯರಾದಾಗ ಪರಸ್ಪರರಲ್ಲಿ ಜಾತಿ ಭೇದ, ಅಂತಸ್ತು ಭೇದ ಮಾಡದೆ ಇರುವುದು ಬೇರೆ, ಸಮಾಜದಲ್ಲಿರುವ ಜಾತಿ ಭೇದ, ಅಂತಸ್ತು ಭೇದ ತೊಲಗಬೇಕೆಂದು ಹೋರಾಡುವುದು ಬೇರೆ. ಸೊಸೆಯು ಗಂಡನ ಪ್ರೀತಿ ಗಳಿಸಿಕೊಳ್ಳಬಾರದೆಂದು ಕೆಡುಕು ಬುದ್ಧಿಯ ಅತ್ತೆ, ಸೊಸೆ ಮಾಡಿಟ್ಟ ಸಾರಿಗೆ ನೀರು ಅಥವಾ ಉಪ್ಪು ಸುರಿದಂತೆ ಬಸವಾದಿ ಪ್ರಮಥರ ಸಾಧನೆಯ ಮಹತ್ವ ಕಳೆಯಲು ಚಿ.ಮೂ. ಭಾರತದ ತುಂಬ ಇಂಥ ಚಳುವಳಿ ನಡೆದಿದೆ ಎಂದಿದ್ದಾರೆ. ಅನೇಕ ಭಕ್ತಿ ಪಂಥಗಳವರು ತಾವು ವೈಯಕ್ತಿಕ ನೆಲೆಯಲ್ಲಿ ಜಾತಿ ಭೇದ ಮಾಡದೆ ಬದುಕಿದರೇ ವಿನಾ ಸಾಮಾಜಿಕ ಪರಿವರ್ತನೆಗೆ ಕೈ ಹಾಕಿದ ಕ್ರಾಂತಿಕಾರಿಗಳಲ್ಲ. ಆದರೆ ವಚನಕಾರರ ಕ್ರಾಂತಿಯು ಸಾಮಾಜಿಕ ಆಯಾಮ ಹೊಂದಿದ್ದಲ್ಲದೆ ನೇರವಾಗಿ ಸಾಮಾಜಿಕ ಪರಿವರ್ತನೆಗೆ ಕೈ ಹಾಕಿತು. ಕ್ರಾಂತಿಪುರುಷ ಬಸವಣ್ಣನವರ ನೇತೃತ್ವದಲ್ಲಿ ನಡೆದ ಶರಣರ ಚಳುವಳಿ ಮಾನವ ಸಮಾಜದ ಸರ್ವಾಂಗೀಣ ಉನ್ನತಿಗೆ ಕೈ ಹಾಕಿತು. ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಆರ್ಥಿಕ, ಆಧ್ಯಾತ್ಮಿಕ-ಹೀಗೆ ಬದುಕಿನ ಎಲ್ಲ ರಂಗಗಳನ್ನು ವ್ಯಾಪಿಸಿಕೊಂಡಿತು. ಅನೇಕ ಭಕ್ತಿ ಪಂಥಗಳ ಚಳುವಳಿ ಕೇವಲ ಭಾಕ್ತಿಕ ಮತ್ತು ಅಧ್ಯಾತ್ಮಿಕ ಮುಖವನ್ನು ಹೊಂದಿದುದಾಗಿದ್ದರೆ ಶರಣರ ಚಳುವಳಿ ವ್ಯಕ್ತಿಯನ್ನು-ಸಮಾಜವನ್ನು ಸರ್ವತೋಮುಖವಾಗಿ ಮೇಲೆತ್ತುವುದಾಗಿತ್ತು.

ಕಾಯಕದ ವಿಷಯವನ್ನು ತೆಗೆದುಕೊಳ್ಳೋಣ. ಅನೇಕ ಭಕ್ತಿ ಪಂಥದವರು ಕೆಲವೊಮ್ಮೆ ಕೀಳೆಂದು ಸಂಪ್ರದಾಯವು ಕರೆದ ಕಾಯಕಗಳವರಾಗಿದ್ದರೆ ತಾವು ಆ ಕಾಯಕವನ್ನು ತೊರೆದು ಪೂಜೆ-ಭಜನೆ ಸಂಕೀರ್ತನೆಗಳಲ್ಲಿ ತೊಡಗಿ ಹೆಚ್ಚು ಮಡಿವಂತಿಕೆಯನ್ನು ರೂಢಿಸಿಕೊಂಡು ಶ್ರೇಷ್ಠರಾಗಲು ಯತ್ನಿಸಿದ್ದನ್ನು ಕಾಣುತ್ತೇವೆ. ಆದರೆ ಬಸವ ಪಥಿಕರಾದ ಶರಣರು ತಮ್ಮ ಕಾಯಕಗಳನ್ನು ತೊರೆಯದೆ ಆ ಕಾಯಕಗಳು ಸಮಾಜಕ್ಕೆ ಅನಿವಾರ್ಯ; ಅವಾವೂ ಕೀಳಲ್ಲ ಎಂದು ಘೋಷಿಸಿ, ಅವುಗಳನ್ನು ಮಾಡುತ್ತಲೇ ಜೀವನ ವಿಮುಖಿಗಳಾಗದೆ ಬದುಕನ್ನು, ಕಾಯಕವನ್ನು ಪ್ರೀತಿಸಿ, ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಗಳಾದರು.

ಕಾಯಕಾರದ ಮೈ ಸೊಂಬತನದಿಂದ ಬೇರೆ
ಕೂಳಗಿಸಲಾರದೆ ಹಸಿದಿಪ್ಪರಯ್ಯಾ !

ಒಡಲ ಸೀರೆಯ ಗಳಿಸಲಾರದೆ ಕಚ್ಚುಟವ ಕಟ್ಟಿಕೊಂಡಿಪ್ಪರಯ್ಯಾ
ಮೀಯಲು ಎಣ್ಣೆಯ ಗಳಿಸಲಾರದೆ
ಮಂಡೆ ಬೋಳಾಗಿಪ್ಪರಯ್ಯಾ !
ದಿಟದಿಂದ ಬಿಡಿಸಲರಿದೆ ಸಂಸಾರದ
ಶಠೆಯನವಧರಿಸಿಕೊಂಡಿಪ್ಪವರಿಗೆ
ನಾನಂಜುವೆನಯ್ಯಾ ಸಕಲೇಶ್ವರಾ !

ಭಕ್ತರಾಗಿ ದುಡಿಮೆಯನ್ನು ಕಡೆಗಣಿಸಿ ತಿರುಗದೆ ದುಡಿಮೆಗೆ ಗೌರವ ಮತ್ತು ದಿವ್ಯತ್ವ ತಂದುಕೊಟ್ಟರು. ಇಂಥಾ ಸಾಮಾಜಿಕ ಆಯಾಮವನ್ನುಳ್ಳ ಮತ್ತೊಂದು ಚಳುವಳಿಯನ್ನು ನಾವು ಮತ್ತೆಲ್ಲೂ ಕಾಣಲು ಸಾಧ್ಯವಿಲ್ಲ. ಆದ್ದರಿಂದ ಚಿ.ಮೂ ಶರಣರ ಬಗ್ಗೆ ಮತ್ಸರವನ್ನು, ಅಸಹನೆಯನ್ನು ಇಟ್ಟುಕೊಂಡು ಅವರ ಚಳುವಳಿಯನ್ನು ವಿಶ್ಲೇಷಿಸುವುದು ಬೇಡ. ''ಅಶ್ವತ್ಥಾಮ ಹತಃ'' ಎಂದು ಕೂಗಿ ಹೇಳಿ ದ್ರೋಣಾಚಾರ್ಯನನ್ನು ಧೃತಿಗೆಡಿಸಿ, ತಾನು ಸತ್ಯ ಸಂಧ ಎನ್ನಿಸಿಕೊಳ್ಳಲು ಕುಂಜರಃ ಎಂದು ಮೆಲ್ಲನೆ ನುಡಿದ ಸತ್ಯಸಂಧ ಧರ್ಮರಾಜನಂತೆ, ಕುಳಿತಿದ್ದ ಮಂದಿಯನ್ನು ಗಲಿಬಿಲಿಗೆ ಒಳಗುಮಾಡಲು ಹಾವು-ಚೇಳುಗಳನ್ನು ಚಿದಾನಂದ ಮೂರ್ತಿ ಬಿಡುವಂತೆ ಕೆಲವು ಕಿಡಿಗೇಡಿಗಳು ಕೆಲವು ಮಾತುಗಳನ್ನು ಹರಿಯಬಿಟ್ಟಿದ್ದಾರೆ. ''ಬಸವಣ್ಣನ ಮನೆಯಲ್ಲಿದ್ದ ವಚನಕಾರ ವಚನ ಭಂಡಾರಿ ಶಾಂತರಸ ಜನಿವಾರ ಧರಿಸಿದ್ದುದು ಅವನ ಮಾತಿನಲ್ಲೆ ಸೂಚಿತವಾಗಿದೆ.'' ಈ ಮಾತಿನಿಂದ ಚಿ.ಮೂ. ಏನು ಸಾಧಿಸಲು ಬಯಸಿದ್ದಾರೋ ತಿಳಿಯದು.

ವಚನವನ್ನು ಉಲ್ಲೇಖಿಸದೆ ಚಿ.ಮೂ. ಅರೆ ಬರೆ ಪ್ರಸ್ತಾಪ ಮಾಡಿ ಕೈಬಿಟ್ಟಿರುವ ವಚನಗಳು ಇವು ಇರಬಹುದು.

ಅಯ್ಯಾ ಗುರುವೆಂಬರ್ಚಕನು ಎನ್ನ ತಂದು
ಎನಗಿಷ್ಟವ ಕಟ್ಟಲಿಕೆ
ಹಂಗನೂಲ ಕೊರಳಲ್ಲಿ ಹಾಕಿ ಕಟ್ಟಿಕೋ ಎಂದನು
ಅದು ಎನಗೊಡವೆಯಲ್ಲವೆಂದು ಕಂಠವ ಹಿಡಿದು
ಲಿಖಿತವ ಲೇಖನವ ಮಾಡಿ ಮಾಡಿ ದಣಿದು
ಹಂಗನೂಲ ಹರಿದು ಹಾಕಿದೆನು.
ಇಷ್ಟವನಿಲ್ಲಿಯೇ ಇಟ್ಟೆನು. (ವಚನ 23, ಸಂಕೀರ್ಣ ಸಂಪುಟ 9)

ಆಂಧ್ರ ಮತ್ತು ತಮಿಳುನಾಡಿನ ಆರಾಧ್ಯ ಬ್ರಾಹ್ಮಣರಲ್ಲಿ ಒಂದು ಸಂಪ್ರದಾಯವಿದೆ. ಆರಾಧ್ಯ ಬ್ರಾಹ್ಮಣರ ಮಕ್ಕಳಿಗೆ 8-9ನೆಯ ವಯಸ್ಸಿನಲ್ಲಿ ಉಪನಯನದ ಮೂಲಕ ಜನಿವಾರ ಹಾಕಿ, ನಂತರ ಗುರೂಪದೇಶ ಮಾಡಿಸುವರು. ಆಗ ಗುಡಿಯಲ್ಲಿರುವ ಸ್ಥಾವರಲಿಂಗದ ಆಕಾರದಲ್ಲಿ ಚರಲಿಂಗವೊಂದನ್ನು ಗುರುವಿನಿಂದ ಕೊಡಿಸುವರು. ಆ ಚರಲಿಂಗವನ್ನು ಬ್ರಾಹ್ಮಣ ವಟುವು ಅಡ್ಡಲಾಗಿ ಹಾಕುವ ಜನಿವಾರದ ತುದಿಗೆ ಒಂದು ಬಟ್ಟೆಯ ತುಂಡಿನಲ್ಲಿ ಕಟ್ಟುವನು. ಚಿದಂಬರಮ್ ದೇವಾಲಯದಲ್ಲಿ ಭೇಟಿಯಾದ ಓರ್ವ ಬ್ರಾಹ್ಮಣ ಪಂಡಿತರು ಈ ರೀತಿ ಕಟ್ಟಿದ್ದನ್ನು ನಾನು ಪ್ರತ್ಯಕ್ಷ ನೋಡಿದ್ದೇನೆ. ವಚನ ಭಂಡಾರಿ ಶಾಂತರಸರು ಬಹುಶಃ ಆರಾಧ್ಯ ಬ್ರಾಹ್ಮಣರಾಗಿದ್ದಿರಬಹುದು. ಅವರು ಲಿಂಗಾಯತ ಧರ್ಮದ ದೀಕ್ಷಾ ನಂತರ ಹಂಗುನೂಲು ಆದ ಜನಿವಾರವನ್ನು ತ್ಯಜಿಸಿ, ಇಷ್ಟಲಿಂಗವನ್ನು ಮಾತ್ರ ಧರಿಸಿದ್ದಾರೆ.

ಶಾಂತರಸರು ಸಹ ಬ್ರಾಹ್ಮಣರಿಂದ ಎಂಥ ಒತ್ತಡಕ್ಕೆ ಒಳಗಾಗಿದ್ದಾರೆ ಎಂಬುದನ್ನು ಈ ವಚನದಲ್ಲಿ

ಕಾಣಬಹುದು. (ವಚನ 30, ಸಂಪುಟ 9)

''ಇನ್ನೆಲ್ಲರ ಕೇಳುವುದಕ್ಕೆ ಕುಲ ಛಲ ಮಲ ದೇಹಿಕರು ಬಿಡರೆನ್ನ
ಎದೆಯಲ್ಲಿ ಕಟ್ಟಿದ ಎಳೆಯಾಸೆ ಬಿಡದು
ಕೊಡುವ ಕೊಂಬಲ್ಲಿ ದ್ವಿಜರ ಒಡಗೂಡುವುದು ಬಿಡದು.
ಎನ್ನೊಡೆಯ ಬಸವಣ್ಣ ಹೇಳಿದ ಮಾತಿಂಗೆ ಅಡಿಯಿಡಲಮ್ಮದೆ ಕಟ್ಟಿದೆ ''

''ತುಂಬಾ ವಿಲಕ್ಷಣವಾದ ಜಾತಿ ಪದ್ಧತಿಯಿಂದ ಅನೇಕರಿಗೆ ಮಾನಸಿಕ ಹೊಯ್ದಾಟ ಉಂಟಾಗುವುದು. ಕುಲ ಛಲ ಮಲ ದೇಹಿಗಳಾದ ಬ್ರಾಹ್ಮಣರು ಶಾಂತರಸರನ್ನು ಬಹಳ ಕಾಡಿದ್ದಿರಬೇಕು. ಇಂಥ ಶ್ರೇಷ್ಠ ಕುಲದವನಾಗಿ ಹೇಗೆ ಲಿಂಗದೀಕ್ಷೆ ಪಡೆದೆ ಎಂದಿದ್ದಾರೆ. ಅವರಿಗೆ ಇಷ್ಟಲಿಂಗವನ್ನು ಬಿಡಲು ಇಷ್ಟವಿಲ್ಲ. ಆದರೆ ಮಕ್ಕಳು-ಮರಿ ಕೊಡುವ ಕೊಂಬ ವ್ಯವಹಾರದಿಂದಾಗಿ ದ್ವಿಜರ ಸಂಪರ್ಕ ಬಿಡಲಾಗುತ್ತಿಲ್ಲ. ಆದರೆ ಒಡೆಯ ಬಸವಣ್ಣನ ತತ್ತ್ವ-ವ್ಯಕ್ತಿತ್ವ ಬಹುವಾಗಿ ಆಕರ್ಷಿಸಿವೆ.

ಹೀಗೆ ಶಾಂತರಸರು ಮಾನಸಿಕ ಹೊಯ್ದಾಟಕ್ಕೆ ಸಿಲುಕಿದ್ದಾರೆ ಎಂಬುದು ಈ ಎರಡೂ ವಚನಗಳಿಂದ ನಮಗೆ ಅರ್ಥವಾಗುತ್ತದೆ. ಇಷ್ಟೇ ಅಲ್ಲ ನಿಮ್ನ ವರ್ಗಗಳಿಂದ ಬಂದ ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ ಮುಂತಾದವರು ಮೂಢನಂಬಿಕೆ ಬಿಟ್ಟು ತತ್ತ್ವನಿಷ್ಠೆ, ಏಕದೇವೋಪಾಸನೆ ಅಳವಡಿಸಿಕೊಂಡಷ್ಟು ಮೇಲ್ಜಾತಿಯಿಂದ ಬಂದವರು ಅಳವಡಿಸಿಕೊಳ್ಳಲಾಗದೆ ಜನಿವಾರದ ಮೋಹ, ಬಹುದೇವೋಪಾಸನೆಯ ಮೋಹವನ್ನು ಇಟ್ಟುಕೊಂಡುದನ್ನು ಕಾಣುತ್ತೇವೆ.

ನಮ್ಮ ಆದಿ ಶರಣರು ತತ್ತ್ವನಿಷ್ಠರು, ಲಿಂಗವ್ರತಿಗಳು. ನಂತರದ ಲಿಂಗಾಯತರು ತತ್ತ್ವಭ್ರಷ್ಟರಾಗಿದ್ದರೂ ಆದಿ ಶರಣರು ಖಂಡಿತವಾದಿಗಳು, ತತ್ತ್ವನಿಷ್ಠರೂ ಆಗಿದ್ದರು, ಆಕಸ್ಮಾತ್ ಶಾಂತರಸ ಜನ್ನಿವಾರ ಉಳಿಸಿಕೊಂಡಿದ್ದರು ಎಂದೇ ತಿಳಿದರೂ ಅದರ ಅರ್ಥ ಇಂದಿನ ಲಿಂಗಾಯತರೆಲ್ಲ ಜನಿವಾರವನ್ನು ಹಾಕಬೇಕೆಂದೇನೂ ಅಲ್ಲವಲ್ಲ.

★ ಹಾರುವನೇಸುಕಾಲ ಭಕ್ತನಾದರೇನು ನೇಣಿನ ಹಂಗಬಿಡ.

★ ಎನ್ನವರಾದರೆ ಜನ್ನಕ್ಕೆ ನಡೆವರೆ ?

ಎಂದು ಹೇಳಿದ ಧರ್ಮಪಿತರು ಜನ್ನಿವಾರದ ಮೋಹ ಉಳಿಸಿಕೊಂಡರೆ, ಯಜ್ಞ-ಹೋಮ-ಹವನ ಮಾಡಿದರೆ ತಮ್ಮ ಪ್ರೀತಿಪಾತ್ರರಾಗಲು ಸಾಧ್ಯವಿಲ್ಲ ಎಂದಿದ್ದಾರೆ. ಮಾನವ ಜನಾಂಗದ ಇತಿಹಾಸದಲ್ಲಿ ಧರ್ಮವು ಮೊದಲು ಬಹಳ ಕೆಳಮಟ್ಟದ ಪರಿಕಲ್ಪನೆಯೊಡನೆ ಪ್ರಾರಂಭವಾಗಿ ನಂತರ ಸುಧಾರಿಸುತ್ತ ಹೋಗಿ, ನಂತರ ವಿಶ್ವಧರ್ಮ (universal religion), ರೂಪವನ್ನು ಧರಿಸುತ್ತದೆ. ಆಗ ಬುಡಕಟ್ಟು ಗುಂಪುಗಳು (tribal groups), ವಿವಿಧ ಜಾತಿಗಳು (castes), ಪಂಥಗಳು (cults), ವಿಶ್ವಧರ್ಮದಲ್ಲಿ ಸಮಾವೇಶವಾಗಿ ತಮ್ಮ ಮೂಲ ನಂಬಿಕೆಗಳನ್ನು ಬಿಟ್ಟುಬಿಡುತ್ತವೆ. ಈ ಸದ್ಯದಲ್ಲಿ ಎಲ್ಲರನ್ನು ಇಂಬಿಟ್ಟುಕೊಳ್ಳುವ ವಿಶ್ವಧರ್ಮದ ಲಕ್ಷಣಗಳಿರುವ ಧರ್ಮಗಳೆಂದರೆ ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ, ಲಿಂಗಾಯತ, ಸಿಖ್ ಧರ್ಮಗಳು ಎಂದು ಅವು ಜನಿಸಿದ ಐತಿಹಾಸಿಕ ಕಾಲಮಾನ ದೃಷ್ಟಿಯಿಂದ ಕ್ರಮವಾಗಿ ಹೇಳಬಹುದು. ನನ್ನ ಅಧ್ಯಯನದ ಪ್ರಕಾರ ಜಗತ್ತಿನ ಪ್ರಥಮ ಯೋಗಿ, ಭಾರತೀಯ ಪರಂಪರೆಯ ಮೂಲಪುರುಷ ಶಿವನ ಧರ್ಮವಾದ ಶೈವವು ತನ್ನ ಶುದ್ಧರೂಪದಲ್ಲಿ ವಿಶ್ವಧರ್ಮದ ಲಕ್ಷಣಗಳನ್ನು ಹೊಂದಿದೆ. ಆದರೆ ವೈದಿಕ ಪುರೋಹಿತಶಾಹಿ ತನ್ನ ಕಪಿಮುಷ್ಠಿಗೆ ನಿಜ ಶೈವವನ್ನು ಸಿಕ್ಕಿಸಿಕೊಂಡು ಅದರ ಸ್ವರೂಪವನ್ನು ವಿಕೃತಗೊಳಿಸಿ ಸರಿ ಪಡಿಸಲಾರದಷ್ಟು ಕೆಡಿಸಿದೆ. ಆ ನಿಜಶೈವವನ್ನು ತನ್ನ ವೈದಿಕ ಪರಂಪರೆಯನ್ನು ಬೆಳೆಸುವ ಉಳಿಗಕ್ಕೆ ಇರಿಸಿಕೊಂಡಿದೆ.

ವಿಶ್ವಧರ್ಮಗಳ ಕಕ್ಷೆಯಲ್ಲಿ ಪ್ರವೇಶ ಮಾಡಿದ ಬುಡಕಟ್ಟು (tribe) ಬಣ (clan) ಜಾತಿ (caste) ಪಂಥ (cult)ಗಳವರು ತಮ್ಮ ಮೂಲಭೂತ ಮೂಢನಂಬಿಕೆ ತೊರೆದು ವಿಶ್ವಧರ್ಮವು ವಿಧಿಸುವ ನಿಬಂಧನೆಗೆ ಒಳಗಾಗಬೇಕು. ವಚನ ಶಾಸ್ತ್ರವನ್ನು ಅಧ್ಯಯನ ಮಾಡಿದಾಗ ಈ ಸಮಗ್ರ ಬದಲಾವಣೆಯನ್ನು ಬಸವಾದಿ ಪ್ರಮಥರು ಆದೇಶಿಸಿರುವುದನ್ನು ಕಾಣುತ್ತೇವೆ. ಅನುಯಾಯಿಗಳಿಂದ ನಿರೀಕ್ಷಿಸುತ್ತಾರೆ ಕೂಡ. ಸಮುದ್ರವನ್ನು ಸೇರಿದ ನದಿ ತನ್ನ ಮೂಲಗುಣ, ರುಚಿ, ರೂಪ, ಸಾಂದ್ರತೆ ತೊರೆದು ಸಮುದ್ರದ ಗುಣ, ರುಚಿ, ರೂಪ, ಸಾಂದ್ರತೆ ಅಳವಡಿಸಿಕೊಳ್ಳುವಂತೆ, ಬೆಂಕಿಯಲ್ಲಿ ಬಿದ್ದ ಕಟ್ಟಿಗೆಗಳು ಸುಟ್ಟು ಬೂದಿಯಾದಾಗ ಬೂದಿಯಲ್ಲಿ ಮಾವಿನ ಕಟ್ಟಿಗೆ, ಬೇವಿನ ಕಟ್ಟಿಗೆ ಎಂದು ಹುಡುಕಲು ಸಹ ಸಾಧ್ಯವಿಲ್ಲದಂತೆ. ಹೊಸ ಸಮಾಜವು ರಚನೆಯಾಗಬೇಕು. ಕ್ರೈಸ್ತ, ಇಸ್ಲಾಂ, ಸಿಖ್ ಸಮಾಜಗಳಲ್ಲಿ ಇದು ಸುಲಭವಾಗಿ ಸಿದ್ಧಿಸುವಂತೆ ಅವರ ಧಾರ್ಮಿಕ ಸಂಸ್ಥೆಗಳಾದ ಚರ್ಚ್, ಮಸೀದಿ, ಗುರುದ್ವಾರ ಕೆಲಸ ಮಾಡುತ್ತವೆ. ಆದರೆ ಲಿಂಗಾಯತ ಸಮಾಜದಲ್ಲಿ ಈ ತಾತ್ವಿಕ ಪರಿವರ್ತನೆ, ಏಕರೂಪದ ಆಚಾರ, ಸಾಮಾಜಿಕ ಅಖಂಡತೆ ಸಾಧ್ಯವಾಗದಂತೆ ನೋಡಿಕೊಳ್ಳಲು ಸ್ವಾಮಿಗಳು, ಮಠಗಳು ರಾಜಕೀಯ-ಸಾಮಾಜಿಕ ನೇತಾರರು, ಸಾಹಿತಿಗಳು ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದ್ದಾರೆ. ಈ ದಿಶೆಯಲ್ಲಿ ಚಿದಾನಂದ ಮೂರ್ತಿಯವರ ಕೊಡುಗೆ ಗಮನಾರ್ಹವಾಗಿದೆ. ಕಾಶೀನಾಥ ಶಾಸ್ತ್ರಿಗಳೆಂಬುವ ಕಿತಾಪತಿ ಪಂಡಿತರು ರೇಣುಕಾದಿ ಆಚಾರ್ಯರ ಕಥೆಗಳನ್ನು ಸೃಷ್ಟಿಸಿ ಸಮಾಜವನ್ನು ಒಡೆದು ಚೂರು ಮಾಡಿ, ಶರಣರ ನಿಂದೆಯನ್ನೇ ಏಕೈಕ ಗುರಿಯನ್ನಾಗಿ ಮಾಡಿಕೊಂಡು ಕಡೆಯಲ್ಲಿ ಸಾವು ಎದುರಾದಾಗ ದೇಹದಲ್ಲಿ ಹುಳುಗಳಾಗಿ ಒದ್ದಾಡಿ ದೇಹ ಬಿಟ್ಟಾಗ ಒಂದು ಅಧ್ಯಾಯ ಮುಗಿದಿತ್ತು. ನಂತರ ಆ ಕೃತ್ಯವನ್ನು ಮುಂದುವರಿಸುವ ಪಂಡಿತರು ಹುಟ್ಟಿರಲಿಲ್ಲ. ದಿವಂಗತ ನಂಜುಂಡಾರಾಧ್ಯರು, ಈಗ ಡಾ|| ಎಂ. ಶಿವಕುಮಾರಸ್ವಾಮಿ ಮುಂತಾದವರು ಶೈವ, ವೀರಶೈವ ಸಾಹಿತ್ಯವನ್ನು ರಚಿಸುತ್ತಿದ್ದರೂ ಚಿದಾನಂದ ಮೂರ್ತಿಯಂತೆ ಅವರು ಧೂರ್ತರಲ್ಲ. ಒಂದು ಗೋಡೆಯನ್ನು ಮುಟ್ಟಿ ''ಆನೆ ಬಂತು ಆನೆ'' ಎಂದು ಕುರುಡನು ಕೂಗಿದರೆ, ಗಾಬರಿಗೊಂಡು ಜನ ನೆರೆದಾಗ, ''ಜೈನಧರ್ಮದಲ್ಲಿ ಬರುವ ಆರು ಜನ ಕುರುಡರ ಕಥೆ ಓದಿದ್ದೆ. ಓರ್ವ ಕುರುಡ ಆನೆಯ ಹೊಟ್ಟೆಯನ್ನು ಮುಟ್ಟಿ ಗೋಡೆಯಂತಿದೆ ಎಂದಿದ್ದ. ಅದಕ್ಕೆ ನಾನು ಗೋಡೆಯನ್ನು ಮುಟ್ಟಿ ಆನೆ ಬಂದಿದೆ ಎಂದು ಕೂಗಿದೆ.'' ಎಂದು ಅಂದರೆ ನೀವಾಗ ಅಳುವಿರೋ, ನಗುವಿರೋ ? ಹಾಗೆ ವಚನ ಸಾಹಿತ್ಯವನ್ನು ಚಿ.ಮೂ ದುರ್ಬಳಕೆ ಮಾಡುತ್ತಿದ್ದಾರೆ. ಚನ್ನಬಸವಣ್ಣನವರು ವೀರಶೈವದ ಬಗ್ಗೆ ಮಾತಾಡಿದ್ದಾರೆ ಎಂದು ಚುಟುಕಾಗಿ ಬಡಬಡಿಸಿ ಬಿಡುವುದು, ಶಾಂತರಸರು ಜನಿವಾರ ಧರಿಸಿದ್ದರು ಎಂದು ಸಾಧಾರಪೂರ್ವಕ ಉದಾಹರಣೆ ಇಲ್ಲದೆ ಓದುಗರ ತಲೆಯಲ್ಲಿ ಸಂಶಯದ ಹಾವು-ಚೇಳುಗಳನ್ನು ಹರಿಯಬಿಡುವುದನ್ನು ಚಿ.ಮೂ. ಮಾಡುತ್ತಿದ್ದಾರೆ. ಮೊದಲೇ ವಚನ ಸಾಹಿತ್ಯವನ್ನು ಓದುವ ಪ್ರವೃತ್ತಿ ಇಲ್ಲದ ಲಿಂಗಾಯತರು ಓದಿದರೂ ಅರ್ಥವಾಗದೆ ಗೊಂದಲದಲ್ಲಿ ಸಿಕ್ಕಿ, ತೆನಾಲಿ ರಾಮಕೃಷ್ಣನ ಬೆಕ್ಕು ಬಿಸಿ ಹಾಲಿನಲ್ಲಿ ಬಾಯಿ ಇಡಲ್ಪಟ್ಟು ಸುಟ್ಟುಕೊಂಡು, ಹಾಲು ಕಂಡರೆ ಓಡುವಂತೆ ಲಿಂಗಾಯತರು ಅಧ್ಯಯನವನ್ನೇ ತೊರೆಯುವ ಸ್ಥಿತಿಗೆ ಬರುತ್ತಿದ್ದಾರೆ ಎಂದರೆ ಸುಳ್ಳಲ್ಲ.

''ಹರಿಹರ ಕವಿ ಬ್ರಾಹ್ಮಣರನ್ನು ವೇದ ಜಡರೆಂದು ನಿಂದಿಸಿ, ಜನಿವಾರವನ್ನು ತಿರಸ್ಕರಿಸಿದ ಬಸವನ ಬಗ್ಗೆ ಕಾವ್ಯ ಬರೆದಿದ್ದರೂ ಯಜ್ಞೋಪವೀತಧಾರಿ ಶಿವನ ಆಸ್ಥಾನದ ''ಸಕಳಾಗಮಕೋವಿದ'' ಬೃಹಸ್ಪತಿಯನ್ನು ಹೊಗಳಿದ್ದಾನೆ. ಮೈಲಾರ ಬಸವಲಿಂಗರ ಶಿವನೂ ಜನಿವಾರ ಧರಿಸಿದವನೇ. ಈಗಿನ ಆರಾಧ್ಯರಂತೆ, ಹಲವು ವೀರಶೈವ ಉಪಜಾತಿಗಳ ಜನರಂತೆ ಹರಿಹರ ಕವಿ, ಪದ್ಮರಸ ಇಬ್ಬರೂ ಜನಿವಾರ

ಧರಿಸಿದ್ದವರು. ರಾಘವಾಂಕನ ಪ್ರಕಾರ, ಯಾಗ ಮಾಡಿದರೂ ಸತ್ಯವಂತನಾಗಿದ್ದ ಹರಿಶ್ಚಂದ್ರನಿಗೆ ಶಿವ ಒಲಿದ. ತೆಲುಗು ಬಸವ ಪುರಾಣ ಕರ್ತೃ ಸೋಮನಾಥನ ಗುರು ವೇದಪ್ರವೀಣ. ಕನ್ನಡ ಬಸವ ಪುರಾಣ ಬರೆದ ಭೀಮಕವಿ ಒಬ್ಬ 'ಶೈವ ಬ್ರಾಹ್ಮಣ' (ವೀರಶೈವ). ಚಿತ್ರದುರ್ಗದ ಮುರಿಘಾ ಮಠದ ಸ್ಥಾಪಕರಾದ ಶಾಂತವೀರಾರಾಧ್ಯರು (1680)''ವೇದ ವೇದಾಂತ ಆಗಮೋಪನಿಷತ್ ಪುರಾಣೋಕ್ತ ಶ್ರೀಮದ್ ವೀರಶೈವಾಚಾರ'' ಎಂಬ ಅಭಿಪ್ರಾಯವು ಅಂದಿನ ಎಲ್ಲ ವೀರಶೈವ ಪ್ರಾಜ್ಞರ ಅಭಿಪ್ರಾಯವೇ ಆಗಿದೆ. ವೀರಶೈವ ವಿದ್ವಾಂಸರು ವೇದಗಳಿಗೆ ಆಗಮಗಳಿಗೆ ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆದರು.''- ಚಿ.ಮೂ.

ಚಿ.ಮೂ ಅವರು ಈಗ ಅರುಳುಮರುಳಿನ ಸ್ಥಿತಿಯಲ್ಲಿದ್ದು ಲೇಖನದ ಶೀರ್ಷಿಕೆಗೆ ಸಂಬಂಧವಿಲ್ಲದ ವಿಷಯಗಳನ್ನು ಪರಸ್ಪರ ಸಂಬಂಧವಿಲ್ಲದಿದ್ದರೂ ಪುಂಖಾನುಪುಂಖವಾಗಿ ಪ್ರಸ್ತಾಪಿಸಿ ತಮ್ಮ ಮಾನಸಿಕ, ಬೌದ್ಧಿಕ ಸ್ಥಿತಿಯನ್ನು ಪ್ರದರ್ಶಿಸುತ್ತಿದ್ದಾರೆ.

ಹರಿಹರ ಕವಿಯನ್ನು ಓರ್ವ ಕವಿಯನ್ನಾಗಿ ನೋಡಬೇಕು. ಅವನ ಪ್ರತಿಭಾನ್ವಿತ ಲೆಕ್ಕಣಿಕೆ ಹರಿಯಲು ಅವನಿಗೆ ಕಥಾವಸ್ತುಗಳು ಬೇಕು. ಆ ಕಥಾ ವಸ್ತುಗಳ ಬಗ್ಗೆ ವಿಶೇಷ ಧಾರ್ಮಿಕ-ಆಚರಣಾತ್ಮಕ ಸಂಬಂಧವೇನೂ ಆತನಿಗೆ ಇಲ್ಲ. 63 ಪುರಾತನರ ಚರಿತ್ರೆಯನ್ನೂ ತನ್ನ ಲೇಖನಿಗೆ ವಸ್ತುವನ್ನಾಗಿ ಆರಿಸಿಕೊಂಡಿದ್ದಾನೆ. ಪುಷ್ಪರಗಳೆಯೆಂಬ ಕೃತಿಯಲ್ಲಿ ಹೂವುಗಳ ವರ್ಣನೆಯನ್ನು ಮುಖ್ಯವಾಗಿಟ್ಟುಕೊಂಡಿದ್ದಾನೆ. ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ಎಲ್ಲರ ಬಗ್ಗೆ ಬರೆದರೂ ಮೆಚ್ಚುಗೆಯು ಹೆಚ್ಚಾಗಿ ಬಸವಣ್ಣನವರ ಸರ್ವಾಂಗ ಸುಂದರ ವ್ಯಕ್ತಿತ್ವದ ಕಡೆಗೆ ಹರಿದಿದೆ. ಓರ್ವ ಅಭಿಮಾನಿಯಾಗಿ ಬಸವಣ್ಣನವರ ವ್ಯಕ್ತಿತ್ವ ಕುರಿತು ಹಾಡಿ ಹೊಗಳಿದ್ದಾನೆಯೇ ವಿನಾ ಅವರ ಧರ್ಮಾನುಯಾಯಿಯಾಗಿ ಅಲ್ಲ.

ಅವನು ಮೂಲತಃ ಶಿವಕವಿ, ಶಿವನೇ ಆತನ ಆರಾಧ್ಯ ದೈವ, ಹಂಪೆಯ ವಿರುಪಾಕ್ಷನ ಪರಮಭಕ್ತ. ಆದ್ದರಿಂದ ಅದನ್ನು ನಾವು ಗಮನದಲ್ಲಿಟ್ಟೆ ಬಸವರಾಜ ದೇವರ ರಗಳೆಯನ್ನು ಓದಬೇಕು. ಆತನಗೆ ತತ್ವಜ್ಞಾನಕ್ಕಿಂತ ಭಾವುಕ ಭಕ್ತಿಯ ಕಡೆಗೆ ಮೋಹ, ಆಕರ್ಷಣೆ ಹೆಚ್ಚು. ಶೈವಕವಿಯಾದ್ದರಿಂದಲೇ ಕೈಲಾಸವನ್ನು ಒಪ್ಪದ ಬಸವಾದಿ ಪ್ರಮಥರನ್ನು ಕೈಲಾಸ ಎಂಬ ಹೈಕಮ್ಯಾಂಡ್ ಸ್ಥಾನದಿಂದಲೇ ಹರಿಹರ ಎಲ್ಲರನ್ನೂ ಹುಟ್ಟಿಸುವುದು. ಆದರೆ ಇದನ್ನೇ ಶರಣರ ಸಿದ್ಧಾಂತ ಎಂದು ನಾವು ಭಾವಿಸಬಾರದು. ಪರಿಸ್ಥಿತಿ ಹೀಗಿದ್ದಾಗ ಹರಿಹರನು ಶಿವನ ಬಗ್ಗೆ, ಬೃಹಸ್ಪತಿಯ ಬಗ್ಗೆ ಬರೆದಿದ್ದಾನೆ ಎಂದು ಚಿ.ಮೂ ಹೇಳುವುದು ಅರ್ಥರಹಿತ. ಹರಿಹರ ಕವಿ ಕರ್ಮಕಾಂಡಕ್ಕಿಂತಲೂ ಭಕ್ತಿ ಪಾರಮ್ಯಕ್ಕೆ ಮಹತ್ವ ನೀಡಿದವನು. ವೈದಿಕ ಧರ್ಮವು ಹೋಮ-ಹವನ, ಯಜ್ಞ-ಯಾಗ ಮುಂತಾದ ಕರ್ಮಕಾಂಡಕ್ಕೆ ಒತ್ತುಕೊಟ್ಟರೆ ಶೈವವು ಅಷ್ಟವಿಧಾರ್ಚನೆ, ಉಪಾಸನೆ, ಭಕ್ತಿ-ಸ್ತೋತ್ರಗಳಿಗೆ ಮಹತ್ವವನ್ನು ಕೊಡುತ್ತದೆ. ಹರಿಹರನಿಗೆ ಶಿವಭಕ್ತಿ ಮಾರ್ಗವೇ ಬಲುಪ್ರಿಯ. ಅವನಿಗೆ ವೈದಿಕ ಧರ್ಮದ ಕರ್ಮಕಾಂಡವನ್ನು ಪ್ರಶ್ನಿಸುವ ದಿಟ್ಟತನ ಇಲ್ಲದಿದ್ದರೂ ಆ ದಿಟ್ಟತನ ತೋರಿದ ಬಸವಣ್ಣನವರ ಬಗ್ಗೆ ಅತೀವ ಅಭಿಮಾನ. ಅವರ ಬಾಯಿಯಲ್ಲಿ ತನ್ನ ಆಶಯವನ್ನು ಅಭಿವ್ಯಕ್ತಗೊಳಿಸುತ್ತಾನೆ. ಬಸವಣ್ಣನವರು ಸಂಗಮೇಶ್ವರನನ್ನು ಹೇಗೆ ಪೂಜಿಸಿದರು ಎಂದು ವರ್ಣಿಸುತ್ತಾ ತನ್ನ ಪೂಜೆಯ ಆಸಕ್ತಿಯನ್ನು ಆ ವರ್ಣನೆಯಲ್ಲಿ ಚಿತ್ರಿಸುತ್ತಾನೆ. ಅರ್ಚಕನಾಗಿದ್ದ ತನಗೆ ಜನಿವಾರವನ್ನು ಕಿತ್ತೆಸೆಯುವ ಧೈರ್ಯವಿಲ್ಲದಿದ್ದರೂ ತರುಣ ಬಸವಣ್ಣ ಕಿತ್ತೆಸೆಯುವಾಗ ಬಲು ತೀಕ್ಷ್ಣವಾಗಿ, ''ಕರ್ಮಲತೆಯಂತಿರ್ದ ಜನ್ನಿವಾರವಂ ಕಳೆದು ಬಿಸುಟು, ಹೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪರಿದು ಬಿಸುಟು'' (ಸ್ಥಲ 2) ಎಂದು ಬಸವಣ್ಣನವರ ಕ್ರಾಂತಿಕಾರಿ ವಿಚಾರಧಾರೆಯನ್ನು ಚಿತ್ರಿಸಲು ಆಯ್ದುಕೊಂಡು ತನ್ನ ಅಂತರಂಗದ

ಅಳಲನ್ನು ಹೊರಹಾಕುತ್ತಾನೆ. ವೇದ ಜಡರನ್ನು ಬಗೆಬಗೆಯಾಗಿ ನಿಂದಿಸುವಾಗ ಮೃದುಮಾತಿನ ಬಸವಣ್ಣನವರು ಹಾಗೆಲ್ಲ ದೂಷಿಸಿದ್ದರೋ ಇಲ್ಲವೋ ಬಸವಣ್ಣನವರ ಮೂಲಕ ಹರಿಹರನು ಕರ್ಮಜಡರನ್ನು, ಜಾತಿವಾದಿಗಳನ್ನು ತೀಕ್ಷ್ಣವಾಗಿ ನಿಂದಿಸುತ್ತಾನೆ. ಹೀಗಾಗಿ ಹರಿಹರನಿಗೆ ಕರ್ಮಜಡರಿಗಿಂತ ಭಕ್ತಿಜೀವಿಗಳೇ ಬಲುಪ್ರಿಯ. ಹರಿಹರ, ರಾಘವಾಂಕ, ಪದ್ಮರಸ, ಭೀಮಕವಿ, ಪಾಲ್ಕುರಿಕೆ ಸೋಮನಾಥ ಮುಂತಾದವರೆಲ್ಲರೂ ಶೈವ ಬ್ರಾಹ್ಮಣರು, ಶಿವಕವಿಗಳು. ಪಾಲ್ಕುರಿಕೆ ಸೋಮನಾಥ ಆರಾಧ್ಯ ಬ್ರಾಹ್ಮಣನಲ್ಲ. ಶೈವ (ಸ್ಮಾರ್ತ)ಬ್ರಾಹ್ಮಣ. ಆರಾಧ್ಯ ಬ್ರಾಹ್ಮಣರು ವೈದಿಕ ಮಾರ್ಗದ ಪ್ರೇಮಿಗಳು ; ಬಹುದೇವತಾ ಉಪಾಸಕರು. ಹರಿಹರ ಮುಂತಾದವರು ಏಕದೇವತಾ ಉಪಾಸಕರು ಅರ್ಥಾತ್ ಕಟ್ಟಾ ಶಿವೋಪಾಸಕರು, ಶುದ್ಧಶೈವರು.

ಚಿ.ಮೂ ಕೇವಲ ಲಿಂಗಾಯತ ಧರ್ಮ-ಸಾಹಿತ್ಯಗಳಿಗಷ್ಟೇ ದ್ರೋಹ ಮಾಡುತ್ತಿಲ್ಲ ಪ್ರಥಮ ಯೋಗಿರಾಜ ಶಿವನಿಗೆ, ಆತನು ಕೊಟ್ಟ ಶುದ್ಧ ಶೈವಕ್ಕೂ ದ್ರೋಹವನ್ನು ಬಗೆಯುತ್ತಿದ್ದಾರೆ. (ಆದ್ದರಿಂದ) ಲಿಂಗಾಯತ ಧರ್ಮೀಯರು ಮಾತ್ರವಲ್ಲ ವೀರಶೈವರಾದ ಪಂಚಪೀಠಾಧೀಶರು ಸಹ ಚಿ.ಮೂ. ಅವರ ಇಂಥ ಧಾರ್ಮಿಕ ಲೇಖನಗಳನ್ನು ವಿರೋಧಿಸಬೇಕು). "ಯಜ್ಞೋಪವೀತಧಾರಿ ಶಿವ" ಎಂದು ಬಳಸುವಲ್ಲಿ ಆ ದ್ರೋಹವು ಹುದುಗಿದೆ. ಜನ್ನಿವಾರ-ಜನ್ನ, ಯಜ್ಞ ಪದಕ್ಕೆ ಸಂಬಂಧಿಸಿದುದು ಜನ್ನಿವಾರ ಎಂದರೆ ಯಜ್ಞೋಪವೀತ. ಈ ಜನ್ನಿವಾರ ಧಾರಣೆಯು ಆರ್ಯರಿಂದ ಬಂದುದು. ವೇದ ಕಾಲದಿಂದ ಬಂದುದು. ವರ್ಣಾಶ್ರಮದ ಪ್ರತಿಪಾಲಕರು, ಸಂರಕ್ಷಕರು ಆದ ರಾಮ, ಕೃಷ್ಣ ಜನಿವಾರವನ್ನು ಧರಿಸಿದ್ದರೇ ವಿನಾ ಶಿವನಲ್ಲ. ವೇದಗಳು ರಚನೆಯಾಗುವ ಕಾಲಕ್ಕೆ ಆಗಲೇ ಐತಿಹಾಸಿಕ ಯುಗಪುರುಷ ಶಿವನು ಆಗಿಹೋಗಿದ್ದನು. ಆತನ ಪ್ರಭಾವವು ಈಗಿನ ಹಿಂದುಸ್ಥಾನದ ಎಲ್ಲೆಗಳನ್ನು ದಾಟಿ ಹೊರರಾಷ್ಟ್ರಗಳಲ್ಲೂ ಬೆಳೆದಿತ್ತು. ಅಂಥ ಶಿವನ ನಂತರ ಎಷ್ಟೋ ಶತಮಾನಗಳಾದ ಮೇಲೆ ಆರ್ಯರು ಬಂದರು. ವೇದಗಳನ್ನು ರಚಿಸಿದರು, ವರ್ಣಾಶ್ರಮ ವ್ಯವಸ್ಥೆಯನ್ನು ತಾವೂ ಬೆಳೆಸಿಕೊಂಡು, ಮೊದಲೇ ಇದ್ದ ಮೂಲನಿವಾಸಿಗಳ ಮೇಲೂ ಹೇರಿದರು. ಮಾನವ ಸಮಾಜವನ್ನು ವರ್ಣಾಶ್ರಮದ ಆಧಾರದ ಮೇಲೆ ವಿಭಜಿಸಲು ಸಾಧನವಾದುದೇ ಜನ್ನಿವಾರ. ಅಂದಾಗ ವೇದಪೂರ್ವದ ಶಿವನ ಕೊರಳಲ್ಲಿ ಜನ್ನಿವಾರ ಇರಲು ಹೇಗೆ ಸಾಧ್ಯ ? ಜನ್ನಿವಾರ ಧಾರಿಯ ಪ್ರಮುಖ ಧಾರ್ಮಿಕ ವಿಧಿ ಹೋಮ-ಹವನ, ಯಜ್ಞ-ಯಾಗಾಚರಣೆ. ಶಿವನು ಮತ್ತು ಅವನ ದಂಡನಾಯಕನಾದ ರುದ್ರ, ವೀರಭದ್ರ ಮುಂತಾದವರೆಲ್ಲ ಕಟ್ಟಾ ಯಜ್ಞ ವಿರೋಧಿಗಳು. ದಕ್ಷಬ್ರಹ್ಮನು ಅಜಯಾಗವನ್ನು ಮಾಡುತ್ತಿದ್ದುನ್ನು ಪ್ರತಿಭಟಿಸಿ ವೀರಭದ್ರ ಯಜ್ಞವನ್ನು ನಾಶಮಾಡುವುದನ್ನು ಕೇಳಿದ್ದೇವೆ. ವರ್ಣಾಶ್ರಮ ವಿರೋಧಿ ಬುದ್ಧನ ಪ್ರಭಾವ ಎಲ್ಲೆ ಮೀರಿ ಬೆಳೆದಾಗ, ವರ್ಣಾಶ್ರಮ ವ್ಯವಸ್ಥೆಯ ರಕ್ಷಕರಾದ ವಿಷ್ಣು, ಅವನ ಅವತಾರವಾದ ರಾಮ, ಕೃಷ್ಣ ಮುಂತಾದವರ ಸಾಲಿನಲ್ಲಿ ಬುದ್ಧನನ್ನು- ದಶಾವತಾರದಲ್ಲಿ ಒಬ್ಬನನ್ನಾಗಿ ಮಾಡಿದ ಕುತಂತ್ರ ನಡೆದಂತೆ, ವೇದಗಳ ಕಾಲಕ್ಕೆ ಆಗಲೇ ಅತ್ಯಂತ ಪ್ರಭಾವಶಾಲಿಯಾಗಿ ಜನಮನದಲ್ಲಿ ಹಾಸುಹೊಕ್ಕಾಗಿದ್ದ ಶಿವನನ್ನು ಪುರಾಣೀಕರಿಸಿ ಆತನನ್ನು ಒಬ್ಬ ದೇವತೆಯನ್ನಾಗಿ ಮಾಡಲಾಯಿತು. ಬ್ರಹ್ಮ-ವಿಷ್ಣು-ಮಹೇಶ್ವರ ಎಂಬ ತ್ರಿಮೂರ್ತಿಗಳ ಪರಿಕಲ್ಪನೆ ಏಕಮೇವಾದ್ವಿತೀಯನಾದ ಯೋಗಚಕ್ರವರ್ತಿ ಶಿವನ ಮಟ್ಟವನ್ನು ಕೆಳಗಿಳಿಸುವ ಹುನ್ನಾರವೇ ಹೊರತು ಗೌರವಿಸುವುದಲ್ಲ. ಐತಿಹಾಸಿಕ ಮಹಾಪುರುಷ ಶಿವನನ್ನು ತಮೋಗುಣ ಪ್ರಧಾನ ದೇವತೆ, ಸಂಹಾರ ಕರ್ತೃ ಎನ್ನುವುದು.ಮಹಾನ್ ಅಪಚಾರ. ಬುದ್ಧ, ಏಸು ಕ್ರಿಸ್ತರಂತೆ ಓರ್ವ ಐತಿಹಾಸಿಕ ವ್ಯಕ್ತಿ 'ಶಿವ' ಎಂದು ನಾವು ಆತನ ವ್ಯಕ್ತಿತ್ವವನ್ನು ಅರಿತು, ವಿಶ್ಲೇಷಿಸಿದರೆ ಆತ ಅತಿ ಶ್ರೇಷ್ಠ ಪ್ರವಾದಿಯಾಗಿ ನಿಲ್ಲುತ್ತಾನೆ. ಶಿವನು

ಯಜ್ಞ ವಿರೋಧಿ, ಆದರೆ ಆತನ ತತ್ವಕ್ಕೆ ವಿರುದ್ಧವಾಗಿ ಇಂದು ಬ್ರಾಹ್ಮಣರು ಶಿವನ ಹೆಸರಲ್ಲಿ ಯಜ್ಞ ಮಾಡಿಸುತ್ತಾರೆ. ಮೂಢ ವೀರಶೈವರು ಸಹಿತ ಅದರಲ್ಲಿ ಪಾಲ್ಗೊಳ್ಳುತ್ತಾರೆ. ವೀರಭದ್ರನ ಒಕ್ಕಲಿನವರು ಕೆಂಡ ಹಾಯುವುದು ಅಗ್ನಿಪೂಜೆಯಲ್ಲ. "ನೀವು (ವೈದಿಕರು) ಯಾವ ಅಗ್ನಿಯನ್ನು ದೇವರು ಎನ್ನುವಿರೋ ಅದನ್ನು ಪ್ರತಿಭಟಿಸಿ ನಾನು ತುಳಿಯುತ್ತೇನೆ" ಎಂಬ ಪ್ರತಿಭಟನೆ ಕೆಂಡ ಹಾಯುವುದರಲ್ಲಿದೆ. ಇದೂ ಒಂದು ಮೂಢನಂಬಿಕೆ ; ಶರಣರಿಗೆ ನಿಷಿದ್ಧ ಆಚರಣೆ ಈ ಬಗ್ಗೆ ಚಿಂತನೆ ಮಾಡುವ ಗೋಜಿಗೆ ಯಾರೂ ಹೋಗುವುದೇ ಇಲ್ಲ. ನಮ್ಮ ಮಠಾಧೀಶರು ಕೌಲೆತ್ತಿನಂತೆ; ಎಲ್ಲವನ್ನೂ ಮೂಕಸಾಕ್ಷಿಯಾಗಿ ನೋಡಿ, ಯಾವಾಗಲಾದರೊಮ್ಮೆ ತಲೆ ಆಡಿಸುತ್ತಾರೇನೋ. ಇಂದು ಕ್ರಾಂತಿಯೋಗಿ ಬಸವಣ್ಣನವರ ಸಂದೇಶಗಳಿಗಷ್ಟೇ ಅಲ್ಲ. ನಮ್ಮೆಲ್ಲರ ಪಿತಾಮಹ ಶಿವನ ತತ್ವಗಳಿಗೂ ಅಪಚಾರವಾಗುತ್ತಿದೆ. ಅಸ್ತವ್ಯಸ್ತಗೊಂಡಿರುವ ಲಿಂಗಾಯತ ಸಮಾಜವನ್ನೇ ತಿದ್ದಲು ನಮಗಾಗುತ್ತಿಲ್ಲ, ಇನ್ನು ಬೃಹತ್ ಶೈವ ಪರಂಪರೆಯನ್ನು ತಿದ್ದುವುದು ಅಸಾಧ್ಯ ಎಂದೇ ನಾವು ಕೈಚೆಲ್ಲಿ ಕುಳಿತಿದ್ದೇವೆ. ಆದ್ದರಿಂದ ಶಿವನಿಗೆ ಜನ್ನಿವಾರ ತೊಡಿಸಿ ಬ್ರಾಹ್ಮಣೀಕರಣ ಮಾಡುವ ಕುತಂತ್ರವನ್ನು ವಿರೋಧಿಸುವ ಬದಲು ಚಿ.ಮೂ ಎಷ್ಟೂ ಸದ್ದುಗದ್ದಲವಿಲ್ಲದೆ ಶಿವನಿಗೆ ಜನ್ನಿವಾರ ಹಾಕಿರುವುದನ್ನು ನೋಡಿದರೆ ಅವರ ಕುತಂತ್ರ ಬುದ್ಧಿಗೆ ತಲೆದೂಗುವಂತಾಗುತ್ತದೆ. ಈ ಕುತಂತ್ರದ ಸಂಚಿನಲ್ಲಿ ಶುದ್ಧ ಬಸವ ಮಾರ್ಗಾನುಯಾಯಿಗಳಾದ ಮೈಲಾರ ಬಸವಲಿಂಗ ಶರಣರನ್ನು ಚಿ.ಮೂ ಎಳೆದು ತರುತ್ತಾರೆ. ಹೇಗಿದ್ದರೂ ನಮ್ಮ ಜನ ಮೂಲ ಸಾಹಿತ್ಯ ಓದುವುದಿಲ್ಲ ಎಂಬ ಅದಮ್ಯ ಧೈರ್ಯ ಚಿ.ಮೂ. ಅವರದು. ಬಸವಲಿಂಗ ಶರಣರ ಒಂದು ಪದ್ಯ ನೋಡೋಣ.

ಬದುಕಿದೆ ನಾಂ ಬದುಕಿದೆ । ಸತ್ಯ
ಸದಮಲ ಸಂಗನ ಬಸವನಂಘ್ರಿಯ ಕಂಡು ॥ ಪಲ್ಲವಿ ॥
<u>ಗುರು :</u> ಬಾಗಿ ಬಂದವರ ತನ್ನಂತೆ ಮಾಡುವ ಕರ್ತೃ
ಶ್ರೀ ಗುರು ಸಂಗನ ಬಸವನಂಘ್ರಿಯ ಕಂಡು ॥
<u>ಲಿಂಗ :</u> ಕಂಗಳಾಲಯದಿಷ್ಟಲಿಂಗಕ್ಕೆ ತನುವ ಸ
ರ್ವಂಗಯ್ವ ಸಂಗನ ಬಸವನಂಘ್ರಿಯ ಕಂಡು ॥
<u>ಮಂತ್ರ :</u> ಲಿಂಗಾಭಿದಾನ ಷಣ್‌ಮಂತ್ರವೇ ಚಿತ್ ಪ್ರಾಣ
ಲಿಂಗ ಶ್ರೀ ಸಂಗನ ಬಸವನಂಘ್ರಿಯ ಕಂಡು ॥

ಇಲ್ಲಿ ಮೈಲಾರ ಬಸವಲಿಂಗ ಶರಣರು ಶಿವ ಪದಕ್ಕಿಂತಲೂ ಲಿಂಗ ಪದಕ್ಕೆ ಒತ್ತುಕೊಟ್ಟಿರುವುದನ್ನು ಕಾಣಬಹುದು.

ಇನ್ನೊಂದು ಪ್ರಸಿದ್ಧ ಪದ್ಯವಿದೆ :

ಬಸವಲಿಂಗ ವೆಂಬೈದಕ್ಷರಗಳು ರಸನೆಯೊಳಿರಬೇಕು ॥
ಶಶಿಕಾಂತದೊಳಿಹ ರಸದ ತೆರದೊಳೀ ವಸುಧೆಯೊಳಿರಬೇಕು ॥
ಅರುಹಿನ ಕುರುಹಿಡಿದವನೀತಲಕವತರಿಸಿದ ಗಣಪಾಲ

ಬಸವಲಿಂಗ ಶರಣರು ಬರೆದ ಗುರುಕರುಣತ್ರಿವಿಧಿ ಲಿಂಗಾಯತ ಧರ್ಮದ ಅಪ್ರತಿಮ ಕೃತಿ. ಬಸವಲಿಂಗ ಶರಣರು ಅಪ್ಪಟ ಶರಣ ಮಾರ್ಗಿಗಳು. ಒಂದು ವೇಳೆ ಅವರು ಚಿ.ಮೂ. ಹೇಳುವಂತೆ ಜನಿವಾರ ಧರಿಸಿದ ಶಿವನ ಪೂಜಕರಾಗಿ ಏನಾದರೂ ಬರೆದಿದ್ದರೆ ಅದು ಅವರ ದೀಕ್ಷಾ ಪೂರ್ವದ ಬರಹವೇ ವಿನಾ ದೀಕ್ಷಾ ನಂತರದ್ದಲ್ಲ. ಆದ್ದರಿಂದ ಒಳ್ಳೆಯ ಸುಖಿ ದಾಂಪತ್ಯ ಉಳ್ಳ ಪತಿ ಪತ್ನಿಯರ ಮಧ್ಯೆ

ಸಂದೇಹ ಬಿತ್ತುವ ಕ್ಷುಲ್ಲಕ (ರಾಮಾಯಣದ ಅಗಸ) ಪಿಸುಣರಂತೆ, ಚಿ.ಮೂ ಏಕಲಿಂಗನಿಷ್ಠರಾದ ಬಸವಲಿಂಗ ಶರಣರಂಥವರ ಬಗ್ಗೆ ಸಂದೇಹ ಹುಟ್ಟಿಸುವ ಧೂರ್ತ ತಂತ್ರವನ್ನು ಮಾಡದಿರಲಿ.

''ತೆಲುಗು ಬಸವ ಪುರಾಣ ಕರ್ತೃ ಸೋಮನಾಥನ ಗುರು ವೇದ ಪ್ರವೀಣ'' ಎನ್ನುತ್ತಾರೆ ಈ ಕ್ಯಾತೇ (ಖ್ಯಾತ) ಸಂಶೋಧಕರು. ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಪಾಲ್ಕುರಿಕೆ ಸೋಮನಾಥನ ಗುರು. ಅವರು ಜನ್ಮತಃ ಆರಾಧ್ಯ ಬ್ರಾಹ್ಮಣರು. ಅವರು ವೇದ ಪಾರಂಗತರಾಗಿರುವುದೇ ಅವರ ಧರ್ಮ. ಚಿ.ಮೂ ಅವರ ಉಲ್ಲೇಖ ಹೇಗಿದೆಯೆಂದರೆ, ''ಇಂಗ್ಲೆಂಡಿನವರು ಬೆಳ್ಳಗಿದ್ದಾರಂತೆ, ಆಫ್ರಿಕಾದ ನೀಗ್ರೋಗಳು ಕಪ್ಪಗಿದ್ದಾರಂತೆ'' ಎಂದಂತೆ. ಇಂಗ್ಲೆಂಡಿನವರು ಬೆಳ್ಳಗಿರುವುದೇ ಸಹಜ ಧರ್ಮ, ನಿಗ್ರೋ ಕಪ್ಪಗಿರುವುದೇ ಸಹಜ ಧರ್ಮ. ಒಂದು ವೇಳೆ ನೀಗ್ರೋ ಕೆಂಚಗಿದ್ದರೆ ಆತನ ಹುಟ್ಟು ಆಂಗ್ಲ ತಾಯಿಯಿಂದಲೋ ತಂದೆಯಿಂದಲೋ ಆಗಿದೆ ಎಂದು ಪುನಃ ತಲೆ ಕೆಡಿಸಿಕೊಂಡು ವಿಚಾರ ಮಾಡಬೇಕಾಗುತ್ತದೆ.

ನೋಡಿ : ಶಿವಶರಣ ಕಥಾರತ್ನಕೋಶ. ಪುಟ 233. ಸಂ. ತ.ಸು.ಶ್ಯಾಮರಾಯ.''

ಪಂಡಿತಾರಾಧ್ಯ ಶ್ರೀಶೈಲ ಸಿಂಹಾಸನದ ಸ್ಥಾಪಕನಾಗಿ, ಪಂಚ ಪೀಠಾಧಿಪತಿಗಳಲ್ಲಿ ಓರ್ವನಾದ ಮಹಾಪುರುಷ ಈತ ಮದ್ರಾಸ್ ದೇಶದ ಕಾಕಿನಾಡು ಜಿಲ್ಲೆಯಲ್ಲಿರುವ ದ್ರಾಕ್ಷಾರಾಮ್‌ಪುರದಲ್ಲಿ (ಇದಕ್ಕೆ ವರಾಳಪುರ ಎಂಬ ಹೆಸರೂ ಇದೆ.) ಭೀಮೇಶ್ವರ ಲಿಂಗದ ಪರಮಭಕ್ತರಾದ ಭೀಮನ ಪಂಡಿತ-ಗೌರಾಂಬಿಕೆ ಎಂಬ ಬ್ರಾಹ್ಮಣ ದಂಪತಿಗಳಿಗೆ ಮನೆದೇವರಾದ ಶ್ರೀಶೈಲ ಮಲ್ಲಿಕಾರ್ಜುನನ ವರದಿಂದ ಉದಿಸಿದ''. ಇಂಥ ಬ್ರಾಹ್ಮಣ ಕುಲ ಸಂಜಾತ ವೇದಾಗಮಗಳಲ್ಲಿ ಪಾರಂಗತನಾದುದು ಆಶ್ಚರ್ಯಕರ ಸಂಗತಿ ಏನಲ್ಲ ಎಂಬುದನ್ನು ಚಿ.ಮೂ. ಅರಿಯಬೇಕು. ''ಚಿತ್ರದುರ್ಗದ ಮುರಿಘಾಮಠದ ಸ್ಥಾಪಕರಾದ ಶಾಂತ ವೀರಾರಾಧ್ಯರು (1680) ವೇದ ವೇದಾಂತ ಆಗಮೋಪನಿಷತ್ ಪುರಾಣೋಕ್ತ ಶ್ರೀಮದ್ ವೀರಶೈವಾಚಾರ ಸಂಪನ್ನರು'' ಎಂಬ ಅಭಿಪ್ರಾಯವು ಅಂದಿನ ಎಲ್ಲ ವೀರಶೈವ ಪ್ರಾಜ್ಞರ ಅಭಿಪ್ರಾಯವೇ ಆಗಿದೆ. ವೀರಶೈವ ವಿದ್ವಾಂಸರು ವೇದಗಳಿಗೆ ಆಗಮಗಳಿಗೆ ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆದರು.'' ಎನ್ನುತ್ತಾರೆ. ಚಿ.ಮೂ ಅವರ ಕಷ್ಟನೋಡಿದರೆ ಅಯ್ಯೋ ಎನಿಸುತ್ತಿದೆ. ಪ್ರಯಾಸಪಟ್ಟು ಬೆಟ್ಟ ಅಗೆದು ವಜ್ರವನ್ನೋ, ಬಂಗಾರದ ಅದಿರನ್ನೋ ತೆಗೆಯುವ ಬದಲು ಚಿ.ಮೂ. ಇಲಿಗಳನ್ನು ತೆಗೆಯುತ್ತಿದ್ದಾರೆ. ಅದೂ ಸತ್ತ ಇಲಿಗಳನ್ನು. ಅವು ಹೊರಬಂದು ವೀರಶೈವರಲ್ಲಿ ದುರ್ನಾತ ಎಬ್ಬಿಸುತ್ತಿರುವುದೇ ಅಲ್ಲದೆ, ಚಿ.ಮೂ. ಅವರ ಅಪಕ್ವ ಸಂಶೋಧನೆಯನ್ನು ನಗ್ನಗೊಳಿಸುತ್ತಿವೆ. ''ಮುರುಘಾ'' ಎನ್ನುವ ಪದವೇ ಈ ಮಠದ ಮೂಲ ಪುರುಷರು ತಮಿಳುನಾಡಿನಿಂದ ಬಂದ ಶೈವರು ಎಂಬುದಕ್ಕೆ ಕನ್ನಡಿ ಹಿಡಿಯುತ್ತಿದೆ. ಬಸವ ತತ್ವಕ್ಕೆ ತೀರಾ ಇತ್ತೀಚೆಗೆ ಲಿಂ|| ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಕಡೆಯ ದಿನಗಳಲ್ಲಿ ಬಂದುದು. ಶ್ರೀ ಗುರು ಬಸವಲಿಂಗಾಯ ನಮಃ ಮಂತ್ರ, ಧರ್ಮಪಿತ ಬಸವಣ್ಣನವರ ಭಾವಚಿತ್ರ ಬಹಳ ತಡವಾಗಿ ಮುರುಘಾಮಠವನ್ನು ಪ್ರವೇಶ ಮಾಡಿದುದನ್ನು ಬಹಳ ಜನ ಬಲ್ಲರು. ಈಗಿನ ಸ್ವಾಮಿಗಳ ಕಾಲಕ್ಕೆ ಬಸವ ಪದದ ಭೇರಿ ಸ್ವಲ್ಪ ಜಾಸ್ತಿ ಮೊಳಗುತ್ತಿದೆ ಅಷ್ಟೆ. ಇಷ್ಟೇ ಅಲ್ಲ ಈ ಮಠದ ಅಧಿಕಾರಿಗಳ ಹೆಸರುಗಳನ್ನು ಗಮನಿಸಿದಾಗಲೂ ಬಸವಾದಿ ಪ್ರಮಥರ ಮೇಲಿನ ಅಭಿಮಾನ ಎಷ್ಟಿದೆ ಎಂಬುದು ತಿಳಿಯದೆ ಇರದು.

(ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಮಹಾಮಠದ ಮುರುಘಾಸಮಯಪಟ್ಟವಲ್ಲರಿ)

1. ಶ್ರೀ ಮುರುಘಾ ಶಾಂತವೀರೇಶ್ವರ ಸ್ವಾಮಿಗಳು (ಚಿತ್ರದುರ್ಗ) (1640-1703)
2. ಶ್ರೀ ಇಮ್ಮಡಿ ಮುರುಘಾ ಗುರುಸಿದ್ಧಸ್ವಾಮಿಗಳು (ಆನಂದಪುರ) (1703-29)

3. ಶ್ರೀ ಸ್ವಾದಿ ಚನ್ನಬಸವ ಸ್ವಾಮಿಗಳು (ಹಿರೇಮಾಗಡಿ) (1729-30)
4. ಶ್ರೀ ಶಿರಹಟ್ಟಿ ಸಿದ್ಧಲಿಂಗ ಸ್ವಾಮಿಗಳು (ಚಂಗಡಹಳ್ಳಿ) (1730-57)
5. ಶ್ರೀ ಗುರುಪಾದಸ್ವಾಮಿಗಳು (ಗುರುಮಠಕಲ್ಲು) (1759-60)
6. ಶ್ರೀ ಮೂರುಸಾವಿರ ಸಣ್ಣ ಗುರುಪಾದಸ್ವಾಮಿಗಳು (ಚಿತ್ರದುರ್ಗ) (1760-79)
7. ಶ್ರೀ ಮೂರು ಸಾವಿರದ ಸಿದ್ಧಲಿಂಗಸ್ವಾಮಿಗಳು (ಹಿರೇಮಾಗಡಿ) (1779-90)
8. ಶ್ರೀ ಒಪ್ಪತ್ತಿನ ಚನ್ನವೀರಸ್ವಾಮಿಗಳು (ತಿಳವಳ್ಳಿ) (1790)
9. ಶ್ರೀ ವ್ಯಾಕರಣದ ಸಿದ್ಧಲಿಂಗಸ್ವಾಮಿಗಳು (ಹಿರೇಮಾಗಡಿ) (1790-1800)
10. ಶ್ರೀ ನೈಘಂಟಿನ ಸಿದ್ಧಬಸವಸ್ವಾಮಿಗಳು (ಹಾವೇರಿ) (1800-30)
11. ಶ್ರೀ ಸಣ್ಣ ಬರಹದ ರಾಚವಟ್ಟಿಸ್ವಾಮಿಗಳು (ಚಿತ್ರದುರ್ಗ) (1820-30)
12. ಶ್ರೀ ಸಾವಳಿಗೆ ಗುರುಶಾಂತಸ್ವಾಮಿಗಳು (ಚಿತ್ರದುರ್ಗ) (1835-40)
13. ಶ್ರೀ ಸಣ್ಣಪಾದದ ಚನ್ನವೀರಸ್ವಾಮಿಗಳು (ಚಿತ್ರದುರ್ಗ) (1840-54)
14. ಶ್ರೀ ಮಹಾಲಿಂಗ ಸ್ವಾಮಿಗಳು (ಶಿರಸಂಗಿ) (1854-70)
15. ಶ್ರೀ ಹೆಬ್ಬಾಳು ರುದ್ರಸ್ವಾಮಿಗಳು (ಚಿತ್ರದುರ್ಗ) (1870-81)
16. ಶ್ರೀ ಮುಪ್ಪಿನೇಂದ್ರಸ್ವಾಮಿಗಳು (ಬ್ಯಾಡಗಿ) (1881-1902)
17. ಶ್ರೀ ಜಯದೇವ ಸ್ವಾಮಿಗಳು (ದಾವಣಗೆರೆ) (1903-49/56)
18. ಶ್ರೀ ಜಯವಿಭವ ಸ್ವಾಮಿಗಳು (ಚಿತ್ರದುರ್ಗ) (1949-64)
19. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು (ಹೊಳಲ್ಕೆರೆ) (1964-91/94)
20. ಶ್ರೀ ಶಿವಮೂರ್ತಿ ಸ್ವಾಮಿಗಳು (1991)

(ನನ್ನ ಒಂದು ಅನುಭವವನ್ನು ಇಲ್ಲಿ ಹಂಚಿಕೊಳ್ಳುವುದು ಬಹಳ ಸ್ವಾರಸ್ಯಕರವೆನಿಸೀತು. ಅಧ್ಯಾತ್ಮ ರಂಗದಲ್ಲಿ ನನಗೆ ಆಸಕ್ತಿ ಇದ್ದುದು ನಿಜವಾದರೂ ನನ್ನ ಆಸಕ್ತಿ ವೇದಾಂತದ ಕಡೆಗೆ ಇತ್ತು. ಪೂಜ್ಯ ಅಪ್ಪಾಜಿಯವರ ಒಂದು ಭಾಷಣ, ''ಅನುಭವ ಮಂಟಪ'' ಕುರಿತು ಕೇಳಿರದಿದ್ದರೆ ನನ್ನ ಜೀವನದ ದಿಕ್ಕು ಬೇರೆಯಾಗುತ್ತಿತ್ತು. ಬಿಎಸ್‌ಸಿ ಮುಗಿದ ತಕ್ಷಣ ಮನೆ ಬಿಟ್ಟು ಬಂದೆ. ಹೇಗಿದ್ದರೂ ನಾನು ವೈರಾಗ್ಯ ಜೀವನ ಸ್ವೀಕರಿಸುವುದು ದೃಢವಾಗಿದ್ದುದರಿಂದ ದೀಕ್ಷಾನಂತರ ನನ್ನ ಹೆಸರನ್ನು ಬದಲಿಸಲು ಇಷ್ಟಪಟ್ಟು ಹೆಸರನ್ನು ಆಯ್ದುಕೊಳ್ಳುವ ಅವಕಾಶವನ್ನು ಅಪ್ಪಾಜಿ ನೀಡದರು. ನಾನು ಇಷ್ಟಪಟ್ಟ ಹೆಸರು ಯಾವುದು ಗೊತ್ತೆ ? ಲಲ್ಲೇಶ್ವರಿ. ಈಕೆ ಕಾಶ್ಮೀರದ ಓರ್ವ ಸಂತಳು. ಆಗ ಪೂಜ್ಯ ಅಪ್ಪಾಜಿ ವಿಷಾದದಿಂದ ನುಡಿದರು, ''ನಮ್ಮ ಸಮಾಜದ ಪರಿಸ್ಥಿತಿ ಹೇಗಿದೆ ನೋಡಿರಿ. ನಿಮಗೆ ಅಕ್ಕಮಹಾದೇವಿಗಿಂತಲೂ ಕಾಶ್ಮೀರದ ಲಲ್ಲೇಶ್ವರಿ ಬಗ್ಗೆಯೇ ಹೆಚ್ಚಿನ ತಿಳುವಳಿಕೆ ಮತ್ತು ಅಭಿಮಾನ. ಇದರಿಂದ ನನಗೆ ದುಃಖವೆನಿಸುತ್ತಿದೆ. ಕಾಶ್ಮೀರದ ಲಲ್ಲೇಶ್ವರಿ, ಉತ್ತರದ ಮೀರಾಬಾಯಿ, ತಮಿಳುನಾಡಿನ ಆಂಡಾಳ್ ಇವರೆಲ್ಲರಿಗಿಂತ ಅಕ್ಕಮಹಾದೇವಿ ಜೀವನ ಹಾಗೂ ಸಂದೇಶ ಹಿರಿದು. ಅಕ್ಕ ನನ್ನ ಮೆಚ್ಚಿನ ತಾಯಿ. ನಿಮಗೆ ಮಹಾದೇವಿ ಎಂದೇ ಹೆಸರಿಡುತ್ತೇನೆ.'' ಎಂದರು.

ನಾನು ಅಜ್ಞಾನದಿಂದ ಹಾಗೆ ಆಯ್ಕೆ ಮಾಡಿಕೊಂಡರೂ ಗುರುಗಳಿಗೆ ಎದುರಾಡದೆ ಅದೇ ಹೆಸರನ್ನು ಸ್ವೀಕರಿಸಿದೆ. ನಂತರ ಅಕ್ಕಮಹಾದೇವಿಯ ವಚನಗಳನ್ನು ಅಭ್ಯಸಿಸಿದೆ. ಪೂಜ್ಯರು ಬರೆದ ಅಕ್ಕನ ಪ್ರವಚನ ಪಡೆದು ಓದಿದೆ. ಆಗ ಅಕ್ಕಮಹಾದೇವಿಯ ವ್ಯಕ್ತಿತ್ವದ ಆಳ-ಹರಹು ತಿಳಿಯಿತು. ಪೂಜ್ಯ ಅಪ್ಪಾಜಿಯವರಿಗೆ ಶರಣರ ಮೇಲಿನ ಅಭಿಮಾನ ಎಷ್ಟೆಂಬುದು ಇದರಿಂದ ಗೋಚರವಾಗುತ್ತದೆ. ಹೆಸರುಗಳನ್ನು ಇಡುವ ಮೂಲಕ ಸಂಸ್ಕೃತಿ ಮತ್ತು ಪರಂಪರೆ ಉಳಿಸಲು ಸಾಧ್ಯ ಎಂಬುದನ್ನು ಅವರು ಒತ್ತಿ

ಒತ್ತಿ ಹೇಳುತ್ತಿದ್ದರು.)

ಈ ಹಿನ್ನೆಲೆಯಲ್ಲಿ ಚಿತ್ರದುರ್ಗದ ಮುರುಘಾ ಮಠದ ಸಂಸ್ಥಾಪಕರಾದ ಶಾಂತವೀರಾರಾಧ್ಯರು ವೇದ ವೇದಾಂತ ಆಗಮೋಪನಿಷತ್ ಪುರಾಣೋಕ್ತ ಶ್ರೀಮದ್ ವೀರಶೈವಾಚಾರ ರತ್ನರಾಗಿದ್ದರೆ ಅದರಲ್ಲಿ ವಿಶೇಷವೇನಿದೆ ? ವೀರಶೈವ ಪಂಥವು ವೇದ ಆಗಮಗಳ ಪಾಲಕ ಮಾರ್ಗವಾಗಿದೆ. ಯಾವುದೋ ಕಾಲದಲ್ಲಿ ಆ ಶೈವ-ವೀರಶೈವ ಪಥದಿಂದ ದೂರ ಸರಿದು ಲಿಂಗಾಯತ ಧರ್ಮದ ಬಸವ ಪಥಕ್ಕೆ ಮುರುಘಾಮಠ ಬಂದುದು ಅಭಿನಂದನಾರ್ಹ. ಅದರಂತೆ ವಚನ ವಾಙ್ಮಯವು ನಿರ್ದೇಶಿಸಿದಂತೆ ಮುರುಘಾಮಠ ಮಾತ್ರವಲ್ಲ ಎಲ್ಲ ಇಷ್ಟಲಿಂಗಧಾರಿ ಸ್ವಾಮಿಗಳ ಮಠಗಳೂ-ವಿರಕ್ತ ಮತ್ತು ಗುರುವರ್ಗದ ಎಲ್ಲ ಮಠಗಳೂ, ಬಸವಣ್ಣನವರನ್ನು ಧರ್ಮಗುರುವೆಂದು, ವಚನ ಸಾಹಿತ್ಯವನ್ನು ಧರ್ಮ ಸಂಹಿತೆ ಎಂದು ನಂಬಿ ನಡೆಯಬೇಕಾದುದೇ ಧರ್ಮ ಸಮ್ಮತ. ಆದ್ದರಿಂದ ಚಿ.ಮೂ. ಅಂತಹ ಖ್ಯಾತೇ ಸಾಹಿತಿಗಳು ಸರಿದಾರಿಯಲ್ಲಿ ನಡೆಯುವ ಮಠಾಧಿಕಾರಿಗಳನ್ನು, ಭಕ್ತರನ್ನು ತಪ್ಪು ದಾರಿಗೆ ಎಳೆಯಲು ಪ್ರಯತ್ನಿಸುವ ಕುತಂತ್ರವನ್ನು ಕೈ ಬಿಡುವುದು ಒಳ್ಳೆಯದು. -ಮುಂದುವರಿಯುವುದು.

ಭಾರತದ ಜನಗಣತಿ-2001

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥



೮ ೬ ೬ ೬ ೬
ಅಷ್ಟಾವರಣ ಷಡಾಚಾರ ಷಟ್‌ಸ್ಥಲ ಷಟ್‌ಸೂತ್ರ ಷಟ್‌ಶೀಲ



೨೦೦೧ನೆಯ ಇಸವಿಯಲ್ಲಿ ನಡೆಯುವ

ಜನಗಣತಿಯಲ್ಲಿ "ಲಿಂಗಾಯತ" ಎಂದು ಬರೆಸಿರಿ

ಲಿಂಗಾಯತ ಧರ್ಮ ಬಂಧುಗಳೇ,

ಭಾರತ ಸರಕಾರವು ಹತ್ತು ವರ್ಷಗಳಿಗೊಮ್ಮೆ ಜನಗಣತಿಯನ್ನು ಮಾಡುತ್ತಿದ್ದು, ೨೦೦೧ನೆಯ ಇಸವಿಯ ಫೆಬ್ರವರಿಯಲ್ಲಿ ಮುಂದಿನ ಜನಗಣತಿಯು ನಡೆಯಲಿದೆ. ಇಷ್ಟಲಿಂಗಧಾರಣೆಯೇ ಪ್ರಮುಖ ಅಂಶವಾದ ಲಿಂಗಾಯತವು ಹಿಂದು ಧರ್ಮದ ಒಂದು ಅಂಗವಾಗದೆ ಒಂದು ಸ್ವತಂತ್ರ, ಸ್ವಾವಲಂಬಿ ಧರ್ಮವಾಗಿದೆ. ಆದ್ದರಿಂದ ಜನಗಣತಿ ಮಾಡಲು ಗಣತಿಕಾರರು (Enumerators) ಬಂದಾಗ ಪರಿಪತ್ರದ ೮ನೇ ಅಂಶ ಧರ್ಮ (Religion)ಎಂದು ಇರುವಲ್ಲಿ ಲಿಂಗಾಯತ (Lingayat-L) ಎಂದು ಬರೆಸಿರಿ. 'ಹಿಂದು ಲಿಂಗಾಯತ' ಎಂದಾಗಲೀ, ವೀರಶೈವ ಎಂದಾಗಲೀ, ವೀರಶೈವ ಲಿಂಗಾಯತ ಎಂದಾಗಲೀ, ಇನ್ನಿತರ ಒಳಪಂಗಡಗಳನ್ನಾಗಲೀ ಬರೆಸದೆ ಕೇವಲ 'ಲಿಂಗಾಯತ' ಎಂದು ಮಾತ್ರ ಬರೆಸಿರಿ. ಹತ್ತು ವರ್ಷಕ್ಕೊಮ್ಮೆ ಬರುವ ಜನಗಣತಿಯ ಸದುಪಯೋಗ ಪಡೆದುಕೊಳ್ಳಿರಿ.

ವಿಶೇಷ ಸೂಚನೆ : ರಾಜ್ಯ ಸರಕಾರದ ಕೆಲವು ಸವಲತ್ತು ಪಡೆದುಕೊಳ್ಳಲು ನಿಮ್ಮ ಉಪಪಂಗಡದ ಹೆಸರುಗಳನ್ನು ಇನ್ನಿತರ ದಾಖಲೆಗಳಲ್ಲಿ ಈ ಮೊದಲು ಕಾಣಿಸಿದ್ದರೂ, ಭಾರತ ಸರಕಾರವು ಗೋಪ್ಯವನ್ನು ಕಾಪಾಡುವುದರಿಂದ ಜನಗಣತಿಯಲ್ಲಿ ಕೇವಲ ಧರ್ಮದ ಹೆಸರು-ಲಿಂಗಾಯತ ಮಾತ್ರ ಬರೆಸಿರಿ

ಶರಣ ಎನ್.ಪುಟ್ಟರುದ್ರ, ಅಧ್ಯಕ್ಷರು
ಲಿಂಗಾಯತ ಧರ್ಮ ಮಹಾಸಭಾ (ರಿ)
ಬಸವ ಮಂಟಪ, 2035
20ನೇ ಮೇನ್, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 3325335/ 3322790

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠಾಧ್ಯಕ್ಷೆ
ಮಹಾಮನೆ ಮಹಾಮಠ, ಶರಣಲೋಕ
ಕೂಡಲಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ

ಓಂ ಲಿಂಗಾಯ ನಮಃ
ಓಂ ಶ್ರೀ ಗುರು ಬಸವಲಿಂಗಾಯ ನಮಃ

ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ; ಹೇಗೆ ?

ಕೂಡಲ ಸಂಗಮದ ಬಸವ ಧರ್ಮ ಪೀಠದ ಪರಮಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಚರಣಾರವಿಂದಗಳಲ್ಲಿ ರಾಜಮಣಿಯು ಭಕ್ತಿಪೂರ್ವಕವಾಗಿ ಮಾಡುವ ಶಿರಸಾಷ್ಟಾಂಗ ಶರಣು ಶರಣಾರ್ಥಿಗಳು.

ತಾವು ಲಿಂಗಾಯತ ಧರ್ಮದ ಪ್ರತ್ಯೇಕ ಅಸ್ತಿತ್ವವನ್ನು ಸಕಾರಣವಾಗಿ ಮತ್ತು ತಾತ್ವಿಕವಾಗಿ ಸ್ಪಷ್ಟಪಡಿಸಿ, ಅದು ಸ್ವತಂತ್ರ ಧರ್ಮವೆಂಬುದನ್ನು ಪ್ರತಿಪಾದಿಸಿದ್ದೀರಿ. ಇದು ಲಿಂಗಾಯತ ಧರ್ಮದ ಪ್ರಗತಪರವಾದ ಇತಿಹಾಸದಲ್ಲಿ ಒಂದು ಮೈಲಿಗಲ್ಲು.

ಹಿಂದು ಎಂಬ ಶಬ್ದ ಸಿಂಧೂ ಎಂಬ ಶಬ್ದದಿಂದ ಬಂದಿದೆ. ಪರ್ಷಿಯನ್ನರು ಸಿಂಧೂ ನದಿಯ ಪಕ್ಕದಲ್ಲಿ ವಾಸಿಸುವವರನ್ನು ಹಿಂದುಗಳೆಂದು ಕರೆದರು. ಹಿಂದುಗಳ ಈ ದೇಶಕ್ಕೆ ಹಿಂದೂಸ್ಥಾನ ಎಂಬ ಹೆಸರು ಬಂದಿತು. ಈ ದೇಶದ ಸನಾತನ ಧರ್ಮಕ್ಕೆ ಹಿಂದು ಧರ್ಮವೆಂದು ಕರೆಯಲಾಯಿತು. ಆದರೆ ಈಗ ದೇಶದಲ್ಲಿ ರೂಢಿಯಲ್ಲಿರುವಂತೆ ವೇದ ಉಪನಿಷತ್ತುಗಳಲ್ಲಿ ನಿರೂಪಿತವಾಗಿರುವ ವೈದಿಕ ಧರ್ಮಕ್ಕೆ ಹಿಂದು ಧರ್ಮವೆಂದು ಬಳಸಲಾಯಿತು. ಈಗ ಲಿಂಗಾಯತವನ್ನು ಜಾತಿಯೆಂದು, ಲಿಂಗಾಯತರ ಧರ್ಮವನ್ನು ಹಿಂದು ಧರ್ಮವೆಂದು ಅಧಿಕೃತವಾಗಿ ವ್ಯವಹರಿಸಲಾಗುತ್ತಿದೆ !

ಹಿಂದು ಎಂಬ ಪದವನ್ನು ಹಲವು ಮತ ಧರ್ಮಗಳ ಸಮೂಹವೆಂದಾಗಲೀ, ಭಾರತವೆಂದಾಗಲಿ ಬಳಸಿದಾಗ ಮಾತ್ರ, ಲಿಂಗಾಯತ ಧರ್ಮವು ತನ್ನ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಂಡು ಹಿಂದು ಧರ್ಮದ ಕಕ್ಷೆಯೊಳಗೆ ಬರುತ್ತದೆ. ಹಿಂದು ಎಂಬ ಪದವನ್ನು ಧರ್ಮವಾಚಕವಾಗಿ ಬಳಸಿದಾಗ ಲಿಂಗಾಯತರು ಹಿಂದು ಧರ್ಮದ ವ್ಯಾಪ್ತಿಗೆ ಬರುವುದಿಲ್ಲ. ಆದುದರಿಂದ ಲಿಂಗಾಯತವು ಹಿಂದು ಧರ್ಮದೊಳಗೆ ಬರುವ ಒಂದು ಜಾತಿಯೂ ಅಲ್ಲ, ಉಪಜಾತಿಯೂ ಅಲ್ಲ, ಮತವೂ ಅಲ್ಲ, ಪಂಥವೂ ಅಲ್ಲ, ಪಂಗಡವೂ ಅಲ್ಲ ಕುಲವೂ ಅಲ್ಲ, ಗೋತ್ರವೂ ಅಲ್ಲ. ಈ ದೃಷ್ಟಿಯಲ್ಲಿ ಲಿಂಗಾಯತರು ಹಿಂದೂಗಳಲ್ಲ, ಹೀಗಾಗಿ ಲಿಂಗಾಯತರು, ಹಿಂದು-ಲಿಂಗಾಯತ, ಎಂದು ಹೇಳುವುದು, ಬರೆಸುವುದು, ವ್ಯವಹರಿಸುವುದು ಸರ್ವಥಾ ಸರಿಯಲ್ಲ.

ಲಿಂಗಾಯತ ಧರ್ಮವು ತನ್ನ ಕಾಲ ಮೇಲೆ ತಾನು ನಿಂತಿರುವ ಮಾನವೀಯ ಧರ್ಮವಾಗಿದೆ. ಅದು ತನ್ನದೇ ಆದ ಅಸ್ತಿತ್ವವನ್ನು ಪಡೆದಿರುವ ಪ್ರತ್ಯೇಕ ಧರ್ಮವಾಗಿದೆ. ಅಷ್ಟೇ ಅಲ್ಲ ಅದು ಸುವ್ಯವಸ್ಥಿತವಾದ ಮತ್ತು ವೈಜ್ಞಾನಿಕವಾದ ಅವೈದಿಕ ಧರ್ಮವೇ ಹೊರತು ಹಿಂದೂ ಧರ್ಮದ ಬಾಲಂಗೋಚಿಯಲ್ಲ. ಅದು ಒಂದು ಧರ್ಮಕ್ಕೆ ಇರಬೇಕಾದ ಎಲ್ಲ ಗುಣಲಕ್ಷಣಗಳನ್ನು ಹೊಂದಿ, ಪರಿಪೂರ್ಣ ಧರ್ಮವಾಗಿದ್ದರೂ ಅದನ್ನು ಬಲವಂತವಾಗಿ ಹಿಂದು ಧರ್ಮದೊಳಕ್ಕೆ ತುರುಕುವುದು ನ್ಯಾಯೋಚಿತವಲ್ಲ. ಅದು ಸಮನ್ವಯವಾದ ಮತ್ತು ಸಮಗ್ರವಾದ ಧರ್ಮವೆಂಬುದು ಸತ್ಯವಾಗಿದೆ. ಈ ಸತ್ಯವನ್ನು ಒಪ್ಪದಿದ್ದರೆ ಅದು ಸತ್ಯಕ್ಕೆ ಮಾಡಿದ ಸ್ಪಷ್ಟ ಅಪಚಾರವಾಗುತ್ತದೆ. ಆದುದರಿಂದ ಲಿಂಗಾಯತ ಧರ್ಮವು ಭಾರತದಲ್ಲಿಯೇ ಹುಟ್ಟಿದ ಜೈನ, ಬೌದ್ಧ, ಸಿಖ್ ಧರ್ಮಗಳಂತೆ ಒಂದು ಸ್ವತಂತ್ರ ಧರ್ಮವಾಗಿದೆ.

ಸ್ವತಂತ್ರವಾಗಿ ನಡೆಯಲಾರದ ಅಶಕ್ತನಿಗೆ ಊರುಗೋಲು ಕೊಡುವುದು ಸಹಜವಾಗುತ್ತದೆ. ಆದರೆ ಸ್ವತಂತ್ರವಾಗಿ ನಡೆಯಬಲ್ಲ ಶಕ್ತನಿಗೆ ಊರುಗೋಲು ಕೊಡುವುದು ಅಸಹಜ ಮತ್ತು

ಹಾಸ್ಯಾಸ್ಪದವಾಗುತ್ತದೆ. ಹಾಗೆಯೇ ಸ್ವತಂತ್ರವಾದ ಸರ್ವಶಕ್ತವಾದ ಲಿಂಗಾಯತ ಧರ್ಮವನ್ನು ಹಿಂದು ಧರ್ಮದ ವ್ಯಾಪ್ತಿಗೆ ಬಲವಂತವಾಗಿ ತಳ್ಳುವುದರಿಂದ ಕಾಲಿದ್ದು, ಸಶಕ್ತನಾದವನಿಗೆ ಊರುಗೋಲು ಕೊಟ್ಟಂತಾಗುತ್ತದೆ.

ಲಿಂಗಾಯತ ಧರ್ಮಕ್ಕೆ ತನ್ನದೇ ಆದ ಇತಿಹಾಸವಿದೆ, ಧರ್ಮ ಸ್ಥಾಪಕರಿದ್ದಾರೆ. ಧರ್ಮ ಸಂಹಿತೆ ಇದೆ, ಧರ್ಮಲಾಂಛನ, ಸಿದ್ಧಾಂತ, ಸಾಧನೆ, ದರ್ಶನ, ಸಂಸ್ಕಾರ, ಸಮಾಜಶಾಸ್ತ್ರ, ನೀತಿಶಾಸ್ತ್ರ ಅರ್ಥಶಾಸ್ತ್ರ, ಸಂಸ್ಕೃತಿ, ಪರಂಪರೆಗಳಿವೆ.

ಲಿಂಗಾಯತರಿಗೂ ಹಿಂದುಗಳಿಗೂ ಅನೇಕ ವ್ಯತ್ಯಾಸಗಳಿವೆ.

ಲಿಂಗಾಯತ ಧರ್ಮ	ಹಿಂದೂ ಧರ್ಮ
1. ಸ್ಥಾಪಕರು ಬಸವಣ್ಣನವರು	- ಸ್ಥಾಪಕರಿಲ್ಲ
2. ಸ್ವತಂತ್ರ ಅಸ್ತಿತ್ವವುಳ್ಳ ಧರ್ಮ	- ವಿವಿಧ ಜಾತಿ, ಮತ, ಪಂಥಗಳ ಸಮುಚ್ಚಯ
3. ಬ್ರಹ್ಮಾಂಡವನ್ನು ಗರ್ಭೀಕರಿಸಿಕೊಂಡ ಸೃಷ್ಟಿಕರ್ತನ ಕುರುಹಾದ ಇಷ್ಟಲಿಂಗವು ಉಪಾಸ್ಯವಸ್ತು	- ಅನೇಕ ದೈವಂಗಳು ದೇವ-ದೇವತೆಗಳು ಉಪಾಸ್ಯ ವಸ್ತುಗಳು
4. ಏಕದೇವೋಪಾಸನೆ	- ಬಹುದೇವತೋಪಾಸನೆ
5. ಇಷ್ಟಲಿಂಗದ ಉಪಾಸನೆ	- ಸ್ಥಾವರ ಮೂರ್ತಿಗಳ ಆರಾಧನೆ
6. ದೇವರು ಬ್ರಹ್ಮಾಂಡ ಮತ್ತು ತನ್ನ ಶರೀರದಲ್ಲಿ ಯಾವಾಗಲೂ ಇರುತ್ತಾನೆ.	- ದೇವತೆಗಳು ದೇವಸ್ಥಾನದಲ್ಲಿ ಇರುತ್ತವೆ.
7. ಗುರು ಮಂತ್ರ ಮತ್ತು ದೇವಮಂತ್ರ	- ವೇದ, ಶೃತಿ, ಸ್ಮೃತಿ ಗಾಯತ್ರಿ ಮಂತ್ರ ಮತ್ತು ಇನ್ನೂ ಹಲವಾರು
8. ಪ್ರಸಾದ ಸೇವನೆ	- ಭಕ್ಷ ಭೋಜ್ಯಗಳ ಊಟ
9. ತಾವೇ ತೀರ್ಥ ಪ್ರಸಾದಗಳನ್ನು ಮಾಡಿಕೊಳ್ಳುತ್ತಾರೆ.	- ಪೂಜಾರಿಗಳು ತೀರ್ಥ-ಪ್ರಸಾದ ಕೊಡುತ್ತಾರೆ.
10. ಪೂಜೆಯ ಮೂಲಕ ನೈವೇದ್ಯ ಅರ್ಪಿಸುವುದು	- ಅಗ್ನಿಯ ಮೂಲಕ ಹವಿಸ್ಸು (ಆಹಾರ) ಕೊಡುವುದು.
11. ಬಸವಾದಿ ಶರಣರ ವಚನ ಸಾಹಿತ್ಯ ಪ್ರಮಾಣವಾಗುತ್ತವೆ.	- ವೇದ ಉಪನಿಷತ್ತು ಭಗವದ್ಗೀತೆಗಳು ಪ್ರಮಾಣವಾಗುತ್ತವೆ.
12. ಮಂಗಳ ಕಾರ್ಯಗಳನ್ನು ಗಣಸಾಕ್ಷಿಯಾಗಿ ಆಚರಿಸುತ್ತದೆ.	- ಮಂಗಳ ಕಾರ್ಯಗಳನ್ನು ಅಗ್ನಿಸಾಕ್ಷಿಯಾಗಿ ಆಚರಿಸುತ್ತದೆ.
13. ದೇವರಿಗೆ ಒಂದು ಆಕಾರ ರೂಪ ಕೊಡುವುದಿಲ್ಲ	- ದೇವರಿಗೆ ಒಂದು ಭೌತಿಕ ರೂಪ ಕೊಡುತ್ತದೆ.
14. ಜೀವಂತವಾಗಿರುವಾಗ ಭಾವಲಿಂಗೈಕ್ಯರಾಗುವ ಸದವಕಾಶವಿದೆ. ಸತ್ತನಂತರ ದೇವನೊಡನೆ ಸಾಮರಸ್ಯ	- ಸತ್ತನಂತರ ಕೈಲಾಸ, ವೈಕುಂಠವಾಸಿಗಳಾಗುತ್ತಾರೆ, ಚತುರ್ವಿಧ ಪದವಿ ಪಡೆಯುವುದು ಗುರಿ

ಇಂಥ ಇನ್ನೂ ಹಲವಾರು ವ್ಯತ್ಯಾಸಗಳಿವೆ.

ಇಂದಿನ ಲಿಂಗಾಯತರಲ್ಲಿ ಹಿಂದು ಧರ್ಮದ ಆಚರಣೆಗಳಿವೆ. ಅವು ವೈದಿಕೀಕರಣಗೊಂಡವುಗಳೇ ವಿನಾ ಅವುಗಳಿಗೆ ಲಿಂಗಾಯತ ಧರ್ಮದ ಯಾವ ತಾತ್ವಿಕ ಹಿನ್ನೆಲೆ ಇಲ್ಲ.

ಹೀಗೆ ಮನುಷ್ಯನು ಹುಟ್ಟಿದಂದಿನಿಂದ ಹಿಡಿದು ಲಿಂಗೈಕ್ಯನಾಗುವವರೆಗೆ ನಡೆಯತಕ್ಕ ಧರ್ಮ

ಸಂಸ್ಕಾರಗಳು, ಆಚರಣೆಗಳು ವಿಧಿವಿಧಾನಗಳು, ಲಿಂಗಾಯತರಿಗೂ ಹಿಂದುಗಳಿಗೂ ಸಂಪೂರ್ಣವಾಗಿ ಮತ್ತು ಸ್ಪಷ್ಟವಾಗಿ ಬೇರೆ ಬೇರೆಯಾಗಿರುವುದರಿಂದ ಲಿಂಗಾಯತರು ಹಿಂದುಗಳಲ್ಲವೆಂಬುದು ಸ್ವತಃ ಸಿದ್ಧವಾಗುತ್ತದೆ. ಲಿಂಗಾಯತರಿಗೆ ಜಾತಿ, ಉಪಜಾತಿಗಳಿರುವುದಿಲ್ಲ ; ಅವನ್ನು ಒಪ್ಪಬಾರದು.

ಲಿಂಗಾಯತ ಧರ್ಮವು ತನ್ನದೇ ಆದ ತತ್ವಗಳನ್ನೊಳಗೊಂಡ, ರಾಜ್ಯ, ರಾಷ್ಟ್ರ ಹಾಗೂ ವಿಶ್ವಧರ್ಮವಾಗಿರಲು ತಕ್ಕುದಾದ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಸರ್ವಾಂಗ ಸುಂದರವಾದ ಸ್ವತಂತ್ರ ಧರ್ಮವಾಗಿದೆ. ಜನಗಣತಿಯಲ್ಲಿ ಹಿಂದು, ಜೈನ, ಬೌದ್ಧ, ಸಿಖ್, ಇಸ್ಲಾಂ, ಕ್ರೈಸ್ತ ಈ 6 ಧರ್ಮಗಳಂತೆ ಗಣತಿ ನಮೂನೆಯಲ್ಲಿ ಲಿಂಗಾಯತವನ್ನು ಸ್ವತಂತ್ರ ಧರ್ಮವೆಂದು ನಮೂದಿಸಬೇಕು. ಇದರಲ್ಲಿ ತಪ್ಪಿದಲ್ಲಿ ತಿದ್ದಬೇಕೆಂದು ತಮ್ಮನ್ನು ಪ್ರಾರ್ಥಿಸುತ್ತೇನೆ. ಇಂತೀ ಶರಣು ಶರಣಾರ್ಥಿಗಳು.

ಶರಣೆ. ರಾಜಮಣಿ ಮಲ್ಲಿಕಾರ್ಜುನಪ್ಪ
ಮತ್ತೀಪುರ, ಕೊಳ್ಳೆಗಾಲ ತಾಲೂಕು

ಅಭಿನಂದನೆ

ಶರಣೆ. ರಾಜಮಣಿಯವರು ಒಂದು ಚಿಕ್ಕ-ಚೊಕ್ಕ ಬರಹವನ್ನು ಕಳಿಸಿದ್ದಾರೆ. ಯಥಾರೂಪದಲ್ಲಿ ಮುದ್ರಿಸಲಾಗಿದೆ. ಒಂದು ಕುಗ್ರಾಮದಲ್ಲಿ ವಾಸವಾಗಿರುವ ಓರ್ವ ಸದ್ಗೃಹಿಣಿ ವಿಷಯವನ್ನು ಎಷ್ಟು ಚೆನ್ನಾಗಿ ಸ್ಫುಟವಾಗಿ ಮಠಾಧೀಶರು, ವಿದ್ಯಾವಂತ ಗಣ್ಯರು ಅರ್ಥ ಮಾಡಿಕೊಳ್ಳದ ವಿಷಯವನ್ನು ಅರ್ಥಮಾಡಿಕೊಂಡು ಪುನಃ ಅಷ್ಟೇ ಚೆನ್ನಾಗಿ ಬರೆದಿರುವುದು ನನಗೆ ಅತೀವ ಸಂತೋಷ ಮತ್ತು ಅಭಿಮಾನವನ್ನು ಉಂಟುಮಾಡಿದೆ. -ಮಾತಾಜಿ

ವೇಷಧಾರಿಗಳು

ವಚನವ ನುಡಿದು ವಂಚಿಸುವರಯ್ಯ, ಕಾವಿಯ ಧರಿಸಿ ಕಟುಕರಾಗಿಹರಯ್ಯ
ರುದ್ರಾಕ್ಷಿ ಧರಿಸಿ ರುದ್ರತಾಂಡವ ಮಾಡುವರಯ್ಯ
ಧರ್ಮವ ತಿಳಿಸಿ ದಯೆಯ ಮರೆತಿಹರಯ್ಯ
ಲಾಂಛನ ಧರಿಸಿ ಕಾಂಚನ ಹಿಡಿದಿಹರಯ್ಯ
ಇವರಂತ್ಯವ ನೀನೆ ಬಲ್ಲೆಯಯ್ಯಾ, ನಿತ್ಯ ನಿರಂಜನ ಪ್ರಭುವೆ
- ಚನ್ನಬಸವರಾಜ ಸ್ವಾಮೀಜಿ

ಸೆಪ್ಟಂಬರ್-ಅಕ್ಟೋಬರ್ ತಿಂಗಳಲ್ಲಿ ಬರುವ

ಶರಣ ಧರ್ಮದ ಹಬ್ಬ-ಹುಣ್ಣಿಮೆ-ಉತ್ಸವಗಳು

ಸೆಪ್ಟಂಬರ್ ಗಣೇಶ ಚೌತಿ	1 :	★ ಲಿಂ॥ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 69ನೆಯ ಜಯಂತಿ.
		★ ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ
		★ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ 43ನೆಯ ವರ್ಧಂತಿ
ಅಕ್ಟೋಬರ್	2 :	ಮಹಾತ್ಮಾ ಗಾಂಧಿ ಜಯಂತಿ
ಅಕ್ಟೋಬರ್	8 :	ಅಕ್ಕನಾಗಲಾಂಬಿಕಾ ಸಂಸ್ಮರಣ
		ವಿಜಯದಶಮಿ : ಬಸವ ಧರ್ಮ ವಿಜಯೋತ್ಸವ
ಅಕ್ಟೋಬರ್	28 :	ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಜಯಂತಿ

ಬಸವ ಭಕ್ತರ ನವರಾತ್ರಿ ಆಚರಣೆ

ಲಿಂಗಾಯತ ಧರ್ಮಾನುಯಾಯಿಗಳು ಯಾವುದೇ ಹಬ್ಬವನ್ನು ತಾತ್ತ್ವಿಕವಾಗಿ, ವೈಚಾರಿಕವಾಗಿ, ಭಾಕ್ತಿಕವಾಗಿ ಆಚರಿಸಬೇಕು. ಆಡಂಬರ, ವೈಭವ, ಮೂಢ ನಂಬಿಕೆಗಳಿಂದ ಹೊರತಾಗಿ ಹಬ್ಬವನ್ನು ಆಚರಿಸಬೇಕು. ಆಶ್ವಯುಜ ಮಾಸದ ಅಮವಾಸ್ಯೆಯು ದಿ.27-9-2000ದಂದು ಬರುತ್ತಿದ್ದು, ಪ್ರತಿಪದೆ ದಿ. 28-9-2000ದಂದು ಪ್ರಾರಂಭವಾಗುತ್ತದೆ. ವಿಜಯ ದಶಮಿಯು ಅಕ್ಟೋಬರ್ 8ರಂದು ಒದಗಿ ಬಂದಿದೆ. ಸಾಂಪ್ರದಾಯಿಕವಾಗಿ ಈ ದಿನಗಳನ್ನು ನವರಾತ್ರಿ ಎಂದು ಆಚರಿಸಲಾಗುವುದು. ದೇವಿಗೆ ಸಂಬಂಧಿಸಿದ ಹಬ್ಬವನ್ನಾಗಿ ಹಿಂದುಗಳು ಆಚರಿಸುವರು. ದೇವಿಯ ಸಂಕೇತವಾಗಿ ಘಟ್ಟ ಕೂಡ್ರಿಸುವುದು ಎಂದು ಕೆಲವರು, ಮತ್ತೆ ಕೆಲವರು ದೇವಿ ಪುರಾಣ ಪಾರಾಯಣ ಮಾಡುವರು. ಈ ಯಾವ ಪದ್ಧತಿಯೂ ಬಸವ ಪಥಿಕರಿಗೆ ಮಾನ್ಯವಲ್ಲ. ಏಕಲಿಂಗ ನಿಷ್ಠಾಪರರಾದ ಶರಣರು ತ್ರಿತತ್ತ್ವ (Trinity)ಗಳಾದ ಗುರು-ಲಿಂಗ-ಜಂಗಮದ ಆರಾಧನೆಯ ಹೊರತು ಬೇರಾವ ಕಾಲ್ಪನಿಕ ದೇವತೆಗಳನ್ನು ಪೂಜಿಸಬಾರದು.

ಸಾಂಪ್ರದಾಯಿಕವಾಗಿ ನವರಾತ್ರಿಯನ್ನು ಆಚರಿಸಿಕೊಂಡು ಬಂದ ಜನರು ಪರ್ಯಾಯವಾಗಿ ಹೀಗೆ ಪೂಜೆಯನ್ನು ಮಾಡಬೇಕು.

1. ಪ್ರತಿಪದೆಯ ದಿವಸ ಒಂದು ಮಂಟಪ ಮಾಡಿ ಧರ್ಮಪಿತ ಬಸವಣ್ಣನವರ ಭಾವಚಿತ್ರವನ್ನು ಪ್ರತಿಷ್ಠಾಪಿಸಬೇಕು.
2. ಪ್ರತಿಪದೆಯಂದು ಮತ್ತು ವಿಜಯದಶಮಿಯಂದು ಇಷ್ಟಲಿಂಗಧಾರಣೆಯ ನಂತರ ಪೂರ್ತಿ ಬಸವೇಶ್ವರ ಪೂಜಾವ್ರತ ಮಾಡಬೇಕು.
3. ಲಿಂಗಾಯತೇತರ ಬಸವ ಭಕ್ತರು ಇಷ್ಟಲಿಂಗಧಾರಣೆ ಇಲ್ಲದಿರುವುದರಿಂದ ಬಸವೇಶ್ವರ ಪೂಜಾವ್ರತ ಮಾಡಬೇಕು.
4. ಉಳಿದ ದಿನ 108 ಬಸವ ಮಂತ್ರ ಹೇಳಿ ಪುಷ್ಪಾರ್ಚನೆ ಮಾಡಬೇಕು.
5. ಧರ್ಮಪಿತ ಬಸವಣ್ಣನವರ ವಚನಗಳ ಸಂಗ್ರಹವಾದ ಬಸವ ವಚನ ದೀಪ್ತಿ, ಬಸವ ದರ್ಶನ ಕೃತಿಗಳನ್ನು ಎರಡೂ ಹೊತ್ತು ಓದಬೇಕು.
6. ಚಿಕ್ಕ ಚಿಕ್ಕ ಕಾಗದದ ತುಂಡುಗಳನ್ನು ಮಾಡಿ ಅದರಲ್ಲಿ ವಚನಗಳನ್ನು 9 ದಿವಸಗಳಕಾಲ ಬರೆಯಬೇಕು. ವಚನದ ಕೆಳಗೆ ಕೊಡುಗೆ ಎಂದು ಬರೆದು, ನಿಮ್ಮ ಹೆಸರು ಬರೆದಿರಬೇಕು.
7. ವಿಜಯ ದಶಮಿಯ ದಿನ ಬಸವಣ್ಣನವರ ಭಾವಚಿತ್ರಕ್ಕೆ ವಚನಗಳನ್ನು ಬರೆದಿಟ್ಟ ಹಾಳೆಗಳನ್ನೇ ಪುಷ್ಪದೊಡನೆ ಏರಿಸಿ, ನಂತರ ಸಂಗ್ರಹಿಸಿ ಇಟ್ಟುಕೊಂಡು, ಬನ್ನಿ ಕೊಡುವುದರ ಬದಲಿಗೆ (ಅಥವಾ ಬನ್ನಿಯ ಜೊತೆಗೆ) ಆ ವಚನಗಳನ್ನು ನೆನಪಿನ ಕೊಡುಗೆಯಾಗಿ ಕೊಡಬೇಕು.
8. ವಿಜಯ ದಶಮಿಯ ದಿನ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಗಳಾಗಿ, ಅಲ್ಲಿಯೂ ಶರಣ ಬಂಧುಗಳಿಗೆ ವಚನಗಳನ್ನು ವಿತರಿಸಿ, ಸಂಜೆ ತಮ್ಮ ಗುರು-ಹಿರಿಯರು, ಬಂಧು-ಬಳಗ-ಮಿತ್ರರನ್ನು ಸಂದರ್ಶಿಸಲು ಹೋಗಿ ವಚನಗಳನ್ನು ಜೊತೆಗೆ ಕಲ್ಲುಸಕ್ಕರೆ ಸಿಹಿ ಒಯ್ದು ಅದನ್ನು ವಿತರಿಸಿ ಬರಬೇಕು.
9. ಅಂದು ಬೆಳಿಗ್ಗೆ ಸಾಮೂಹಿಕವಾಗಿ ಶರಣ ಬಂಧುಗಳೆಲ್ಲ ಸೇರಿ ಅಕ್ಕನಾಗಲಾಂಬಿಕಾ ಸಂಸ್ಮರಣೆ, ಬಸವ ಧರ್ಮ ವಿಜಯೋತ್ಸವವನ್ನು ಆಚರಿಸಬೇಕು.

-ಮಾತಾಜಿ

ಜೂನ್-ಜುಲೈ-ಆಗಸ್ಟ್ ತಿಂಗಳುಗಳಲ್ಲಿ ಬಸವ ಧರ್ಮ ಪೀಠ / ವಿಶ್ವಕಲ್ಯಾಣ ಮಿಷನ್ ಸಂಸ್ಥೆಗೆ ಧನ ದಾಸೋಹ ಮಾಡಿದ ಶರಣ ಬಂಧುಗಳು

ಕೂಡಲ ಸಂಗಮದ ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ

ಶರಣರುಗಳಾದ :

1. ಶರಣ. ಜಯದೇವಪ್ಪ ಮತ್ತು ಶರಣೆ. ರತ್ನಮ್ಮ, ಭದ್ರಾವತಿ
   ಶರಣ. ಶಿವಾನಂದಪ್ಪ ಮತ್ತು ಶರಣೆ. ನಾಗಮ್ಮ, ಭದ್ರಾವತಿ
   ಮತ್ತು ಸಹೋದರರು ಸೇರಿ ಸಿಂಗಲ್ ಕೋಣೆಗೆ — ರೂ. 51000-00
2. ಶರಣ. ಮಹಾಲಿಂಗಪ್ಪ ಮತ್ತು ಶರಣೆ ರತ್ನಮ್ಮ,
   ಭದ್ರಾವತಿ, ಸಿಂಗಲ್ ಕೋಣೆಗೆ — ರೂ. 51000-00

ಬಸವ ಜಯಂತಿಯ ಪುದುವಟ್ಟು 20601-00

ಶ್ರೀ ಬಸವೇಶ್ವರ ಸೇವಾ ಸಮಿತಿಯ
ಶರಣ. ಜಿ.ಎಸ್. ಮುನಿಯಪ್ಪ, ಬೆಂಗಳೂರು.

ಗುರುಕಾಣಿಕೆ

ಶರಣ. ಹೆಚ್.ಎಸ್.ಚನ್ನಬಸವಣ್ಣ, ಜಪಾನ್	ರೂ.	10000-00
ಶರಣೆ. ಜಯಮ್ಮ ಗುರುಸಿದ್ದಪ್ಪ, ಬೆಂಗಳೂರು	ರೂ.	10000-00
ಶರಣೆ. ರತ್ನಮ್ಮ ಮತ್ತು ಮಹಾಲಿಂಗಪ್ಪ, ಭದ್ರಾವತಿ	ರೂ.	5000-00

ದಾಸೋಹ ನಿಧಿಗೆ 1111 ರೂ. ಕೊಟ್ಟವರು.

ಶರಣರುಗಳಾದ :

ಅಂಬುಜಮ್ಮ ಮಲ್ಲಿಕಾರ್ಜುನ, ಶಿವಮೊಗ್ಗ
ಶಾರದಾ ಬಸವರಾಜ್, ಭದ್ರಾವತಿ
ಹೆಚ್. ಎಂ. ಶಂಕರ್, ಭದ್ರಾವತಿ
ಶಕುಂತಲಾ ಎ.ಎಂ.ಚಂದ್ರಶೇಖರಯ್ಯ, ಹಿರಿಯೂರು

ಜನಗಣತಿಯ ಕರಪತ್ರ ಮುದ್ರಣಕ್ಕೆ ಧನ ದಾಸೋಹ ಮಾಡಿದವರು
20000 (ಇಪ್ಪತ್ತು ಸಾವಿರ) ಕರಪತ್ರಕ್ಕೆ 2200 ರೂ. ಕೊಟ್ಟವರು

ಶರಣರುಗಳಾದ :

1. ಪುಷ್ಪಾ ಮತ್ತು ಗುರುಬಸಪ್ಪ ಕಾಟೇರಿ, ನೀಲಗಿರಿ
2. ಹೆಚ್.ಆರ್. ಎಂ. ಭೋಜರಾಜ್, ಹಿಟ್ಟಕಲ್, ನೀಲಗಿರಿ
3. ಸಿ.ಎನ್.ತಿರುನೀಲಕಂಠನ್, ತೂನೇರಿ, ನೀಲಗಿರಿ

10000 (ಹತ್ತು ಸಾವಿರ) ಕರಪತ್ರಕ್ಕೆ 1100 ರೂ. ಕೊಟ್ಟವರು

ಶರಣರುಗಳಾದ :

ಜಿ.ಕಮಲಮ್ಮ ಡಾ॥ ತಿಪ್ಪೇಸ್ವಾಮಿ, ಹಿಂದೂಪುರ
ಗೀತಾ ಡಾ॥ ಶಿವಕುಮಾರ ಸ್ವಾಮಿ, ಹಿಂದೂಪುರ

ಬಸವೇಶ್ವರ ದೇವಸ್ಥಾನ ಟ್ರಸ್ಟ್, ಕೌಜಲಗಿ
ಶ್ರೀ ಶಿವಯೋಗಿ ಮುರುಘೇಂದ್ರಸ್ವಾಮಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ ನಿ. ಅಥಣಿ
ಸುನಾಂದಾ ಶಿವರುದ್ರಪ್ಪ, ಪದ್ಮಾ ನಟೇಶ, ರಾಮಾಪುರ
Veerashaiva Samajam, Dharmavaram region
ಜಿ.ಕೆ. ನಂದಕುಮಾರ್, ಧರ್ಮಾವರಂ
ಶಿವಯೋಗಿ ಶಿವಪುತ್ರಪ್ಪ, ಬೆಳಲದವರ, ಹುಬ್ಬಳ್ಳಿ
ಅನ್ನಪೂರ್ಣ ಬಸವರಾಜ್ ಶಿರಿಯಣ್ಣವರ್, ಹೊಸೂರು
ಶಿವಬಸಪ್ಪ ಸೋಮಲಿಂಗಪ್ಪ ಯರಡಾಲ, ಹೊಸೂರು
ರಾಷ್ಟ್ರೀಯ ಬಸವ ದಳ, ಬೈಲಹೊಂಗಲ
ಎಂ. ವೀರಮಾದು, ಕೊಳ್ಳೆಗಾಲ
ಆರ್.ಸಿ. ಬಾಳೇಕುಂದರಗಿ, ಬೈಲಹೊಂಗಲ
ನಗರ್ತ ಮಂಡಳಿ, ದೊಡ್ಡಬಳ್ಳಾಪುರ
ಎಸ್.ಆರ್. ಶಿವರುದ್ರಪ್ಪ, ಶಿವಕೋಟೆ
ಸ.ವಿ. ವಿಶ್ವೇಶ್ವರಯ್ಯ ಲಿಂಗಾಯತ, ಸಾಸಲು
ರಾಷ್ಟ್ರೀಯ ಬಸವ ದಳ, ಅವರಾದಿ, ಬೆಳಗಾಂವ
ಗುಂಜಹಳ್ಳಿ ರಾಜಶೇಖರಪ್ಪ, ಗಂಗಾವತಿ
ಸುಭಾಷ್‌ಚಂದ್ರ ಸೋಮಣ್ಣಪ್ಪ ಚೇಲಶೆಟ್ಟಿ, ಹಳ್ಳಿಖೇಡ (ಕೆ.)
ಪೂಜ್ಯ ಶ್ರೀ ವಿಜಯ ಮಹಾಂತ ಓಂಕಾರ ರಾಜಯೋಗೀಂದ್ರ ಸ್ವಾಮಿಗಳು
ಶ್ರೀ ಶಿವಲಿಂಗೇಶ್ವರ ಸಂಸ್ಥಾನ ಮಠ, ಖೇಳಗಿ
ಸುಳ್ಳೀಗೂಡು ಗ್ರಾಮದ ಲಿಂಗಾಯತ ಸಮಾಜ, ನೀಲಗಿರಿ
ಶ್ರೀ ವೀರಭದ್ರ ಸ್ವಾಮಿ ದೇವಾಲಯ, ಕೋಯಮತ್ತೂರು
ವೀರಶೈವ-ಲಿಂಗಾಯತ ಎಜುಕೇಷನಲ್ ವೆಲ್‌ಫೇರ್ ಅಸೋಸಿಯೇಷನ್, ಕೊಯಮತ್ತೂರು

5000 (ಐದು ಸಾವಿರ) ಕರಪತ್ರಕ್ಕೆ 650 ರೂ. ಕೊಟ್ಟವರು

ಶರಣರುಗಳಾದ :

ವಾನರ ಆಂಜನಪ್ಪ, ತಿರುಮಲಶೆಟ್ಟ ಹಳ್ಳಿ
ಭದ್ರಯ್ಯ ಮತ್ತು ಮಕ್ಕಳು, ದೊಡ್ಡನಿ, ನೀಲಗಿರಿ
ರಾಷ್ಟ್ರೀಯ ಬಸವ ದಳ, ಗಂಗಾವತಿ
ರಾಜಣ್ಣ ರಾಜಶೇಖರ್ ಚೀಲಶೆಟ್ಟಿ, ಹಳ್ಳಿಖೇಡ (ಕೆ.)
ಶಂಕರರಾವ ಮಲ್ಲಪ್ಪ ನಾಗರೆಡ್ಡಿ, ಖೇರ್ಡಾ
ಡಾ|| ಎ.ಡಿ.ಕೋಲೂರು, ನಾಗನೂರು
ಮಲ್ಲಪ್ಪ ನಿಂಗಪ್ಪ ಕಂಬಿ, ಬೆಟಗೇರಿ
ಡಾ|| ಷಣ್ಮುಖಪ್ಪ ಬಣ್ಣಪ್ಪ ಬನ್ನೂರಿ, ನಾಗನೂರು

ಡಾ|| ಎ.ಸಿ. ನಂಜುಂಡಪ್ಪ, ಬುಕ್ಕಾ ಪಟ್ಟಣಂ
ಗೌಡ ಚನ್ನಬಸಪ್ಪ, ಬುಕ್ಕಾ ಪಟ್ಟಣಂ
ಬಾಳವ್ವ ಮನೋಹರ್ ಮಾಸ್ತಮರಡಿ, ನೇಸರಗಿ
ಚನ್ನಬಸವ ಬಸವರಾಜ ಈಟಿ, ಬೈಲಹೊಂಗಲ
ಮಡಿವಾಳಯ್ಯ ವೀರಯ್ಯ ಪೂಜಾರಿ, ಯರಡಾಲ
ನಾಗಪ್ಪ ಫಕೀರಪ್ಪ ಬೈಲಪ್ಪನವರು, ಯರಡಾಲ
ಬಸಪ್ಪ ದೇಮಪ್ಪ ಬಣಶೆಟ್ಟಿ, ಯರಡಾಲ
ಪಿ.ಸಿ.ಎ.ಆರ್.ಡಿ. ಬ್ಯಾಂಕ್, ಬೈಲಹೊಂಗಲ
ನಾಗಶೆಟ್ಟಿ ಚನ್ನವೀರಪ್ಪ, ರಾಯದುರ್ಗ
ಗೌರಮ್ಮ ಸಿ. ಬಸಪ್ಪ, ಮುತ್ತೂರು
ಜಿ.ಬಸಯ್ಯ, ಅನಂತಪುರ, ಆಂಧ್ರ
ಎಲ್.ನಾಗಣ್ಣ, ಅನಂತಪುರ, ಆಂಧ್ರ
ಈಶ್ವರಪ್ಪ ಬಿನ್ ಹೊನ್ನೂರಪ್ಪ, ರಾಂಪುರ

3000 (ಮೂರು ಸಾವಿರ) ಕರಪತ್ರಕ್ಕೆ 540 ರೂ. ಕೊಟ್ಟವರು

ಶರಣರುಗಳಾದ :

ಶಿವಪುತ್ರ ಕಲ್ಲಪ್ಪ ಅರಭಾವಿ, ಸಂಕೇಶ್ವರ
ಸಂಜಯ ಧರೆಪ್ಪಾ ಚೌಗುಲಾ, ಖಿವಟಕೊಪ್ಪ
ಧರೆಪ್ಪ ಗುರುಲಿಂಗಪ್ಪ ಚೌಗುಲಾ, ಖಿವಟಕೊಪ್ಪ
ಅಪ್ಪಣ್ಣ ಬಸಪ್ಪ ಬಾಗೋಜಿ, ಬೆಟಗೇರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್ ನಿ. ನಾಗನೂರು
ಅಧ್ಯಕ್ಷರು ಮತ್ತು ಸದಸ್ಯರು, ರಾಷ್ಟ್ರೀಯ ಬಸವ ದಳ, ಖಿವಟಕೊಪ್ಪ
ಶ್ರೀಶೈಲ ಮಲ್ಲಪ್ಪ ರಾಚಪ್ಪನವರ್, ಶೇಗುಣಸಿ
ಹೆಚ್.ಎನ್. ಮೂರ್ತಿ, ಹಿಂದೂಪುರ
ಎಂ.ಎಸ್.ರಾಜಶೇಖರಪ್ಪ, ಹಿಂದೂಪುರ
ಸುಭಾಷ್ ಅಣ್ಣಾರಾವ್ ಸಾವಳಗಿ, ಬೆಳಗಾಂವ
ಡಾ|| ಫಕೀರಪ್ಪ ಬಸವಂತಪ್ಪ ಕಾಡನ್ನವರ್, ನೇಸರಗಿ
ಗಂಗಪ್ಪ ಸಿದ್ಧಪ್ಪ ತುರಮರಿ, ಬೈಲಹೊಂಗಲ
ಗಂಗಪ್ಪಣ್ಣ ಗಿರಿಮಲ್ಲಪ್ಪ ಶೆಟಗಾರ್, ಬೈಲಹೊಂಗಲ
ಪಂಚಪ್ಪ ಮಲ್ಲೇಶಪ್ಪ ಬೆಲ್ಲದ, ಬೈಲಹೊಂಗಲ
ಬಸವರಾಜ ವಿರುಪಾಕ್ಷಪ್ಪ ಬೊಬ್ಬಣ್ಣನವರು, ಈಚಲಕರಂಜಿ
ಈರಪ್ಪ ಶಿವಲಿಂಗಪ್ಪ ಇಂಗಳಗಿ, ಯರಡಾಲ
ಶಿವರುದ್ರಪ್ಪ ದೊಡ್ಡಪ್ಪ ರಾಹುತ, ಯರಡಾಲ
ಶ್ರೀಮಂತರಾವ್ ತುಕ್ಕಪ್ಪ ಹುಂಪಳಿ, ಮರಗುತ್ತಿ

ಗುರುಪಾದಪ್ಪ ಭೀಮಣ್ಣ ಚಂದಿ, ಮರಗುತ್ತಿ
ವಿಜಯಕುಮಾರ್ ಮತ್ತು ಸಂಜೀವಕುಮಾರ್ ತಂದೆ ಮಹಾದೇವಪ್ಪ, ಕೇರಿ, ಮರಗುತ್ತಿ
ಶಿವರಾಜ ಕರಬಸಪ್ಪ ಕೋಟಗಿ, ಮೀನಕೇರಾ
ಸ್ವಾಮಿ ವಿವೇಕಾನಂದ ಮತ್ತು ವಿದ್ಯಾನಂದ ತಂದೆ ಮಲ್ಲಿಕಾರ್ಜುನ ಸ್ವಾಮಿ ಮಠಪತಿ, ಬೀದರ
ಸುಭಾಷ್ ಗುರುಪ್ಪ ಬೀರಗಿ, ಬಗದಲ್ -ಮುಂದುವರಿಯುವುದು

1000 ಪ್ರತಿ ಮುದ್ರಣಕ್ಕೆ ಕೊಟ್ಟವರೂ ಇದ್ದಾರೆ. ಪಟ್ಟಿ ತೀರಾ ಉದ್ದವಾಗುವುದೆಂದು 3000 ಪ್ರತಿ ಕೊಟ್ಟವರ ತನಕ ಹೆಸರು ಮುದ್ರಿಸಲಾಗಿದೆ. ದಾನಿಗಳ ಹೆಸರು ಇನ್ನೂ ಇದ್ದರೂ, ಸ್ಥಳಾಭಾವದಿಂದ ಮುದ್ರಿಸಲಾಗಿಲ್ಲ. ಮುಂದಿನ ಸಂಚಿಕೆಯಲ್ಲಿ ಮುದ್ರಿಸಲಾಗುವುದು. ಎಲ್ಲರಿಗೂ ಶುಭಾಹಾರ್ಯಕೆಗಳು.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಧರ್ಮ ಪ್ರಚಾರಕರಿಗೆ ನೆರವು ಧನ ದಾಸೋಹಿಗಳ ಗಮನಕ್ಕೆ

ಆರ್ಥಿಕವಾಗಿ ದುಃಸ್ಥಿತಿಯಲ್ಲಿದ್ದು, ಪ್ರತಿಭೆ-ವಾಗ್ಮಿತ್ವ, ತತ್ತ್ವನಿಷ್ಠೆ ಇರುವ ಕೆಲವು ಶರಣರು ವಿವಿಧ ಸ್ಥಳಗಳಲ್ಲಿ ಸಂಚರಿಸಿ, ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ತಿರುಗಾಡಿ ಧರ್ಮ ಪ್ರಚಾರ ಮಾಡಬೇಕೆಂಬ ಅದಮ್ಯ ಆಸೆ ಉಳ್ಳವರಾಗಿದ್ದಾರೆ. ಗೃಹಸ್ಥರಾದ ಕಾರಣ ಮನೆಯ ಖರ್ಚಿಗಾಗಿ ಅವರು ಹಣದ ಏರ್ಪಾಡು ಮಾಡಬೇಕಾಗುತ್ತದೆ. ಆದ್ದರಿಂದ ಬಸವ ತತ್ತ್ವ ಪ್ರಚಾರವಾಗಬೇಕು ಎಂಬ ಕಳಕಳಿಯುಳ್ಳ ದಾನಿಗಳು ಒಂದು ತಿಂಗಳಿಗೆ 1000 (ಒಂದು ಸಾವಿರ) ರೂಪಾಯಿಯಂತೆ ಒಬ್ಬರಿಗೆ ಕೊಟ್ಟರೆ ಅವರನ್ನು ಧರ್ಮಪ್ರಚಾರಕ್ಕೆ ನಿಯೋಜಿಸಬಹುದು. ನಮ್ಮ ಗಮನದಲ್ಲಿರುವ ಅಂಥ ಶರಣರ ಹೆಸರು, ವಿಳಾಸಗಳನ್ನು ದಾನಿಗಳಿಗೆ ಕೊಡುತ್ತೇವೆ. ಅವರೇ ನೇರವಾಗಿ ಧರ್ಮಪ್ರಚಾರಕರಿಗೆ ಕಳಿಸುವ ವ್ಯವಸ್ಥೆ ಮಾಡಬಹುದು. ಒಂದು ವರ್ಷ, ಆರು ತಿಂಗಳು ಹೀಗೆ ತಮಗೆ ಶಕ್ಯವಿದ್ದಷ್ಟು ಕಾಲಾವಧಿಗೆ ಕೊಡಬಹುದು. ವಿದೇಶಿ ಧರ್ಮಗಳವರು ಹೊರರಾಷ್ಟ್ರಗಳಿಂದ ಹಣವನ್ನು ಪ್ರವಾಹದೋಪಾದಿಯಲ್ಲಿ ಪಡೆದು ಧರ್ಮ ಪ್ರಚಾರಕ್ಕೆ ಬಳಸುತ್ತಾರೆ. ಆರ್ಥಿಕವಾಗಿ ಸಶಕ್ತವಾಗಿಲ್ಲದ ಸ್ವದೇಶಿ ಧರ್ಮ ಪ್ರಚಾರಕ ಸಂಸ್ಥೆಗಳು ಪ್ರಚಾರಕರಿಗೆ ನೆರವು ನೀಡಬೇಕೆಂದರೂ ಸಾಧ್ಯವಾಗದು. ಆದ್ದರಿಂದ ದಾನಿಗಳೇ ನೇರವಾಗಿ ಧರ್ಮಬೋಧಕ ಗೃಹಸ್ಥರಿಗೆ ನೆರವು ನೀಡಲು ಮುಂದೆ ಬಂದರೆ ಒಳ್ಳಿತಾಗುತ್ತದೆ. ಆಸಕ್ತರು ಪತ್ರ ಬರೆದು ಅಥವಾ ಫೋನ್ ಮೂಲಕ ತಿಳಿಸಿರಿ.

-ಮಾತಾಜಿ

ವಿಶ್ವಕಲ್ಯಾಣ ಮಿಷನ್(ರಿ.)
ಬಸವ ಮಂಟಪ, 2035, 20ನೇ ಮೇನ್, 2ನೇ ಬ್ಲಾಕು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 3325335/3322790


ಭಾರತದ ಜನಗಣತಿ -2001 ಹಾಗೂ ಲಿಂಗಾಯತ ಧರ್ಮೀಯರು

ಲೇಖಕರು : ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ

1/4 ಡೆಮ್ಮಿ ಆಕಾರದ 24 ಪುಟಗಳ ವಿಶೇಷ ಮಾಹಿತಿಯುಳ್ಳ ಪುಸ್ತಕ. 1948ನೆಯ ಇಸವಿಯ ಸೆನ್ಸಸ್ ಆಕ್ಟ್ ಪ್ರಕಾರ ಭಾರತೀಯರಿಗೆ ಜನಗಣತಿಯಲ್ಲಿ ಇರುವ ಅವಕಾಶಗಳ ವಿವರ, ಇಲಾಖೆ ಗಣತಿದಾರರಿಗೆ ನೀಡುವ ಸೂಚನೆ ಮುಂತಾಗಿ ಒಳಗೊಂಡಿದೆ. ಪುಸ್ತಕದ ಬೆಲೆ 6 ರೂ. ಅಂಚೆ ವೆಚ್ಚ 4 ರೂ. ಕಳಿಸಿ ಪುಸ್ತಕ ತರಿಸಿಕೊಂಡು ಓದಿರಿ. ಹೆಚ್ಚಿನ ಪುಸ್ತಕ ತರಿಸಿಕೊಂಡು ಇತರರಿಗೂ ಕೊಟ್ಟು ಓದಿಸಿ ಜಾಗೃತಿ ಉಂಟುಮಾಡಿರಿ. **ವಿಶ್ವಕಲ್ಯಾಣ ಮಿಷನ್**, ಬಸವ ಮಂಟಪ, 2035, 20ನೆಯ ಮೇನ್, 2ನೇ ಬ್ಲಾಕ್; ರಾಜಾಜಿನಗರ. ಬೆಂಗಳೂರು-560010. ದೂರವಾಣಿ : 3325335/3322790



ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ದಿ. 19-8-2000ದಂದು ರಾಷ್ಟ್ರೀಯ ಬಸವ ದಳ ಟ್ರಸ್ಟ್‌ನವರು ಏರ್ಪಡಿಸಿದ್ದ ಬಸವ ಲಿಂಗೈಕ್ಯ ಸಂಸ್ಮರಣ ಕಾರ್ಯಕ್ರಮಕ್ಕೆ ಆಗಮಿಸಿದ ಪೂಜ್ಯ ಮಾತಾಜಿಯವರಿಗೆ ಭಕ್ತಿಪೂರ್ವಕ ಸ್ವಾಗತ



ಪೂಜ್ಯ ಮಾತಾಜಿಯವರಿಂದ ಉದ್ಘಾಟನೆ.
ಎಡದಿಂದ ಬಲಕ್ಕೆ ನಗರ ಯೋಜನಾ ನಿರ್ದೇಶಕ ಶರಣ ಎಸ್.ಸದಾಶಿವಪ್ಪ, ಜಿಲ್ಲಾಧಿಕಾರಿ ಶರಣ ಪಿ.ಎಸ್.ಶ್ರೀನಿವಾಸಾಚಾರಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶರಣ ಎಂ. ನಾಗೇಂದ್ರರಾವ್, ಶಿವಗಂಗಮ್ಮ, ಅನ್ನಪೂರ್ಣಮ್ಮ, ಯೋಗೀಶ್, ಲಕ್ಷ್ಮಿಲತಾ

ಕಲ್ಯಾಣ ಕಿರಣ CPMG/KA/BGW-30 ಸೆಪ್ಟೆಂಬರ್ - 2000
R.No. 19980/70

